ಖಂಡ ಖಂಡವಾಗಿ ವಿಧೇಯಕವನು ಪರ್ಯಾಲೋಚಿಸುವುದು

ಖಂಡ ೨ ಮತ್ತು ೩

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ ''ಖಂಡ ೨ ಮತ್ತು ೩ ಎರೆಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತವೆ.''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ ೨ ಮತ್ತು ೩ನ್ನು ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ ೧ ಇತ್ಯಾದಿ

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ ''ಮೊದಲನೇ ಖಂಡ, ದೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ.''

ಪ್ರಸ್ತಾವವನ್ನು ಅಂಗೀಕರಿಸಲಾಯಿತು

(ಮೊದಲನೇ ಖಂಡ, ಧೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ಈ ವಿಧೇಯಕಕ್ಕೆ ಸೇರಿಸಲಾಯಿತು).

ಪ್ರಸ್ತಾವದ ಅಂಗೀಕಾರ

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಮಂತ್ರಿಗಳು) (ಸಾರಿಗೆ ಸಚಿವರ ಪರವಾಗಿ).—ಮಾನ್ಯ ಅಧ್ಯಕ್ಷರೇ, ೧೯೮೮ನೇ ಇಸವಿಯ ಕರ್ನಾಟಕ ಮೋಟಾರು ವಾಹನಗಳ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ ''೧೯೮೮ನೇ ಇಸವಿಯ ಕರ್ನಾಟಕ ಮೋಟಾರು ವಾಹನಗಳ ತಿದ್ದುಪಡಿ ವಿಧೇಯಕವನ್ನು ಅಂಗೀಕರಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

ಖಾಸಗೀ ಕಾರ್ಯಕಲಾಪಗಳು

ಮದ್ಯಪಾನಕ್ಕೆ ಸಂಬಂಧಿಸಿದಂತೆ ಅದರ ನಿಷೇಧಕ್ಕೆ ಒಂದು ಸಮಿತಿಯ ನೇಮಕದ ಕುರಿತು

೧೯೮೬ನೇ ಫೆಬ್ರುವರಿ ೭ ರಂದು ಶ್ರೀ ಕೆ. ಹೆಚ್. ಶ್ರೀನಿವಾಸ್‌ರವರಿಂದ ಮಂಡಿಸಲಾದ ಕೆಳಕಂಡ ನಿರ್ಣಯದ ಮೇಲೆ ಚರ್ಚೆ ಮುಂದುವರಿಸುವುದು.

''ಮದ್ಯಪಾನಕ್ಕೆ ಸಂಬಂಧಿಸಿದಂತೆ ರಾಜ್ಯದಲ್ಲಿನ ಪ್ರಸ್ತುತ ನೀತಿ ಹಾಗೂ ವ್ಯವಸ್ಥೆ ಶ್ರೀಸಾಮಾನ್ಯರ ಹಾಗೂ ಬಡ ಜನರ ಹಿತಕ್ಕೆ ಮಾರಕವಾಗಿ ಪರಿಣಮಿಸಿರುವುದರಿಂದ ಈಗಾಗಲೇ ನಡೆದಿರುವ ದುರಂತಗಳು ಅವುಗಳ ಬಗ್ಗೆ ನೇಮಿಸಲ್ಪಟ್ಟ ವಿಚಾರಣಾ ಆಯೋಗಗಳ ಶಿಫಾರಸ್ಸುಗಳ ಹಿನ್ನೆಲೆಯಲ್ಲಿ ಬೇರೆ ಬೇರೆ ರಾಜ್ಯಗಳಲ್ಲಿ ಇರುವ ನೀತಿ ಹಾಗೂ ವ್ಯವಸ್ಥೆಯನ್ನು ಅಧ್ಯಯನ ಮಾಡಿ ಪಾನನಿರೋಧ ಸೇರಿದಂತೆ ಬದಲಿ ನೀತಿ ಹಾಗೂ ವ್ಯವಸ್ಥೆಯ ಸಾಧ್ಯಾಸಾಧ್ಯತೆಯನ್ನು ಪರಿಶೀಲಿಸಿ ಸೂಕ್ತ ಶಿಫಾರಸ್ಸು ಮಾಡಲು ವಿಧಾನ ಮಂಡಲದ ಪ್ರತಿನಿಧಿಗಳನ್ನು ಒಳಗೊಂಡ ಒಂದು ಉನ್ನತಾಧಿಕಾರಿ ಸಮಿತಿಯನ್ನು ನೇಮಿಸಬೇಕೆಂದು ಈ ಸಭೆಯು ನಿರ್ಣಯಿಸುತ್ತದೆ.

ಅಧ್ಯಕ್ಷರು.—ಈ ಖಾಸಗೀ ನಿರ್ಣಯದ ಬಗ್ಗೆ ಇದುವರೆವಿಗೂ ಸುಮಾರು ೧೩ ಜನ ಮಾನ್ಯ ಸದಸ್ಯರುಗಳು ಮಾತನಾಡಿದ್ದಾರೆ. ಈಗ ಯಾರಾದರೂ ಮಾತನಾಡುವವರಿದ್ದರೆ ಮಾತನಾಡಬಹುದು.

ಶ್ರೀ ಬಿ. ಬಸವಲಿಂಗಪ್ಪ (ಯಲಹಂಕ).—ಮಾನ್ಯ ಅಧ್ಯಕ್ಷರೇ ಮಾನ್ಯ ಸದಸ್ಯರಾದ ಕೆ. ಹೆಚ್. ಶ್ರೀನಿವಾಸ್‌ರವರಿಗೆ ವಂದನೆಗಳನ್ನು ಅರ್ಪಿಸಬೇಕು, ಕಾರಣ ಅವರು ಸಕಾಲಿಕವಾದ ಖಾಸಗೀ ನಿರ್ಣಯವನ್ನು ತಂದಿದ್ದಾರೆ. ಇದರ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ ಎಂದು ನಾನು ತಿಳಿದು ಕೊಂಡಿದ್ದೇನೆ. ನಾನು ಅಸೆಂಬ್ಲಿ ಸದಸ್ಯನಾಗಿ ಬಂದಿದ್ದಂತಹ ಕಾಲದಿಂದಲೂ ಈ ರೀತಿಯ ಚರ್ಚೆ ನಡೆಯುತ್ತಿದೆ. ಈ ನಿರ್ಣಯದ ಮೇಲೆ ಚರ್ಚೆ ನಡೆದರೂ ಏನೇನು ಕೆಲಸ ಮಾಡಿದ್ದೇವೆನ್ನುವುದು ನಮ್ಮ ಕಣ್ಣು ಮುಂದೆ ಇದೆ. ಹಿಂದೆ ಈ ಒಂದು ಪಾನನಿರೋಧ ಜಾರಿಗೆ ತರಬೇಕು ಜಾರಿಗೆ ತರ ಬಾರದು ಎನ್ನುವ ಬಗ್ಗೆ ಸಾಕಷ್ಟು ಚರಿತ್ರೆ ಇದೆ. ಶ್ರೀಮಾನ್ ನಿಜಲಿಂಗಪ್ಪನವರು ಮುಖ್ಯಮಂತ್ರಿ ಗಳಾಗಿದ್ದಂಥ ಕಾಲದಲ್ಲಿ ಪಾನನಿರೋಧ ಜಾರಿಗೆ ತರಬೇಕೆ? ಬೇಡವೇ ಎನ್ನುವ ಬಗ್ಗೆ ಚರ್ಚೆ ನಡೆಯಿತು. ಆಗ ಆ ಸರ್ಕಾರ ಒಂದು ನಿಲುವು ತೆಗೆದುಕೊಂಡಿತು, ಏನೆಂದರೆ ಪಾನನಿರೋಧ ಜಾರಿಗೆ ತರುವುದು ಬೇಡವೆಂದು ಆಗ ಮಾನ್ಯ ರಾಚಯ್ಯನವರು ಮಂತ್ರಿಗಳಾಗಿದ್ದರು. ಅವರು ತಮ್ಮ ತಾಲ್ಲೂಕಿನ ಚಾಮರಾಜನಗರ ಮತ್ತು ಕೊಳ್ಳೇಗಾಲಗಳಿಗೆ ಸಂಬಂಧಪಟ್ಟಹಾಗೆ ಪಾನನಿರೋಧ ಜಾರಿಗೆ ತರಿಸಿಕೊಂಡರು. ಇನ್ನುಳಿದ ಕಡೆಗಳಿಲೆಲ್ಲಾ ಬೇಡವೆಂದು ಮಾಡಿದರು.

ಶ್ರೀ ಬಿ. ರಾಚಯ್ಯ.—ಆ ಆರೋಪಣೆ ನನಗೆ ಸಲ್ಲತಕ್ಕಂಥಾದ್ದು ಅಲ್ಲ. ಇಡೀ ರಾಜ್ಯದಲ್ಲಿ ತರುವುದಕ್ಕೆ ಸಾಧ್ಯವಿತ್ತು. ಆದರೆ ತಮ್ಮ ಮನಸ್ಸು ನೋಯಿಸತಕ್ಕಂಥಾದ್ದು ಸರಿಯಲ್ಲವೆಂದು ಜಾರಿಗೆ ತರಲಿಲ್ಲ,

ಶ್ರೀ ಬಿ. ಬಸವಲಿಂಗಪ್ಪ.—ಅವರು ಹೇಳಿದ್ದುದು ಸರಿ. ಆಗ ತಮ್ಮ ಮಾತು ಯಾರು ಕೇಳು ತ್ತಿರಲಿಲ್ಲ. ಅದಕ್ಕೆ ಜಾರಿಗೆ ತಂದರು.

ಶ್ರೀ ಬಿ. ರಾಚಯ್ಯ.—ತಾವು ಡೆಪ್ಯುಟಿ ಚೀಫ್ ಮಿನಿಸ್ಟರ್ ಆಗಿದ್ದವರು. ಆಗ ತಮ್ಮ ಮಾತು ಯಾರು ಕೇಳುತ್ತಿದ್ದರು. ಆ ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಮೆಜಾರಿಟಿ ಓಪಿನಿಯನ್ ಯಾವ ರೀತಿ ಬರುತ್ತದೆಯೋ ಆ ರೀತಿ ಮಾಡಬೇಕು.

ಶ್ರೀ ಬಿ. ಬಸವಲಿಂಗಪ್ಪ.—ತಾವು ಏನು ವಿಷಯವನ್ನು ಸ್ಪಷ್ಟೀಕರಿಸುತ್ತಿದ್ದೀರೋ ಎಂಬು ದಯಮಾಡಿ ಹೇಳುತ್ತೀರಾ? ನೀವು ಹೇಳಿದ್ದನ್ನೇ ನಾನು ಹೇಳುತ್ತಿದ್ದೇನೆ ಸ್ವಾಮಿ. ನಾನು ಏನು ಹೇಳುತ್ತಿದ್ದೇನೆ ಎಂದರೆ, ಬ್ರಾಂದಿ ಅಂಗಡಿಗಳಿಗೆ ಲೈಸನ್ಸ್‌ಗಳನ್ನು ಸರ್ಕಾರ ಕೊಡುತ್ತಿದೆ. ಸರ್ಕಾರಕ್ಕೆ ಹಣ ಬೇಕೆಂದು ಬ್ರಾಂದಿ ಅಂಗಡಿಗಳಿಗೆ ಲೈಸನ್ಸ್‌ಗಳನ್ನು ಕೊಡುವುದನ್ನು ಸರ್ಕಾರ ಜಾರಿಗೆ ತಂದಿದೆ. ಪಾನ ನಿರೋಧ ಯಾರಿಗೂ ಬೇಕಾಗಿಲ್ಲ. ಮೊದಲು ಒಂದು ತಾಲ್ಲೂಕಿನಲ್ಲಿ ಪಾನ ನಿರೋಧ ಜಾರಿಯಲ್ಲಿ ಇತ್ತು. ಈಗ ಆ ತಾಲ್ಲೂಕಿಗೂ ಲೈಸನ್ಸ್‌ಗಳನ್ನು ಕೊಡುವುದನ್ನು ವಿಸ್ತರಿಸಿದ್ದಾರೆ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಈಗ ಜಮಖಂಡಿ ತಾಲ್ಲೂಕಿನಲ್ಲಿ ಪಾನ ನಿರೋಧ ಕಾನೂನನ್ನು ಇಟ್ಟಿದ್ದಾರೆ. ಆದರೆ, ಈ ಕಾನೂನನ್ನು ರಿಲ್ಯಾಕ್ಸ್ ಸಡಿಲ ಮಾಡಿದ್ದಾರೆ. ತಾಂತ್ರಿಕವಾಗಿ ಅಲ್ಲಿ ಪಾನ ನಿರೋಧ ಜಾರಿಯಲ್ಲಿ ಇಟ್ಟಿದ್ದಾರೆ. ಪಾನ ನಿರೋಧ ಕಾನೂನು ಇದೆ. ಆದರೆ, ಅದರ ಅಡಿಯಲ್ಲಿ ಎಲ್ಲಾ ರಿಲ್ಯಾಕ್ಸ್ ಮಾಡಿದ್ದಾರೆ.

ಶ್ರೀ ಬಿ. ಬಸವಲಿಂಗಪ್ಪ.—ಹಿಂದೆ ಕಾಂಗ್ರೆಸ್ ಸರ್ಕಾರ ಇತ್ತು, ಇವೊತ್ತು ಜನತಾ ಸರ್ಕಾರ ಇದೆ ಎಂದು ನಾನು ಹೇಳುತ್ತಿಲ್ಲ. ಕಾಂಗ್ರೆಸ್ ಸರ್ಕಾರದವರು ಸ್ವಾತಂತ್ರ್ಯ ಹೋರಾಟ ಪೂರ್ವದಲ್ಲಿ ಪಾನ ನಿರೋಧವನ್ನು ಜಾರಿಗೆ ತರಬೇಕೆಂದು ಒತ್ತಾಯ ಮಾಡಿದ್ದರು. ಈ ವಿಷಯ ತಮಗೂ ಗೊತ್ತಿದೆ, ಕಾಂಗ್ರೆಸ್ ಸರ್ಕಾರವು ಪಾನ ನಿರೋಧವನ್ನು ರಾಷ್ಟ್ರದಲ್ಲಿ ಜಾರಿಗೆ ತರಬೇಕೆಂದು ಮಾಡಿದ್ದರು. ಆದರೆ, ಪೂರ್ಣವಾಗಿ ಪಾನ ನಿರೋಧವನ್ನು ರಾಷ್ಟ್ರದಲ್ಲಿ ತರಲಿಕ್ಕೆ ಆಗಲಿಲ್ಲ. ಸರ್ಕಾರಕ್ಕೆ ಹಣ ಬೇಕಾದ ಉದ್ದೇಶ ಇದ್ದುದರಿಂದ ಪಾನ ನಿರೋಧ ಜಾರಿಗೆ ತರುವುದಕ್ಕಾಗಲಿಲ್ಲ, ಕಾಂಗ್ರೆಸ್ ಸರ್ಕಾರ ಇದ್ದಾಗ ಎಷ್ಟು ಬ್ರಾಂದಿ ಶಾಪ್‌ಗಳನ್ನು ತೆರೆದರೋ ಅದಕ್ಕಿಂತ ಹೆಚ್ಚು ಬ್ರಾಂದಿ ಶಾಪ್‌ಗಳನ್ನು ಇವರು ತೆರೆದಿದ್ದಾರೆಂದು ಅಂಕಿ ಅಂಶಗಳನ್ನು ನೋಡಿದರೆ ಗೊತ್ತಾಗುತ್ತದೆ. ಕಾಂಗ್ರೆಸ್ ಸರ್ಕಾರ ಇಷ್ಟೊಂದು ಪ್ರಮಾಣದಲ್ಲಿ ಶಾಪ್‌ಗಳನ್ನು ಮಾಡುವುದಕ್ಕೆ ಹೋಗಲಿಲ್ಲ. ಕಾಂಗ್ರೆಸ್ ಸರ್ಕಾರದವರು ಎಷ್ಟು ಮಿತಿಯಲ್ಲಿ ಬ್ರಾಂದಿ ಶಾಪ್‌ಗಳನ್ನು ತೆರೆಯಬೇಕಾಗಿತ್ತೋ ಆ ಮಿತಿಯಲ್ಲಿ ಮಾತ್ರ ತೆರೆಯ ಲಾಗಿತ್ತು. ಆದಾಯದ ಮೇಲೆ ಕಣ್ಣಿಟ್ಟು ಕಾಂಗ್ರೆಸ್ ಸರ್ಕಾರದವರು ಕೆಲಸ ಮಾಡಲಿಲ್ಲ. ಜನತಾ ಸರ್ಕಾರ ಆಡಳಿತಕ್ಕೆ ಬಂದ ಮೇಲೆ ಪ್ರತಿಯೊಂದು ಹಳ್ಳಿಗಳಲ್ಲೂ ಬ್ರಾಂದಿ ಶಾಪ್‌ಗಳು ಆಗಿವೆ.

ಬೆಂಗಳೂರು ನಗರ ಒಂದರಲ್ಲೇ 2 ಸಾವಿರ ಬ್ರಾಂದಿ ಅಂಗಡಿಗಳು ಇವೆ. ಈ ಅಂಗಡಿಗಳ ಜೊತೆಗೆ ಹೆಂಡದ ಅಂಗಡಿ ಮತ್ತು ಸಾರಾಯಿ ಅಂಗಡಿಗಳು ಬೇರೆ ಇವೆ. ಹಳ್ಳಿಗಳ ಮಟ್ಟದಲ್ಲೂ ಕೂಡ ಈ ಬ್ರಾಂದಿ ಅಂಗಡಿಗಳು ಇಲ್ಲದೆ ಇಲ್ಲ. ತಾಲ್ಲೂಕು ಮಟ್ಟದಲ್ಲಿ ಈ ಹಿಂದೆ ೧೦ ಬ್ರಾಂದಿ ಅಂಗಡಿಗಳು ಇದ್ದರೆ, ಈಗ ೧೦೦ ಅಂಗಡಿಗಳು ಇರುತ್ತವೆ. ಹೋಬಳಿ ಹೆಡ್ ಕ್ವಾರ್ಟರ್‌ನಲ್ಲಿ ಮೊದಲು ನಾಲ್ಕು ಅಥವಾ ಐದು ಬ್ರಾಂದಿ ಅಂಗಡಿಗಳು ಇದ್ದರೆ, ಈಗ ಹತ್ತು ಅಥವಾ ಹದಿನೈದು ಬ್ರಾಂದಿ ಅಂಗಡಿಗಳು ಇವೆ.

ಶ್ರೀ ಬಿ. ರಾಚಯ್ಯ.—ನಾನು ಮಂತ್ರಿ ಆಗಿಲ್ಲದಿದ್ದಾಗ ಮಾನ್ಯ ಬಸವಲಿಂಗಪ್ಪನವರು ಮತ್ತು ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಗುಂಡೂರಾಯರ ಮಂತ್ರಿಮಂಡಲದಲ್ಲಿ ಸಚಿವರಾಗಿದ್ದರು. ಅವರೇ ಪಾನ ನಿರೋಧವನ್ನು ಜಾರಿಗೆ ತರಬಹುದಾಗಿತ್ತು. ಮಾನ್ಯ ಅರಸುರವರ ಕಾಲದಲ್ಲೂ ಸಹ ಪಾನ ನಿರೋಧದ ಕೆಲಸವನ್ನು ಮಾಡಲಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅವರ ಕಾಲದಲ್ಲಿ ಮಾಡಿಲ್ಲ, ಇವರ ಕಾಲದಲ್ಲಿ ಮಾಡಿಲ್ಲವೆಂದು ಹೇಳುವುದು ಸರಿಯಲ್ಲ. ನಮ್ಮ ಕಾಲದಲ್ಲಿ ನಾವು ಏನು ಮಾಡಿದ್ದೆವು, ನಿಮ್ಮ ಕಾಲದಲ್ಲಿ ಏನು ಮಾಡಿದ್ದೀರಿ ಎನ್ನುವ ಬಗ್ಗೆ ಒಂದು ವೈಟ್ ಪೇಪರ್‌ನ್ನು ಬೇಕಾದರೆ ಪಬ್ಲಿಕ್ ಮಾಡೋಣ. ಸುಮ್ಮನೆ ಇಲ್ಲಿ ವಾದ ಮಾಡುವುದು ಬೇಡ.

ಶ್ರೀ ಬಿ. ರಾಚಯ್ಯ.—ಕುಡಿಯಬೇಡಿರಿ ಎಂದು ಬಾಯ್-ಕಾಟ್ ಮಾಡಿದರೆ ನನ್ನದೇನು ಅಭ್ಯಂತರವಿಲ್ಲ. ಆದರೆ, ನೀವು ಇದ್ದಾಗ ಏನು ಮಾಡಿದಿರಿ ಎಂದು ಕೇಳಿದೆ ಅಷ್ಟೇ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಾವು ಆ ಕಡೆ ಕುಳಿತರೆ ಹಾಗೆಯೇ ಹೇಳುವುದಿಲ್ಲ.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ರಾಚಯ್ಯನವರಿಗೆ ಯಾವ ಕಡೆ ಚುಚ್ಚುತ್ತಿದೆ ಎಂದು ಕಾಣುತ್ತಿಲ್ಲ. ತಾವು ಕುಡಿಯುವುದಿಲ್ಲ. ನೀವು ಏಕೆ ಇದರ ಬಗ್ಗೆ ಮಾತನಾಡುತ್ತೀರಿ? ಕುಡಿಯುವ ಅಭ್ಯಾಸ ಇದ್ದವರು ಮಾತನಾಡಲಿ. ಇವತ್ತು ಏನಾಗಿದೆ ಎಂದರೆ, ಮಾನ್ಯ ಮಂತ್ರಿಗಳಾದ ಶ್ರೀಮಾನ್ ಜೆ. ಹೆಚ್. ಪಟೇಲರು ಬಂದರು, ಅವರು ಇದರ ಮೇಲೆ ಮಾತನಾಡುವುದಕ್ಕೆ ಸರ್ವ ಅಧಿಕಾರ ಉಂಟು. ಅವರು ಮಾತನಾಡಲೇ ಬೇಕು. ಅದಕ್ಕೆ ಕಾರಣ ಬೇಡ.

ಶ್ರೀ ಬಿ. ಬಸವಲಿಂಗಪ್ಪ.—ಈಗ ಮಾನ್ಯ ಜೆ. ಹೆಚ್. ಪಟೇಲ್‌ರವರು ಬರುತ್ತಾ ಇದ್ದಾರೆ. ಮಾನ್ಯ ಮಂತ್ರಿಗಳವರಿಗೆ ಇದರ ಮೇಲೆ ಮಾತನಾಡಲಿಕ್ಕೆ ಸರ್ವ ಅಧಿಕಾರ ಉಂಟು. ಹಕ್ಕೂ ಉಂಟು. ಅವರು ಮಾತನಾಡಲೇ ಬೇಕು, ಮಾತನಾಡುತ್ತಾರೆ. ಆದರೆ ಅದು ಏಕೆ ಎಂದು ಕಾರಣ ಕೇಳ ಬೇಡಿ, ನಿಮಗೂ ಗೊತ್ತು, ಅವರಿಗೂ ಗೊತ್ತು.

ಶ್ರೀ ಬಿ. ರಾಚಯ್ಯ.—ಹಾಗಾದರೆ ನಾನು ಹೋಗುತ್ತೇನೆ......

ಶ್ರೀ ಬಿ. ಬಸವಲಿಂಗಪ್ಪ.—ಇಲ್ಲ ಸ್ವಾಮಿ, ತಾವು ಕುಳಿತುಕೊಳ್ಳಬೇಕು ಬರೇ ಲಾಭಕ್ಕಾಗಿ, ಆದಾಯಕ್ಕಾಗಿ ಈ ಅಬಕಾರಿ ಇಲಾಖೆ ಏನಿದೆ, ಅದಕ್ಕೆ ಇಲ್ಲದ ಕೆಲಸ ಜಾಸ್ತಿ ಕೊಟ್ಟಿದ್ದೀರಿ. ಅದಕ್ಕೆ ಕಾನೂನು ವಿಪರೀತ ಮಾಡಿದ್ದೀರಿ. ಮತ್ತೆ ಎರಡು ಮೂರು ವರ್ಷಗಳಿಂದ ಈ ಮಾತನ್ನು ಹೇಳುವಾಗ ಮಾನ್ಯ ಬಂಗಾರಪ್ಪನವರು ಇರಬೇಕಾಗಿತ್ತು. ಅವರು ಕುಡಿಯದೇ ಹೋದರೂ ಕೂಡ ಈ ವಿಷಯದಲ್ಲಿ ಅವರು ಪ್ರವೀಣರಿದ್ದಾರೆ. ಹಾಗೆಯೇ ಮಾನ್ಯ ಜಾಲಪ್ಪನವರೂ ಕೂಡ ಅಷ್ಟೇ ಪ್ರವೀಣರು.

ಶ್ರೀ ಆರ್. ಎಲ್. ಜಾಲಪ್ಪ.—ಏನು ಸ್ವಾಮಿ? ನಾನು ಆದರಲ್ಲಿ ಪ್ರವೀಣ ಎಂದು ನಿಮಗೆ ಹೇಗೆ ಗೊತ್ತು?

ಶ್ರೀ ಬಿ. ಬಸವಲಿಂಗಪ್ಪ.—ಇದನ್ನೆಲ್ಲಾ ಇಲ್ಲಿ ಹೇಳುವುದು ಬೇಡ......

ಶ್ರೀ ಕೆ. ಎಚ್. ಶ್ರೀನಿವಾಸ್.—ಮಾನ್ಯ ಜಾಲಪ್ಪನವರು ಮಂತ್ರಿಪದವಿಗೆ ರಾಜೀನಾಮೆ ಕೊಟ್ಟು ವ್ಯಾಪಾರ ಮಾಡುತ್ತೇನೆ ಎಂದು ಹೇಳುತ್ತಾ ಇದ್ದರು.

ಶ್ರೀ ಬಿ. ಬಸವಲಿಂಗಪ್ಪ.—ಆದಾಯಕ್ಕಾಗಿ, ಬ್ರಾಂದಿ, ಶೇಂದಿ, ಸಾರಾಯಿ, ಎಂದು ಸಾವಿರಾರು ಸಂಖ್ಯೆಯಲ್ಲಿ ಅಂಗಡಿಗಳಿಗೆ ಲೈಸನ್ಸ್‌ನ್ನು ಕೊಟ್ಟಿದ್ದೀರಿ. ಚುನಾವಣೆ ಬಂತೆಂದರೆ ಹಳ್ಳಿಗಳಲ್ಲಿ ಕೂಡ ಕುಡಿಯದೇ ಇರತಕ್ಕಂಥ ರಾಜಕಾರಣಿಗಳೇ ಇಲ್ಲ. ಎಲ್ಲರೂ ಕುಡಿಯುತ್ತಾರೆ.

ಶ್ರೀ ಬಿ. ಜಿ. ಕೊಟ್ರಪ್ಪ.—ಹಾಗೆ ಕುಡಿಯುವ ಚಟ ಇದ್ದವರಿಗೆ, ಕುಡಿಯಲು ದೂರ ಹೋಗುವುದು ಬೇಡ ಎಂದು ಅಲ್ಲಲ್ಲಿ ಹತ್ತಿರವೇ ಅಂಗಡಿಗಳನು ಮಾಡಿದೇವೆ.

ಶ್ರೀ ಬಿ. ಬಸವಲಿಂಗಪ್ಪ.—ಚುನಾವಣೆಯ ಸಂದರ್ಭಗಳಲ್ಲಿ, ಅದು ಸಣ್ಣ ಚುನಾವಣೆಯೇ ಆಗಲಿ, ದೊಡ್ಡ ಚುನಾವಣೆಯೇ ಆಗಲಿ, ಅಲ್ಲಿಯೂ ಇದೇ ಕೆಲಸ. ಲಾರಿಗಳಲ್ಲಿ ಬ್ರಾಂದಿಯನ್ನು ಸಾರಾಯಿಯನ್ನು ತುಂಬಿಸಿಕೊಂಡು ಹೋಗಿ ಕೊಟ್ಟಿರುವುದನ್ನು ನಾನು ನೋಡಿದ್ದೇನೆ. ಚುನಾವಣೆ ಕಾಲದಲ್ಲಿ ನಾವುಗಳು ರಾಜಕೀಯ ಧ್ಯೇಯ ಧೋರಣೆಗಳ ಬಗ್ಗೆ ವಿಶ್ವಾಸ ಇಟ್ಟುಕೊಂಡಿದ್ದೇವೆ. ಹಾಗೆಯೇ ಅದನ್ನು ನಾವು ಸ್ವಾರಜನಿಕವಾಗಿ ವ್ಯಕ್ತಪಡಿಸುತ್ತಾ ಇದ್ದೇವೆ. ಆದರೆ ಯಾರೂ ಹಾಗೆ ನಡೆಸಿಕೊಳ್ಳುತ್ತಾ ಇಲ್ಲ. ಈವೊತ್ತಿನ ದಿವಸ ಕುಡಿಯದೇ ಇರತಕ್ಕಂಥವರನ್ನು ನಾವು ಹುಡುಕಿಕೊಂಡು ಹೋಗಬೇಕಾಗಿದೆ. ಎಲ್ಲವೂ ಸರಕಾರಿ ದುಡ್ಡಿನಲ್ಲಿಯೇ, ಹೊರತು ಅವರವರ ಸ್ವಂತ ದುಡ್ಡಿನಲ್ಲಿ ಕುಡಿಯುವುದಿಲ್ಲ.

ಇಂಥ ಸಂದರ್ಭದಲ್ಲಿ ನಮ್ಮ ರಾಜಕೀಯ ಜೀವನ ಶುದ್ಧವಾಗಿರಬೇಕು. ನಮ್ಮ ನಡೆನಡಿಗಳು ಜನಗಳಿಗೆ ಮಾದರಿಯಾಗಿರುವಂತೆ ನಾವು ಜೀವನ ಮಾಡಬೇಕು. ಆದುದರಿಂದ ರಾಜಕಾರಣಿಗಳು, ಯಾವ ಪಕ್ಷ ಅಧಿಕಾರಕ್ಕೆ ಬರುತ್ತದೋ ಅಂತಹವರು ಒಳ್ಳೆಯ ಧ್ಯೇಯಧೋರಣೆಗಳನ್ನು ಅನುಷ್ಠಾನಕ್ಕೆ ತರಬೇಕು.

ಜನತಾ ಪಕದವರು ೧೯೭೭ನೇ ಇಸವಿಯಲ್ಲಿ ಮಹಾತ್ಮಾಗಾಂಧೀಜಿಯವರ ಸಮಾಧಿಗೆ ಹೋಗಿ ಕಟ್ಟೆಯನ್ನು ಮುಟ್ಟಿ, ಬಡಿದು, ''ನಾವು ಹೇಳುವುದನ್ನು ಜಾರಿಗೆ ಕೊಡುತ್ತೇವೆ'' ಎಂದು ಶಪಥ ತೆಗೆದುಕೊಂಡರು. ಆದರೆ ಅವರು ಕೃತಿಯಲ್ಲಿ ಬೇರೆಯದನ್ನೇ ಮಾಡಿದರು. ನನಗನ್ನಿಸುತ್ತದೆ. ಎಲ್ಲಾ ರಾಜಕಾರಣಿಗಳು ಅಧಿಕಾರಕ್ಕೆ ಬರುವುದಕ್ಕೆ ಮುಂಚಿತವಾಗಿ, ಎಲ್ಲರೂ ಆಕಾಶದಿಂದ ತತ್ವಗಳನ್ನು ಹೇಳುತ್ತಾರೆ. ಹಾಗೆ ಮಾಡುತ್ತೇವೆ ಹೀಗೆ ಮಾಡುತ್ತೇವೆ ಎಂದೆಲ್ಲಾ ಹೇಳುತ್ತಾರೆ ಅಧಿಕಾರಕ್ಕೆ ಬಂದ ನಂತರ ಎಲ್ಲವನ್ನೂ ಮರೆತು ಬಿಡುತ್ತಾರೆ. ಹೀಗೆಯೇ ಜನತಾ ಪಕ್ಷದವರು ಮಾಡಿದರು. ಇವರೂ ಕೂಡ ಮಹಾತ್ಮಾಗಾಂಧೀಜಿಯವರು ಹೇಳಿದ್ದನ್ನು ಜಾರಿಗೆ ತರುತ್ತೇವೆ ಎಂದು ಒಂದು ನೀತಿಯನ್ನು ಇಟ್ಟುಕೊಂಡಿದ್ದೇವೆ ಎಂದು ಹೇಳಿದ್ದಾರೆ. ಹಾಗಾದರೆ ಮಹಾತ್ಮಾಜೀಯವರು ಬ್ರಾಂದಿ, ವಿಸ್ಕೀ, ಸಾರಾಯಿ, ಶಾಪ್‌ಗಳನ್ನು ಬೇಕಾದಷ್ಟು ಓಪನ್ ಮಾಡಿ ಎಂದು ಹೇಳಿದ್ದಾರೆಯೇ ? ಎಷ್ಟೊಂದು ದೊಡ್ಡ ಸಂಖ್ಯೆಯಲ್ಲಿ ನೀವು ಇಂದು ಶಾಪ್‌ಗಳನ್ನು ಪ್ರಾರಂಭ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೀರಿ ? ಎಲ್ಲಿ ನೋಡಿದರೂ ವೈನ್‌ಶಾಪ್‌ಗಳೇ ತುಂಬಿವೆ ? ಇದು ಸರಕಾರದ ನೀತಿಯೇ ?

ಶ್ರೀ ಬಿ. ಬಸವಲಿಂಗಪ್ಪ.—ಕೊನೆಗೆ ಏನು ಮಾಡಬೇಕೆಂದಿದ್ದೀರಿ, ಇದನ್ನು ದ್ವಿಗುಣ ಮಾಡುತ್ತೀರಾ ಈಗ ೨೦೦೦ ಇದೆ ಸಿಟಿಯಲ್ಲಿ ಅದನ್ನು ೪,೦೦೦ಕ್ಕೆ ಏರಿಸುತ್ತೀರಾ? ನಮ್ಮಲ್ಲಿ ಅನೇಕರು ಕೂಲಿಗಾರರಿದ್ದಾರೆ, ಬಡವರಿದ್ದಾರೆ ಅವರು ಕಷ್ಟಪಟ್ಟು ಬೆವರು ಸುರಿಸಿ ಜೀವನ ಮಾಡುತ್ತಿದ್ದಾರೆ ಅಂತಹವರ ಹಣವನ್ನು ದೋಚಿಕೊಳ್ಳುವುದಕ್ಕೋಸ್ಕರ ಇನ್ನೂ ಎಷ್ಟು ಶಾಪ್‌ಗಳನ್ನು ಓಪನ್ ಮಾಡುತ್ತೀರಿ. ಸಾಹುಕಾರರು ಕುಡಿದುಕೊಂಡು ಹೋಗಲಿ ಬೇಡವೆಂದು ಹೇಳುವುದಿಲ್ಲ ಆದರೆ ಬಡವನು ಉದ್ದಿಮೆ ಮಾಡಿ, ಕೈ ಕಸುಬಿನಿಂದ ಶ್ರಮದಿಂದ ತರತಕ್ಕಂತಹ ಹಣವನ್ನು ಕಸಿದುಕೊಳ್ಳತಕ್ಕಂತಹ ಪ್ರವೃತ್ತಿ ಇವತ್ತಲ್ಲಾ ಸಾವಿರಾರು ವರ್ಷಗಳಿಂದ ಇದೆ. ಇವತ್ತು ಅದನ್ನು ಜಾಸ್ತಿ ಏಕೆ ಮಾಡಿದ್ದೀರಿ ಎಂದು ಕೇಳುತ್ತಿದ್ದೇನೆ. ಆಯಿತು ಮತ್ತೆ ಜಾಸ್ತಿ ಮಾಡಿದ್ದೀರಿ ಅದರಿಂದ ಆದಾಯ ಪಡೆದುಕೊಳ್ಳುತ್ತಿದ್ದೀರಿ ಅದರ ಮೇಲೆಯೇ ಸರಕಾರವನ್ನು ನಡೆಸಿಕೊಳ್ಳಲಿ, ಅದು ಬೇರೆ ವಿಚಾರ. ಪಾನನಿರೋಧ ಅನ್ನತಕ್ಕಂತಹ ಕಾರ್ಯಕ್ರಮವನ್ನು ನಿಮ್ಮ ಸರಕಾರದಲ್ಲಿ ಏಕೆ ಇಟ್ಟುಕೊಂಡಿದ್ದೀರಿ? ಮಾನ್ಯ ಕೆ. ಹೆಚ್, ಶ್ರೀನಿವಾಸ್‌ರವರು ಇದರ ಬಗ್ಗೆ ಬಹಳ ಚೆನ್ನಾಗಿ ಭಾಷಣ ಮಾಡಿದರು. ಇವತ್ತಿನ ದಿವಸ ನಾನು ಮಾತನಾಡಬಾರದೆಂದು ಇದ್ದೆ ತಮ್ಮ ಆದೇಶದ ಮೇಲೆ ಇವತ್ತು ನಾನು ಮಾತನಾಡುತ್ತಿದ್ದೇನೆ. ಅವರು ಏಕೆ ಮಾತನಾಡಿದರು ನನಗೆ ಅರ್ಥವಾಗಲಿಲ್ಲ ಅವರ ಉದ್ದೇಶ ಏನು ಎಂದು ನನಗೆ ಗೊತ್ತಿಲ್ಲ. ಹೈಪವರ್ ಕಮಿಟಿ ಮಾಡಿ ಜಾಸ್ತಿ ಶಾಪ್‌ಗಳನ್ನು ಓಪನ್ ಮಾಡಬೇಕೆಂಬ ಉದ್ದೇಶ ಇದೆಯೋ ಏನೋ ಗೊತ್ತಾಗಲಿಲ್ಲ.

SRI K.H. SRINIVAS.—ಕಾಂಗ್ರೆಸ್, ಜನತಾ ಎಲ್ಲಾ ಒಂದು ಕಡೆಗೆ ಇರಲ್ಲಿ ಮಹಾತ್ಮಾ ಗಾಂಧಿಯವರು ಪ್ರಾಹಿಬಿಷನ್ ಮಾಡಬೇಕೆಂದು ಹೇಳಿದರು ಅದು ಕಾರ್ಯ ಸಾಧುವಲ್ಲವೆಂದು ಹೇಳಿ ನಾವು ಯಾವುದೋ ಒಂದು ದಾರಿಯಲ್ಲಿ ಹೋಗಿದ್ದೇವೆ ಆ ದಾರಿಯಲ್ಲಿ ಹೋಗುವುದಕ್ಕೆ ಕಾರಣಗಳು ಯಾವುದಾದರೂ ಇರಬಹುದು ಆ ದಾರಿಯಲ್ಲಿ ತುಂಬಾ ಮುಂದಕ್ಕೆ ಹೋಗಿದ್ದೇವೆ. ಪ್ರತಿಯೊಂದು ಸರಕಾರಕ್ಕೂ ಕೂಡ ಇದರಿಂದ Major source of income ಇವೆ. It has got a vested interest in the increased income from the Department of Excie ನಾವು ಜನರಿಗೆ ಕುಡಿಸುತ್ತಿರುವವರು. ಡಬಲ್ ಡಿಸ್ಟಿಲ್ಡ್ ಅಲ್ಕೋಹಾಲ್ ಇದೆ ಇನ್ನೊಂದು ಯಾವುದೋ ಮರದಿಂದ ಸ್ವಲ್ಪವನ್ನು ತೆಗೆದುಕೊಂಡು ಉಳಿದಿದ್ದಕ್ಕೆ ನೀರು ಕ್ಲೋರಲ್ ಹೈಡ್ರೇಟ್ ಹಾಕಿ ಅದನ್ನು ತುಂಬಿಸಿ ಯಾರ ಮೂಲಕ ಆಪರೇಟ್ ಮಾಡುತ್ತಿದ್ದೇವೆಂದರೆ ದೊಡ್ಡ ದೊಡ್ಡ ಕಂಟ್ರಾಕ್ಟರ್ಸ್ ಕೆಲಸ ಕೊಡಿಸುತ್ತಿದ್ದೇವೆ. ಅಂದರೆ ಅವರಿಗೆ ಕುಡಿಸುವ ಗುತ್ತಿಗೆಯನ್ನು ಕೊಡುತ್ತಿದ್ದೇವೆ. ಅದನ್ನು ಕುಡಿಸುವ ಮೂಲಕ ಆದಾಯ ಕೆಲಸವನ್ನು ಮಾಡುತ್ತಿದ್ದಾರೆ. ಜಾಸ್ತಿ ಜಾಸ್ತಿ ಕುಡಿಸಬೇಕು ಜಾಸ್ತಿ ಅಲ್ಟರೇಷನ್ ಮಾಡಬೇಕು ಅದರಿಂದ ನಮಗೆ ಆದಾಯ ಹೆಚ್ಚಾಗಬೇಕು? ೧೩ ಕೋಟಿ ರೂಪಾಯಿ ಬರುವ ಇನ್‌ಕಂ ೨೭೨ ಕೋಟಿ ರೂಪಾಯಿ ಬರುತ್ತದೆ ಎಕ್ಸೈಸ್ ಕಂಟ್ರಾಕ್ಟರ್ಸ್‌ಗೆ ೫೦—೬೦ ಕೋಟಿ ರೂಪಾಯಿ ಇನ್ನು ಉಳಿದದ್ದು ಸರಕಾರಕ್ಕೆ ಸೇರುತ್ತದೆ. ಬೇರೆ ಯಾವ ಆರಿಕೆಯಲ್ಲೂ ಕೂಡ ಇಷ್ಟು ಪ್ರಾಫಿಟ್ ಇಲ್ಲ ಇದರಲ್ಲಿ ಮಾತ್ರ ೪೦೦ ಪರ್ಸೆಂಟ್ ಪ್ರಾಫಿಟ್ ಇದೆ. ಇದು ಕೊನೆಗೆ ಎಲ್ಲಿಗೆ ಹೋಗಿ ಮುಟ್ಟುತ್ತದೆಂದರೆ ರಾಜ ಕಾರಣ ಮನೆಗೆ ಹೋಗುತ್ತದೆ, ನಮ್ಮ ಸಮಾಜವೂ ಮನೆಗೆ ಹೋಗುತ್ತದೆ, ಸಮಾಜ ಕಲ್ಯಾಣ ಇಲಾಖೆ ಇನ್ನಿತರ ಇಲಾಖೆಗಳು ಮನೆಗೆ ಹೋಗುತ್ತದೆ. ಉದಾಹರಣೆಗೆ ಹೇಳುವುದಾದರೆ ರಷ್ಯದಲ್ಲಿ ಒಂದು ಎಕ್ಸ್‌ಪಿರಿಮೆಂಟ್ ಇದೆ ಖಾಸಗೀ ಸಂಸ್ಥೆಗಳನ್ನು ಎನ್‌ಕರೇಜ್ ಮಾಡುತ್ತಿದ್ದಾರೆ ಈ ಪಾನ ನಿಯಂತ್ರಣವನ್ನು ತರುವುದಕ್ಕೆ ಕಾನೂನನ್ನು ಮಾಡಿದ್ದಾರೆ ಅವನು ಒಂದು ಬಾಟಲ್ ತೆಗೆದುಕೊಳ್ಳಬೇಕಾದರೆ ಇಷ್ಟು ಆಹಾರವನ್ನು ಕೊಂಡುಕೊಳ್ಳಬೇಕು ಅದು ಇಲ್ಲದೆ ಅವರಿಗೆ ಬಾಟಲ್ ಅನ್ನು ಕೊಡುವುದೇ ಇಲ್ಲ. ಚೈನಾ ದೇಶದಲ್ಲಿ ಫ್ರಾನ್ಸ್ ದೇಶದಲ್ಲಿ ಮತ್ತು ಬೇರೆ ದೇಶಗಳಲ್ಲಿ ಆ ಪರಿಸ್ಥಿತಿ ಇವತ್ತು ಬಂದಿದೆ. ಅವರನ್ನು ನೋಡಿಯಾದರೂ ನಾವು ಕಲಿತುಕೊಳ್ಳದೆ ಹೋದರೆ ನಾವು ಆ ಸ್ಥಿತಿಗೆ ಹೋದಾಗ ಕೊನೆಗೆ ನಮ್ಮನ್ನು ರಿಪೇರಿ ಮಾಡುವುದಕ್ಕೆ ಸಾಧ್ಯವಿಲ್ಲದೇ ಇರತಕ್ಕಂತಹ ಪರಿಸ್ಥಿತಿ ಬರುತ್ತದೆ. ಲಂಬಾಣಿ ತಾಂಡದ ಮಧ್ಯದಲ್ಲಿ ಕೂಡ ಹೆಂಡದ ಅಂಗಡಿ ಇಟ್ಟಿದ್ದಾರೆ ಅದನ್ನು ತಪ್ಪಿಸುವುದಕ್ಕೆ ಸಾಧ್ಯವಿಲ್ಲ. Contractor has direct rapport with the Government. ಸಂಪುಟ ದರ್ಜೆ ಸಚಿವರೆಲ್ಲ ಡೈರೆಕ್ಟ್ ಮಾನ್ಯ ಮುಖ್ಯ ಮಂತ್ರಿಗಳ ಆದೇಶವಿಲ್ಲದೆ ಅದನ್ನು ತೆಗೆಸುವುದಕ್ಕಾಗುವುದಿಲ್ಲ. ನಮ್ಮ ಊರಿನಲ್ಲಿ ಒಂದು ರೆಸಲ್ಯೂಷನ್ ಪಾಸ್ ಮಾಡಿದರು ಹೆಂಡದ ಅಂಗಡಿ ಬೇಡ ಎಂದು. ಇಷ್ಟೆಲ್ಲಾ ಹೇಳಿದರೂ ಕೂಡ ಕಡ್ಡಾಯವಾಗಿ ಅಲ್ಲಿ ಅಂಗಡಿಯನ್ನು ಹಾಕಿಸುತ್ತಾರೆ. It is a state promotion of drinking compulsory ಕುಡಿಯಲೇಬೇಕು ನಮ್ಮ ಪಾಲಿಸಿ ಕೊನೆಗೆ ಅಲ್ಲಿಗೆ ಹೋಗಿ ಮುಟ್ಟುತ್ತದೆ. ಇದನ್ನು ಏನು ಮಾಡಬೇಕು ಎಂಬುದರ ಬಗ್ಗೆ ಭಾಷಣ ಮಾಡುವುದರ ಬದಲು ಸರಿಯಾದಂತಹ ತಜ್ಞರು ಇರುವಂತಹ ಮತ್ತು ಜನಗಳ ಪರಿಸ್ಥಿತಿಯನ್ನು ತಿಳಿದುಕೊಂಡಿರತಕ್ಕಂತಹ ವಿಧಾನ ಮಂಡಲದ ಸದಸ್ಯರೂ ಕೂಡ ಸೇರಿದಂತಹ ಒಂದು ಸಮಿತಿಯನ್ನು ಮಾಡಿ ಅದು ಇದರ ಬಗ್ಗೆ ಚರ್ಚೆ ಮಾಡಿ ಅಧ್ಯಯನ ಮಾಡಲಿ. ಇದೇ ಇಡೀ ರಾಷ್ಟ್ರದ ಪ್ರಶ್ನೆ ಇದೆ ಇಡೀ ರಾಷ್ಟ್ರಕ್ಕೇ ಇದು ಮಾದರಿಯಾಗುತ್ತದೆ. ಹೆಂಡದ ಅಂಗಡಿ ಮಾಡತಕ್ಕಂಥಾದ್ದು ಅನಿವಾರ್ಯವಾದರೆ, ಕುಡಿಯುವುದು ಅನಿವಾರ್ಯವಾದರೆ ಅದಕ್ಕೆ ಏನು ಇರಬೇಕು ಹಾಗೂ ಅದು ಅನಿವಾರ್ಯವಲ್ಲವೆಂದಾದರೆ ಅದನ್ನು ತೆಗೆದುಹಾಕುವುದಕ್ಕೆ ಏನು ಮಾಡಬೇಕು ಎಂಬುದನ್ನು ಅದರಲ್ಲಿ ಪರಿಶೀಲನೆ ಮಾಡಬೇಕು.

೧—೦೦ ಪಿ.ಎಂ.

† ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಸದಸ್ಯರು ಬಹಳ ಚೆನ್ನಾಗಿ ವಿವರಣೆಯನ್ನು ಕೊಟ್ಟಿದ್ದಾರೆ. ನನ್ನದು ಅದೇ ಅಭಿಪ್ರಾಯ. ನಾನು ನನ್ನ ಭಾಷೆಯಲ್ಲಿ ಹೇಳಿದೆ. ನೀವು ಹೇಳುವುದು ಉದಾತ್ತವಾಗಿರತಕ್ಕಂಥ ಧ್ಯೇಯ ಆದರೆ ಈಗ ನಡೆಯುತ್ತಿರುವುದು ಏನು? ನಾಳೆ ಆಗುವುದು ಏನು? ಇವತ್ತು ನಡೆಯುವುದು ದಿನೇ ದಿನೇ ಜಾಸ್ತಿಯಾಗುತ್ತಿದೆ, ನಾಳೆ ಇದಕ್ಕಿಂತ ಜಾಸ್ತಿಯಾಗುತ್ತದೆ ಎಂಬ ಸಂಭವ ಇದೆ. ಅದಕ್ಕೆ ನಾನು ಹೇಳಿದ್ದು ಇಂಥ ಒಂದು ನಿರ್ಣಯದ ಉದ್ದೇಶ ಸಾರ್ಥಕವಾಗುವುದಿಲ್ಲ ಎಂದು.

೧೯೮೬ನೇ ಇಸವಿಯಲ್ಲಿ ಆಯವ್ಯಯದ ಮೇಲೆ ಭಾಷಣ ಮಾಡುತ್ತಾ ಶ್ರೀಮಾನ್ ರಾಮಕೃಷ್ಣ ಹೆಗಡೆ ಯವರು ಒಂದು ವಾಕ್ಯವನ್ನು ಹೇಳಿದರು, ಅದನ್ನು ತಮ್ಮ ಗಮನಕ್ಕೆ ತರುತ್ತೇನೆ. ಕೋ-ಆಪರೇಟಿವ್ ಸೊಸೈಟಿ ಏನು ಕರ್ನಾಟಕ ರಾಜ್ಯದಲ್ಲಿ ಇದ್ದಾವಲ್ಲಾ, ಅವರು ಈ ಹೆಂಡವನ್ನು, ಬ್ರಾಂದಿಯನ್ನು, ವಿಸ್ಕಿಗಳನ್ನು ಸರಾಯಿಯನ್ನು ಮಾರಬೇಕು ಎಂದು ಅವರು ಭಾಷಣದಲ್ಲಿ ಹೇಳಿದ್ದಾರೆ. ಕಾರಣ ಏನು ಎಂದು ಹೇಳಿದರೆ ನಿಯಮಿಂತವಾಗಿ ಕೆಲವೇ ಜನಗಳಿಗೆ ಸಿಗುತ್ತದೆ, ಅವರ ಮುಖಾಂತರ ಬೇರೆಯವರಿಗೆ ಸರಬರಾಜು ಆಗಬಹುದು ಎಂದು, ಅದನ್ನು ನಾವೆಲ್ಲಾ ವಿರೋಧ ಮಾಡಿದೆವು. ಅದನ್ನು ಜಾರಿಗೆ ಕೊಟ್ಟಿದ್ದರೆ ಮಾನ್ಯ ಶ್ರೀ ಆರ್.ಎಲ್. ಜಾಲಪ್ಪನವರು ಮಾಡಿಬಿಟ್ಟಂಥ ಸಹಕಾರ ಇಲಾಖೆ ಏನು ಇತ್ತೋ, ಆ ಸಂಸ್ಥೆಗಳು ಏನು ಇದ್ದಾವೆ, ಅವೆಲ್ಲವೂ ಹೆಂಡಕುಡುಕರಾಗುತ್ತಿದ್ದವು. ಆಗ ಇವರು ಸಹಕಾರ ಮಾಡುತ್ತಾ ಇರಲಿಲ್ಲ. ಇದೇ ಸಹಕಾರವನ್ನು ಹಂಚಿಕೊಂಡು ಕುಡಿದು ಸಹಕಾರವನ್ನು ಕಾಡಿಗೆ ಕಳುಹಿಸುತ್ತಿದ್ದರು. ಏನೋ ಬಿಟ್ಟಿದ್ದಾರೆ, ಒಳ್ಳೆಯ ಮನಸ್ಸು ಬಂದಿರಬಹುದು, ಬಿಟ್ಟಿದ್ದಾರೆ. ಏನು ಹೇಳುತ್ತೀರಾ, ಹೇಳಿ.

ಶ್ರೀ ಆರ್.ಎಲ್. ಜಾಲಪ್ಪ.—ಮಾನ್ಯ ಬಸವಲಿಂಗಪ್ಪನವರಿಗೆ ರಾಜಕೀಯ ಬಿಡಿ ಎಂದರೆ ಹೇಗೆ ಬಿಡುವುದಿಲ್ಲವೋ ಅಷ್ಟರಮಟ್ಟಿಗೆ ಕುಡಿಯುವವರು ಕೂಡಾ ಬಿಡುವುದಿಲ್ಲ. ನೀವು ಕೋ-ಆಪರೇಟಿವ್ ಸೊಸೈಟಿ ಒಳಗೆ ಮಾರಿ, ಅಥವಾ ಬಟ್ಟಿ ಸರಾಯಿಯಾದರೂ ಮಾರಿ, ಕುಡಿಯುವುದಕ್ಕೆ ಶುರು ಮಾಡಿದ್ದಾರೆ ಹೇಗಾದರೂ ಮಾಡಿ ಕುಡಿದೇ ಕುಡಿಯುತ್ತಾರೆ. ಪ್ರೊಹಿಬಿಷನ್ ತಂದು ಸತ್ತ ಹಾವುಗಳನ್ನು ಹಾಕಿದೆವು, ನವಸಾಗರವನ್ನು ಹಾಕಿದೆವು, ಯೂರಿಯಾವನ್ನು ಹಾಕಿದೆವು, ಆದರೆ ಕುಡಿಯುವುದನ್ನು ಬಿಡಲೇ ಇಲ್ಲ. ಇದನ್ನು ಕುಡಿಯುವವರು ಸಾಯುವುದು ಬೇಡ ಎಂದರು ರೀ-ಇಂಟ್ರಡ್ಯೂಸ್ ಮಾಡಿದೆವು. ನಾನು ಕಂಟ್ರಾಕ್ಟರ್ ಆಗಿದ್ದೆ, ನಾನು ನೋಡಿದ್ದೇನೆ. ಏನು ಆಯಿತು ಆಗ? ಆಗ ಪುಡಾರಿಗಳಿಗೆ ಪೋಲೀಸಿನವರಿಗೆ ಅನುಕೂಲವಾಯಿತು ಪ್ರೊಹಿಬಿಷನ್ ತಂದಾಗ.
ಪುಡಾರಿಗಳ ಪ್ರೊಟೆಕ್ಷನ್‌ನಲ್ಲಿ ಪೋಲೀಸಿನವರು ಮತ್ತು ಕೆಲವು ಬೂಟ್‌ಲೆಗ್ಗರ್ಸ್‌ಗೆ ಬಹಳ ಅನುಕೂಲ ವಾಗಿ ಸುಖವಾಗಿ ಆರಾಮವಾಗಿದ್ದರು. ಆದ್ದರಿಂದ ಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡಿ ಆಲ್ಕೊಹಾಲ್‌ನಿಂದ ಏನು ತೊಂದರೆಯಾಗುತ್ತದೆ ಎನ್ನುವುದನ್ನು ತಿಳಿಸಬೇಕು. ರಿಸ್ಟ್ರಿಕ್ಷನ್ ಹಾಕಿದಷ್ಟೂ ಜಾಸ್ತಿಯಾಗುತ್ತದೆ. ಕ್ಲಬ್‌ಗಳನ್ನು ಎಂಟುಗಂಟೆಗೆ-ಒಂಭತ್ತು ಗಂಟೆಗೆಲ್ಲಾ ಮುಚ್ಚಬೇಕು ಎಂದು ಹೇಳಿದರೂ ಒಳಗಡೆ ಬಾಗಿಲು ಹಾಕಿಕೊಂಡು ಪೇಪರ್ ಮುಚ್ಚಿ ಬೋಲ್ಟ್ ಹಾಕಿಕೊಂಡು ಹಿಂದುಗಡೆ ಒಂದು ಬಾಗಿಲು ಹಾಕಿಕೊಂಡಿರುತ್ತಾರೆ. ನಾವು ಒಂದಲ್ಲ ಹತ್ತು ಸಾರಿ ಹಿಡಿಯುತ್ತೇವೆ. ಆದರೂ ಕೂಡಾ ಅದು ಬೆಳೆದುಕೊಂಡು ಬಂದಿದೆ. ಆ ಕಾಲದಲ್ಲಿ ದೇವರೇ ಕುಡಿಯುತ್ತಿದ್ದರು ಎಂದು ಹೇಳುತ್ತಿದ್ದರು ಅದೆಲ್ಲಾ ಆಗಿಲ್ಲವೇ ? ಪೂರ್ಣವಾಗಿ ನೀವು ಕುಡಿಯಲೇಬೇಡಿ ಎಂದು ಹೇಳುವುದಕ್ಕಾಗುವುದಿಲ್ಲ. ಈ ಪ್ರಪಂಚದಲ್ಲಿ ಯಾವ ರಾಜ್ಯದಲ್ಲಿಯೂ ಇದೂ ಆಗಿಲ್ಲ. ಆದರೆ ತಾವು ಹೇಳುವುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಯಥಾವತ್ತಾಗಿ ಹೀಗೆ ಎಲ್ಲಾ ಓಪನ್ ಆಗಿ ಬಿಟ್ಟುಬಿಡಬೇಡಿ ಎಂದು ಹೇಳುವುದನ್ನು ಒಪ್ಪಿಕೊಳ್ಳುತ್ತೇವೆ. ಇದರ ಬಗ್ಗೆ ಏನಾದರೂ ಸಲಹೆಗಳು ಕೊಡಬಹುದೇ ವಿನಹಾ ಪೂರ್ಣವಾಗಿ ನಿಲ್ಲಿಸಬೇಕು ಎಂದು ಹೇಳುವುದು ನನಗಂತೂ ಗೊತ್ತಿದ್ದ ಹಾಗೆ ಇದು ಸಾಧ್ಯ ಇಲ್ಲ. ಅವರು ಹೇಳಿದಹಾಗೆ ನನಗೆ ಎರಡು ಅನುಭವ ಇದೆ. ಅವರು ಸ್ವಲ್ಪ ವೈನ್ ತೆಗೆದುಕೊಳ್ಳುತ್ತಾರೋ ಏನೋ ಗೊತ್ತಿಲ್ಲ. ಒಂದೊಂದು ಸಾರಿ ತೆಗೆದುಕೊಳ್ಳುತ್ತಿದ್ದರೋ ಏನೋ ಈ ವೈನ್ ಸ್ವಲ್ಪ ಸ್ಟ್ರಾಂಗ್ ಡೋಸ್. ಅದೆಲ್ಲಾ ನನಗೆ ಗೊತ್ತಿಲ್ಲ. ಶ್ರೀನಿವಾಸ್‌ರವರಿಗೂ ಸ್ವಲ್ಪ ಅನುಭವ ಇದೆ. ಅವರು ಈಗ ಬಿಟ್ಟುಬಿಟ್ಟಿದ್ದಾರೆ.

ಶ್ರೀ ಕೆ.ಹೆಚ್. ಶ್ರೀನಿವಾಸ್.—ಉತ್ತಮವಾಗಿ ಎಷ್ಟೆಷ್ಟು ನನ್ನ ಜ್ಞಾನ ಸಮರ್ಥನೆಗೆ ತೆಗೆದು ಕೊಳ್ಳಬೇಕೋ ಅವುಗಳನ್ನು ಮಾಡಿಕೊಂಡಿದ್ದೇನೆ.

ಶ್ರೀ ಆರ್.ಎಲ್, ಜಾಲಪ್ಪ.—ಅವುಗಳ ಬಗ್ಗೆ ಅನುಭವ ಇಲ್ಲದೆ ಮಾತನಾಡುವುದಕ್ಕೆ ಆಗುವುದಿಲ್ಲ. ಸ್ವಲ್ಪ ಅನುಭವ ಇರಲೇಬೇಕು ಆ ಅನುಭವವನ್ನು ಅವರು ಸಂಪಾದನೆ ಮಾಡಿಕೊಂಡಿದ್ದಾರೆ. ಆದ್ದರಿಂದ ಅದನ್ನು ಪೂರ್ಣವಾಗಿ ರ್ಯಾಷನಲೈಸ್ ಮಾಡಬೇಕು ಇದರಿಂದ ಬಡವರೇ ಹೆಚ್ಚಾಗಿ ಹಾಳಾಗುತ್ತಿದ್ದಾರೆ, ಅವರೇ ಜಾಸ್ತಿಯಾಗುತ್ತಿದ್ದಾರೆ. ಅವರಿಗೆ ಮಾತನಾಡಿದರೆ ಸಿಟ್ಟು ಬರುತ್ತದೆ, ಲೋನ್ ಮೇಳಗಳಿಂದ ಬಂದು ಬಹಳವಾಗಿ ಜನರು ಆನಂದವಾಗಿಬಿಟ್ಟಿದ್ದಾರೆ. ನಾಲ್ಕು ವರ್ಷಗಳಿಂದ ಕ್ಷಾಮ ಇದ್ದರೂ ಇದು ಮಾತ್ರ ವರ್ಷ ವರ್ಷ ಜಾಸ್ತಿಯಾಗುತ್ತದೆ. I do weclcome it beeause it coetributing myre and more income to the State. ಇದನ್ನು ರ್ಯಾಷನಲೈಸ್

ಮಾಡಬೇಕೇ ವಿನಹಾ ಸುಮ್ಮನೆ ಶ್ರೀನಿವಾಸ್‌ರವರು ಹೇಳಿದಹಾಗೆ ಬರೀ ಭಾಷಣ ಮಾಡುವುದರಿಂದ ಇದನ್ನು ಪೂರ್ಣವಾಗಿ ಸರಿ ಮಾಡುವುದಕ್ಕಾಗುವುದಿಲ್ಲ. ಇದು ನನ್ನ ಅಭಿಪ್ರಾಯ.

ಶ್ರೀ ಆರ್. ಎಲ್. ಜಾಲಪ್ಪ.—ಮಾನ್ಯ ಶ್ರೀನಿವಾಸ್‌ರವರು ಹೇಳಿದಂತೆ ಬರೀ ಭಾಷಣದಿಂದ ಕೂ ಮಾಡುವುದಕ್ಕಾಗುವುದಿಲ್ಲ. ಇದು ಸರಿ ಹೋಗುವುದಿಲ್ಲ.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಅಧ್ಯಕ್ಷರೇ, ಜಾಲಪ್ಪನವರು ಮಾತನಾಡುವಾಗ ತಾವು ಮಂತ್ರಿಗಳು ಎನ್ನುವುದನ್ನು ಮರೆತು ಬಿಡುತ್ತಾರೆ. ಇದು ನನಗೆ ಅಸಹ್ಯ ಆಗಿರತಕ್ಕ ಮಾತು. ನೀವು ಮಂತ್ರಿಗಳು, ಜಾಲಪ್ಪ ಅಲ್ಲ. ತಾವು ಅದು ಆಗುವುದಿಲ್ಲ, ನೀವು ಜಾರಿ ಕೊಡುವುದಿಲ್ಲ. ನೀವು ನಿಲ್ಲಿಸುವುದಿಲ್ಲ ಎನ್ನುವ ನೀತಿ ನಿಮ್ಮದು ಯಾಕೆ ಹೇಳುತ್ತಿದ್ದೇನೆಂದರೆ ತಾವು ಮಂತ್ರಿಗಳಾದ್ದೀರಿ, ಸರ್ಕಾರದ ನೀತಿಯಂತೆ, ಸರ್ಕಾರದ ಒಂದು ನೀತಿಗೆ ಸರಿಸಮಾನಾಗಿ ಹೋಗುತ್ತಿರುವುದರಿಂದ ನೀವು ಜನಗಳ ಯೋಗಕ್ಷೇಮವನ್ನು ನೋಡಿಕೊಳ್ಳಬೇಕು. ಬಡವರನ್ನು ರಕ್ಷಣೆ ಮಾಡಬೇಕು. ನೀವು ಹಂಚಲಿಕ್ಕೆ ನಿಂತಿದ್ದೀವೆ ಎನ್ನುವುದಾದರೆ...ಕೋ ಆಪರೇಟೀವ್ ಯಾಕೆ ಮಾಡಬಾರದು, ಇದನ್ನು ಯಾಕೆ ಜಾಸ್ತಿ ಮಾಡಬಾರದು...ಏನು ಮಾತಿದು.

ಶ್ರೀ ಆರ್. ಎಲ್. ಜಾಲಪ್ಪ.—ಸ್ವಾಮಿ, ಕೋ ಆಪರೇಟೀವ್ ಸೊಸೈಟಿ ಮುಖಾಂತರ ಮಾರಿದರೆ ಇದರ ಉದ್ದಿಶ್ಯ ಸೆಕೆಂಡ್ಸ್ ಕಡಿಮೆ ಆಗುತ್ತದೆ. ಇದನ್ನು ತಾವು ಅರ್ಥ ಮಾಡಿಕೊಳ್ಳಬೇಕು. ಪ್ರೈವೇಟ್‌ನಲ್ಲಿ ರಾಮನ ಲೆಕ್ಕ ಒಂದು, ಕೃಷ್ಣನ ಲೆಕ್ಕ ಒಂದು ಇಡುತ್ತಾರೆ, ಜನತಾ ಬಜಾರ್‌ನಲ್ಲಿ ಕನ್ಸೂಮರ್ಸ್ ಸೊಸೈಟಿ ಮುಖಾಂತರ ಸೆಕೆಂಡ್ಸ್ ಕಡಿಮೆ ಆಗುತ್ತದೆ. ಜನತಾ ಬಜಾರ್‌ನವರು ಸೆಕೆಂಡ್ಸ್ ಮಾಡುವುದಿಲ್ಲ. ನೀವು ಅಪೋಸ್ ಮಾಡಿದಿರಿ, ಅದನ್ನು ನಾವು ಬಿಟ್ಟೆವು. ಹಿಂದೆ ನೀವೂ ಮಂತ್ರಿಗಳಾಗಿದ್ದವರು, ಹೆಂಡ, ಸಾರಾಯಿ ವ್ಯಾಪಾರ್ದವರಆಗ ಇರಲಿಲ್ಲವೇನು ? ನೀವು ಯಶೋದಮ್ಮ, ದಾಸಪ್ಪ ರಾಜೀನಾಮೆ ಕೊಟ್ಟ ಹಾಗೆ ನೀವೂ ಕೊಟ್ಟಿದ್ದರೆ...

ಶ್ರೀ ಬಿ. ಬಸವಲಿಂಗಪ್ಪ.—ಹೋಲಿಸಿ, ಹೋಲಿಸಿ ನಾವು ಮಾಡುವುದೇ ಸರಿ ಎಂದು ಹೇಳುತ್ತೀರಲ್ಲ, ಇದು ಸಲ್ಲದ ಮಾತು, ಮಾಡಬಾರದು. ನಾವು ವಿನಯ ಪೂರ್ವಕವಾಗಿ ತಮ್ಮಲ್ಲಿ ಕೇಳಿಕೊಳ್ಳುತ್ತೇನೆ, ಮಾನ್ಯ ಜಾಲಪ್ಪರವರೇ, ಕೆಟ್ಟ ಕೆಲಸ ಮಾಡಿದ್ದು ಸರಿ ಎಂದು ಹೇಳಬೇಡಿ.

ಶ್ರೀ ಆರ್. ಎಲ್. ಜಾಲಪ್ಪ.—ಕೆಟ್ಟ ಕೆಲಸ ನಿಮ್ಮ ಕಾಲದಲ್ಲೂ ಇತ್ತು. ನಮ್ಮ ಕಾಲದಲ್ಲೂ ಇತ್ತು. ತಮ್ಮ ಕಾಲದಲ್ಲೂ ಮಾಡಿದ್ದೀರಿ. ನಾನು ಈ ರೀತಿ ಹೇಳದೇ ವಿಧಿಯಿಲ್ಲ. ನೀವು ರಾಜೀನಾಮೆ ಆಗ ನೀಡಿದ್ದೇ ಆಗಿದ್ದರೆ ನಿಮ್ಮ ಸಾಚಾತನಕ್ಕೆ ನಮಸ್ಕಾರ ಮಾಡುತ್ತಿದ್ದೆ, ನಿಮ್ಮವರಿಗೆ ಆಗ ಬಹಳ ತೊಂದರೆ ಆಗುತ್ತಾ ಇತ್ತು.

ಶ್ರೀ ಬಿ. ಬಸವಲಿಂಗಪ್ಪ.—ನಮ್ಮ ಯಶೋದಮ್ಮ ಕೊಡಲಿಲ್ಲವೇನು.

ಶ್ರೀ ಬಿ. ಎಂ. ಉದಾಸಿ.—ಮಾನ್ಯ ಅಧ್ಯಕ್ಷರೇ...

ಅಧ್ಯಕ್ಷರು.—ತಡೆಯಿರಿ, ಮಾನ್ಯ ಉದಾಸಿಯವರು ಏನು ಹೇಳುತ್ತಾರೆ ಕೇಳೋಣ,

ಶ್ರೀ ಬಿ. ಎಂ. ಉದಾಸಿ.—ಮಾನ್ಯ ಅಧ್ಯಕ್ಷರೇ, ನಾವು ಇಷ್ಟರವರೆಗೆ ಪಾನ ನಿರೋಧದ ಬಗ್ಗೆ ಎಲ್ಲಾ ರಾಜಕೀಯ ಪಕ್ಷಗಳವರು ಮಾತನಾಡಿದ್ದಾರೆ. ಎಲ್ಲರೂ ಚುನಾವಣೆಯಲ್ಲಿ ಗೆಲ್ಲಲಿಕ್ಕೆ ಎಂದು ಹೇಳಿದ್ದಾರೆ, ಎನ್ನುವ ಪ್ರಶ್ನೆ. ಮೂಲಭೂತವಾದ ತತ್ವ ಇದರಲ್ಲಿ ಏನಿರಬಹುದು. ಕುಡಿಯಬಾರದು ಎಂದು ಪ್ರತಿಭಟನೆ ಅಥವಾ ಘೋಷಣೆ ಇದ್ದರೆ ಮಾತ್ರ ಇದು ಏನಾದರೂ ಕಾರ್ಯರೂಪಕ್ಕೆ ಬರುತ್ತಿತೋ ಏನೋ. ಚುನಾವಣೆ ಕ್ಷೇತ್ರದಲ್ಲಿ ಕುಡಿಯದವರು, ಚುನಾವಣೆಗೆ ನಿಂತರೆ ಬಾಟ್ಲಿ ಗುರುತು ಇಟ್ಟುಕೊಂಡಿದ್ದರೆ ಕುಡಿಯುವವರೇ ಓಟು ಹಾಕುತ್ತಾರೋ ಏನೋ. ಕುಡಿಯುವವರು ಕುಡಿಯದವರಿಗೆ. ಕುಡಿಯುವವರು ಕುಡಿಯುವವರಿಗೆ. ಇದರ ಬಗ್ಗೆ ದೃಢ ನಿರ್ಧಾರ ಇದ್ದರೆ ಮಾತ್ರ ಒಂದು ತೀರ್ಮಾನಕ್ಕೆ ಬರಲಿಕ್ಕೆ ಸಾಧ್ಯ ಎನ್ನುವ ವಿಚಾರವನ್ನು ಹೇಳುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ.—ಈಗ ಪಾನ ನಿರೋಧದ ಬಗ್ಗೆ ಮಾತನಾಡಿದ್ದನ್ನು ಕೇಳಿದರೆ ಬರೀ ಕುಡಿಯುವರ ಭಾಷಣ ಕೇಳಿದ ಹಾಗೆ ಇದೆ. ಕುಡಿಯುವವರಿಗೆ ಬೆಂಬಲ ಕೊಟ್ಟ ಹಾಗಿದೆ ಭಾಷಣ ಮಾಡುವವರ ರೀತಿ.

ಶ್ರೀ ಆರ್. ಎಲ್. ಜಾಲಪ್ಪ.—ಅವರು ಕುಡಿಯುವುದಿಲ್ಲ.

ಅಧ್ಯಕ್ಷರು.—ರಮೇಶ್ ಕುಮಾರ್ ಏನು ಹೇಳುತ್ತಾರೋ.

ಶ್ರೀ ರಮೇಶ್ ಕುಮಾರ್.—ನಾನು ಶ್ರೀನಿವಾಸ್‌ರವರ ಭಾಷಣವನ್ನು ಪ್ರಾರಂಭದಿಂದ ಕೇಳಿದೆ. ಕುಡಿಯುವವರ ಬಗ್ಗೆ ಮಾತನಾಡಿದ್ದನ್ನೂ ಕೇಳಿದೆ. ಆದರೆ ನಮ್ಮ ದುರ್ಭಾಗ್ಯ ಯಾವ ರೀತಿ ಇದೆ ಅಂದರೆ, ವ್ಯಾಪಾರ ಮಾಡುವವನೂ, ಶ್ರೀಮಂತರೂ ಇದರಲ್ಲಿದ್ದಾರೆ. ಇಬ್ಬರೆಲ್ಲೂ ಈ ವೃತ್ತಿ ಇರುತ್ತದೆ. ಶ್ರೀಮಂತರಿಗೆ ಇನ್‌ಫ್ಲುಯೆನ್ಸ್ ಇದ್ದು ಇಡೀ ರಾಜ್ಯದ ಎರಡೂ ರಾಜಕೀಯ ಪಕ್ಷಗಳ ಮೇಲೆ ಎಷ್ಟು ಬಲವಾದ ಪರಿಣಾಮ ಬೀರುತ್ತಾರೆಂದರೆ ಎಲ್ಲ ಪಕ್ಷಗಳು ಅಂದರೆ ನಾವುಗಳು ಅವರುಗಳ ಬಂದಿ ಆಗಿದ್ದೇವೆ. ನಮ್ಮ ಭವಿಷ್ಯ ಅವರ ಕೈಯಲ್ಲಿದೆ. ಕೆಲವರು ರೋಗ ಬರುವುದಿಲ್ಲವೆಂದು ಕುಡಿಯುತ್ತಾ, ಕೆಲವರು ರೋಗ ಬರದಿದ್ದವರೂ ಕುಡಿಯುವುದಿಲ್ಲ, ಆದರೆ ಪ್ರಶ್ನೆ ಇಲ್ಲ, ಕೆಲವರು ಆರೋಗ್ಯಕ್ಕೆ ಕುಡಿಯಬಹುದು, ಇನ್ನೊಬ್ಬರು ಇನ್ನೊಂದಕ್ಕೆ ಕುಡಿಯಬಹುದು, ಎಲ್ಲರ ಹತೋಟಿ ಎಲ್ಲ ಅರ್ಥ ವ್ಯವಸ್ಥೆಯ ಹತೋಟಿ ಇವರ ಮೇಲೆ ಇರುತ್ತದೆ. ಯಾವ ರೀತಿ ಇರುತ್ತದೆ ಅಂದರೆ ಪಾರ್ಲಿಮೆಂಟಿನ ಪ್ರತಿನಿಧಿಗಳು, ರಾಜ್ಯಸಭೆಯ ಪ್ರತಿನಿಧಿಗಳು, ವಿಧಾನ ಸಭೆಯಲ್ಲಿ ಪ್ರತಿನಿಧಿಗಳು ಬರುತ್ತಾರೆ, ಮಂತ್ರಿಮಂಡಲದಲ್ಲೂ ಬರುತ್ತಾರೆ, ಎಲ್ಲ ಚರ್ಚೆಗಳೂ, ತೀರ್ಮಾನಗಳು ಇವರಿಗೆ ಗೊತ್ತಾಗುತ್ತದೆ. ಸರ್ಕಾರವನ್ನು ನಡೆಸತಕ್ಕ ಒಂದು ಶಕ್ತಿ ಇವರಲ್ಲಿರುತ್ತದೆ. ನಮಗೆ ಮತ್ತು ನಿಮಗೆ ನೈತಿಕ ಬಲ ಇರುವುದಾದರೆ ಯಾವ ಜನರು ನಮ್ಮನ್ನು ಇಲ್ಲಿಗೆ ಆರಿಸಿ ಕಳುಹಿಸಿಕೊಟ್ಟಿದ್ದಾರೆ, ಅವರ ಋಣ ತೀರಿಸಲು ನಾವು ಈ ಬಗ್ಗೆ ಒಂದು ನೈಜವಾದಂಥ ತೀರ್ಮಾನ ಕೈಗೊಳ್ಳಬೇಕು. ಅಂತಹ ಒಂದು ತೀರ್ಮಾನವನ್ನು ನಾವು ಮಾಡದಿದ್ದರೆ... Let us take a decision to refuse accepting funds from those excise lobby. Are you having the courage? You please placethis first in your party and take a decision. We will also take a decision in our party and tell them that we are not going to accept money from them. We will go before the people on our merits; we will face the elections on our merits and we will not bow down to these contractors... ಎಂದು ಹೇಳುತ್ತೀರಾ ? ನೀವು ಇದರ ಮೇಲೆ ಮಾತನಾಡಿ. ಅದನ್ನು ಬಿಟ್ಟು ನೀವು ಬೇರೆಯದನ್ನೆಲ್ಲಾ ಏತಕ್ಕೆ ಮಾತನಾಡುತ್ತೀರಿ ? ನೀವು ಸಹ ಮಂತ್ರಿಗಳಾಗಿ ಕೆಲಸ ಮಾಡಿದ್ದೀರಿ. ಇದು ಆಗಿನಿಂದಲೂ ನಡೆಯುತ್ತಿದೆ. ಈ ವಿಚಾರದಲ್ಲಿ ನಿಮ್ಮ ನಿಜವಾದ ಅನಿಸಿಕೆಗಳು ಏನಿವೆ ಎಂಬುದನ್ನು ಹೇಳಿ. ಈ ಹಿಂದೆ ನೀವು ಕೆಲವು ವಿಚಾರಗಳು ಬಂದಾಗ ನಿಮ್ಮ ಪ್ರಾಮಾಣಿಕವಾದಂತ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದೀರಿ. ಆದ್ದರಿಂದ ಈಗಲೂ ಸಹ ಈ ವಿಚಾರದಲ್ಲಿ ನಿಮ್ಮ ಪಕ್ಷವನ್ನು ಮರೆತು ನೀವು ಬಸವಲಿಂಗಪ್ಪನವರು ಎಂಬ ಒಂದೇ ಅಂಶವನ್ನು ಗಮನದಲ್ಲಿಟ್ಟುಕೊಂಡು ಮಾತನಾಡಿ.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ರಮೇಶ್ ಕುಮಾರ್ ಅವರು ನನ್ನ ಕಿರಿಯ ಸ್ನೇಹಿತರು. ಆದ್ದರಿಂದ ಇದರ ಮೇಲೆ ಇಲ್ಲಿ ಚರ್ಚೆ ಮಾಡುವಾಗ ಇರತಕ್ಕಂಥ ವಾಸ್ತವಾಂಶಗಳನ್ನು ಒಬ್ಬರಿಗೊಬ್ಬರು ಹಂಚಿಕೊಳ್ಳಬಹುದು. ಇರತಕ್ಕಂಥ ವಿಷಯಗಳನ್ನು ಮತ್ತು ಅಭಿಪ್ರಾಯಗಳನ್ನು ಒಬ್ಬರಿಗೊಬ್ಬರು ಹಂಚಿಕೊಂಡು ಮುಂದುವರಿಯುವುದರಲ್ಲಿ ತಪ್ಪೇನಿಲ್ಲ. ಈಗ ಮಾನ್ಯ ಜಾಲಪ್ಪನವರು ಏನು ಹೇಳಿದರೆಂದರೆ, ಈ ಸೆಕೆಂಡ್ಸ್ ಮಾರಾಟವನ್ನು ತಡೆಯಲು ಕೋ ಆಪರೇಟಿವ್ ಸೊಸೈಟಿಗಳ ಮುಖಾಂತರ ಮಧ್ಯದ ಮಾರಾಟವನ್ನು ಮಾಡಲು ಯೋಚಿಸಿದ್ದೆವು. ಆದರೆ ನಂತರ ಆ ಯೋಚನೆಯನ್ನು ಕೈಬಿಡಲಾಯಿತೆಂದು ಹೇಳಿದರು. ಇಲ್ಲಿ ಸೆಕೆಂಡ್ಸ್ ಮಾರಾಟ ಎಂದರೆ, ಟ್ಯಾಕ್ಸ್ ಇಲ್ಲದೆ ಮಾರಾಟ ಮಾಡುವುದು. ಒಂದು ಬಾಟಲ್ ಬ್ರಾಂದಿಯನ್ನು ತಯಾರು ಮಾಡಲು ೫೫ ರೂಪಾಯಿಗಳು ಖರ್ಚಾದರೆ, ಅದನ್ನು ಗ್ರಾಹಕರಿಗೆ ೯೭ ರೂಪಾಯಿಗಳಿಗೆ ಮಾರಾಟ ಮಾಡಲಾಗುತ್ತದೆ. ಇದರಲ್ಲಿ ಬ್ರಾಂದಿಯನ್ನು ತಯಾರು ಮಾಡುವವರ ಲಾಭ ಮಾರಾಟ ಮಾಡುವವರ ಲಾಭ, ಹಾಗೂ ಸೇಲ್ಸ್ ಟ್ಯಾಕ್ಸ್, ಸರ್‌ಚಾರ್ಜ್ ಹಾಗೂ ಇತರೇ ಸೆಸ್‌ಗಳನ್ನೆಲ್ಲಾ ಸೇರಿಸಿ ಇಷ್ಟು ಹಣಕ್ಕೆ ಮಾರಾಟ ಮಾಡುತ್ತಾರೆ. ಕೆಲವು ಸಲ ಈ ಎಲ್ಲ ರೀತಿಯ ಟ್ಯಾಕ್ಸ್‌ಗಳನ್ನು ಬಿಟ್ಟು ಅರ್ಧ ಬೆಲೆಗೆ ಮಾರಾಟ ಮಾಡುವುದು ಉಂಟು. ಇದಕ್ಕೆ ಸೆಕೆಂಡ್ಸ್ ಮಾರಾಟ ಎಂದು ಹೇಳುತ್ತಾರೆ. ಈ ಸೆಕೆಂಡ್ಸ್ ಮಾರಾಟ ನಡೆಯುತ್ತಿರುವುದು ಸರ್ಕಾರಕ್ಕೂ ಗೊತ್ತು ಮತ್ತು ಅಬಕಾರಿ ಇಲಾಖೆಯ ಅಧಿಕಾರಿಗಳಿಗೂ ಗೊತ್ತು. ಇವರಿಗೆಲ್ಲಾ ಗೊತ್ತಿಲ್ಲದೆ ಇದು ನಡೆಯುತ್ತಿಲ್ಲ. ಸರ್ಕಾರ ಇದಕ್ಕೆ ಉತ್ತೇಜನ ಕೊಡದಿದ್ದರೆ ಅವರು ಯಾವ ರೀತಿ

ಸೆಕೆಂಡ್ಸ್ ಮಾರಾಟ ಮಾಡುತ್ತಾರೆ ? ಮಾನ್ಯ ರಮೇಶ್‌ಕುಮಾರ್ ಅವರು ಏನು ಹೇಳಿದರೆಂದರೆ, ಈ ಸೇಂದಿ ಕಂಟ್ರಾಕ್ಟರ್‌ಗಳಿಗೂ ಮತ್ತು ಸರ್ಕಾರಕ್ಕೂ ಒಂದೇ ರೀತಿಯ ಸಂಬಂಧವಿದೆ ಅದೇ ರೀತಿ ಮದ್ಯವನ್ನು ತಯಾರು ಮಾಡುವ ಡಿಸ್ಟಿಲರ್ಸ್‌ಗಳು ಮತ್ತು ಸರ್ಕಾರಕ್ಕೂ ಒಂದೇ ರೀತಿಯ ಸಂಬಂಧವಿದೆ ಎಂದು ಹೇಳಿದರು. ಇದು ನನಗೂ ಗೊತ್ತು. ಇದು ಆದಿ ಕಾಲದಿಂದಲೂ ನಡೆದುಕೊಂಡು ಬಂದಿದ್ದು ಈಗಲೂ ನಡೆಯುತ್ತಿದೆ. ಈ ಕಂಟ್ರಾಕ್ಟರ್ಸ್ ಮತ್ತು ಡಿಸ್ಟಿಲರ್ಸ್ ಸೇರಿಕೊಂಡು ರಾಜಕೀಯ ಮಾಡುತ್ತಿದ್ದಾರೆಂದು ಅವರು ಹೇಳಿದ್ದು ನಿಜ. ಇವರುಗಳು ಎಲ್ಲ ರಾಜಕೀಯ ಪಕ್ಷಗಳನ್ನೂ ಕಂಟ್ರೋಲ್ ಮಾಡುತ್ತಾರೆ. ಈ ಬಾಟ್ಲಿಂಗ್ ವ್ಯವಹಾರವನ್ನು ಬಡವರು ಮಾಡಲು ಸಾಧ್ಯವೇ ? ಅದೇರೀತಿ ಈ ಸೇಂದಿ ಕಂಟ್ರಾಕ್ಟನ್ನು ಸಹ ಕಳೆದ ಇಪ್ಪತ್ತು ವರ್ಷಗಳಿಂದ ಯಾರು ಯಾರು ಪಡೆದುಕೊಳ್ಳುತ್ತಿದ್ದರೋ ಅವರೇ ಈಗಲೂ ಇದ್ದಾರೆ. ಕೆಲವರಿಗೇ ಈ ಕಂಟ್ರಾಕ್ಟ್ ಕೊಡುವುದು ಸರಿಯಲ್ಲ, ಇದನ್ನು ಛಿದ್ರಛಿದ್ರಗೊಳಿಸಿ ಹೆಚ್ಚಿನ ಜನರಿಗೆ ಕಂಟ್ರಾಕ್ಟ್ ಕೊಡಬೇಕೆಂದು ಸರ್ಕಾರ ವಿಚಾರ ಮಾಡಿದಾಗ ಇದೇ ಕಂಟ್ರಾಕ್ಟರ್‌ಗಳು ಅದನ್ನು ವಿರೋಧ ಮಾಡಿದರು. ಈ ಕಂಟ್ರಾಕ್ಟರ್‌ಗಳಿಗೆ ಅನುಕೂಲವಾಗುವ ರೀತಿಯಲ್ಲಿ ಹರಾಜು ಬೇಕಾಗಿದೆ. ಇದಕ್ಕೆ ಹಲವಾರು ಕಾರಣಗಳು ಇವೆ. ಇದನ್ನೆಲ್ಲಾ ನೀವು ಯಾವಾಗ ಕೊನೆಗೊಳಿಸುತ್ತೀರಿ ? ವಿರೋಧಪಕ್ಷದಲ್ಲಿರುವ ನಾವು ಏನಿದ್ದರೂ ನಿಮಗೆ ಸಲಹೆಗಳನ್ನು ಕೊಡಬಹುದು. ಆದರೆ ಅದನ್ನು ಕಾರ್ಯಗತ ಮಾಡುವವರು ನೀವು. ಆದ್ದರಿಂದ ಈ ಸೆಕೆಂಡ್ಸ್ ಮಾರಾಟವನ್ನು ಯಾವಾಗ ಕೊನೆಗೊಳಿಸುತ್ತೀರಿ ಮತ್ತು ಈ ಕಂಟ್ರಾಕ್ಟರ್ ರಾಜಕೀಯ ಪಕ್ಷಗಳ ಮೇಲೆ ತಮ್ಮ ಬಲೆಯನ್ನು ಏನು ಬೀಸುತ್ತಿದ್ದಾರೆ, ಅದನ್ನು ನೀವು ಯಾವಾಗ ಕಿತ್ತುಹಾಕುತ್ತೀರಿ ? ಮುಖ್ಯವಾಗಿ ಇದಕ್ಕೆಲ್ಲಾ ನಿಮ್ಮಲ್ಲಿ ಮೊದಲು ಮನೋದಾರ್ಢ್ಯತೆ ಬರಬೇಕು. ಈ ವಿಚಾರದಲ್ಲಿ ನೀವು ಒಂದು ತೀರ್ಮಾನಕ್ಕೆ ಬರಲೇಬೇಕು ಮತ್ತು ಒಂದು ಗುರಿಯನ್ನು ಮುಟ್ಟಲೇ ಬೇಕು. ಸಂಪೂರ್ಣವಾಗಿ ಇದನ್ನು ಕೊನೆ ಮಾಡಬೇಕು. ಈ ಡಿಸ್ಟಿಲರೀಸ್ ಏನಿದ್ದಾರೆ, ಅವರ ಅಧೀನರಾಗುವುದಿಲ್ಲ ಮತ್ತು ಅವರು ಹೇಳಿದಂತೆ ಕೇಳುವುದಿಲ್ಲ ಎಂಬತಕ್ಕಂಥ ತೀರ್ಮಾನಕ್ಕೆ ನೀವು ಬರಬೇಕು. ನಿಮಗೆ ಆ ಶಕ್ತಿ ಇದೆಯೋ? ಇದೇ ಇಲ್ಲಿರುವ ಪ್ರಶ್ನೆ.

ಶ್ರೀ ಬಿ. ಬಸವಲಿಂಗಪ್ಪ.— ನಾನು ಯಾವಾಗ ರಾಜಕೀಯಕ್ಕೆ ಪ್ರವೇಶ ಮಾಡಿದೆ ಅವತ್ತಿನಿಂದ ಇವತ್ತಿನವರೆಗೆ ಅದೇ ಮನೆತನದವರು ಕಂಟ್ರಾಕ್ಟ್ ಮಾಡುತ್ತಿದ್ದಾರೆ, ಸೇಂದಿ ಅವರದೇ, ವಿಸ್ಕಿ ಅವರದೇ, ಬ್ರಾಂದಿ ಅವರದೇ ಅವರೊಬ್ಬರೂ ಕುಡಿಯುತ್ತಾ ಇಲ್ಲ. ಅದನ್ನು ಬಡವರಿಗೆ ಮಾರಿಬಿಟ್ಟು ದುಡ್ಡು ಸಂಪಾದನೆ ಮಾಡತಕ್ಕಂಥಾದ್ದು. ಯಾವ ಯಾವ ಬಾಬಿಗೆ ಖರ್ಚನ್ನು ಮಾಡಬೇಕೋ ಅದನ್ನು ಮಾಡುತ್ತಾ ಇರುತ್ತಾರೆ. ಈಗ ಇದಕ್ಕೆ ಎನ್‌ಕರೇಜ್ ಮಾಡತಕ್ಕವರು ಯಾರು? ಗವರ್ನಮೆಂಟ್ ನೌಕರರು, ಮುಖ್ಯಸ್ಥರು. ಅದರಲ್ಲೂ ಪಿ.ಡಬ್ಲ್ಯು.ಡಿ. ಯಲ್ಲಿ ಇದ್ದಾರಲ್ಲ, ಕಂಟ್ರಾಕ್ಟರ್ಸ್ ಆದಿಯಾಗಿ, ಇಂಜಿನಿಯರ್ಸ್ ಆದಿಯಾಗಿ ಎನ್‌ಕರೇಜ್ ಮಾಡುತ್ತಾರೆ. ಈ ಇಂಜಿನಿಯರ್ಸ್ ಎಂತೆಂತಹವರು ಎಂದು ನಾನು ಹೇಳುವುದಿಲ್ಲ. ಅವರೆಲ್ಲಾ ಸೀನಿಯರ್ ಅಧಿಕಾರಿಗಳು, ಅವರಿಗೆಲ್ಲಾ ಡ್ರಿಂಕ್ಸ್ ಫಾರಿನ್‌ನಿಂದ ಬರಬೇಕು. ಇಲ್ಲಿನ ವಿಸ್ಕಿಯನ್ನು ಅವರು ಕುಡಿಯುವುದಿಲ್ಲ. ಇವತ್ತಿನ ದಿವಸ ಯಾವ ಅಧಿಕಾರಿ ಕುಡಿಯುವುದಿಲ್ಲ? ಯಾವ ಅಧಿಕಾರಿ ಬೇರೆಯವರ ದುಡ್ಡಿನಲ್ಲಿ ಕುಡಿಯುವುದಿಲ್ಲ, ಎಲ್ಲರೂ ಕುಡಿಯುತ್ತಾರೆ. ಆದಕ್ಕೋಸ್ಕರ ಕಂಟ್ರಾಕ್ಟರಿಗೆ ಎನ್‌ಕರೇಜಮೆಂಟ್, ಪ್ರೋತ್ಸಾಹ ಅಧಿಕಾರಿಗಳಿಂದ ಸಿಕ್ಕಿತು. ರಾಜಕೀಯ ಪಕ್ಷಗಳಿಂದ ಪ್ರೋತ್ಸಾಹ ಸಿಕ್ಕಿತು. ಇದನ್ನು ಯಾವಾಗ ಕೊನೆ ಮಾಡುತ್ತೀರಿ ಎನ್ನುವುದು ನನ್ನ ಪ್ರಶ್ನೆ. ಆ ಮೇಲೆ ಲಂಚ ತಾಂಡವವಾಡುತ್ತಿದೆ ಎಂದು ತಾವು ಹೇಳಬಹುದು.

ಶ್ರೀ ರಮೇಶ್ ಕುಮಾರ್.— ನೀವು ಅಲ್ಲಿ ಒಂದು ಕುಳಿತುಕೊಳ್ಳುವುದಕ್ಕೆ ಎಷ್ಟು ಬೇಕೋ ಅಷ್ಟು ಉಪಾಯವಾಗಿ ಮಾತನಾಡುತ್ತಿದ್ದೀರಿ. ನೀವು ಬಸವಲಿಂಗಪ್ಪನವರಾಗಿ ಮಾತನಾಡುತ್ತಾ ಇಲ್ಲ. ನೀವು ಬಸವಲಿಂಗಪ್ಪನವರಾಗಿ ಮಾತನಾಡಿ ಎಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತಾ ಇರುವುದು. ನೀವು ಸಬ್ಬಾಜಿ ಮಾಡಬೇಡಿ.

ಶ್ರೀ ಬಿ. ಬಸವಲಿಂಗಪ್ಪ.— ರಾಜಕೀಯ ಪಕ್ಷಗಳು ತೀರ್ಮಾನ ಮಾಡಬಹುದು.

ಶ್ರೀ ರಮೇಶ್ ಕುಮಾರ್.— ನೀವು ಮುಖ್ಯ ಮಂತ್ರಿಯಾದರೂ, ಆಗದೇ ಹೋದರೂ ಈ ರಾಜ್ಯದ ಚರಿತ್ರೆಯಲ್ಲಿ ನಿಮಗೆ ಒಂದು ಸ್ಥಾನ ಇದೆ. ನೀವು ಕೆಲವು ತೀರ್ಮಾನಗಳನ್ನು ತೆಗೆದು

ಕೊಂಡಿದ್ದೀರಿ. ನೀವು ಕಡೇ ದಿವಸಗಳಲ್ಲಿ ನಿಮ್ಮ ಹೆಸರು ಇನ್ನೂ ಉಜ್ವಲವಾಗಿ ಬೆಳೆಯುತಕ್ಕ ರೀತಿಯಲ್ಲಿ ನೀವು ಮಾತನಾಡಬೇಕು. ಏನೋ ರಾಜ್ಯಕಬಲಿ ಮಾಡಿಕೊಳ್ಳುತ್ತಾ ಇದ್ದೀರಿ, ನಿಮಗೆ ಛಾನ್ಸ್ ಇಲ್ಲ. ದಯಮಾಡಿ ಜನ ನಿಮ್ಮಿಂದ ಏನು ನಿರೀಕ್ಷೆ ಮಾಡುತ್ತಾರೋ ಅವರ ಮಾನಸ್ಸಿನಲ್ಲಿ ಅದು ಸ್ಥಿರವಾಗಿ ನಿಲ್ಲತಕ್ಕ ರೀತಿಯಲ್ಲಿ ಮಾತನಾಡಿ. ಏಕೆ ಈ ರೀತಿ ಮಾತನಾಡಂತ್ತಾ ಇದ್ದೀರಿ, ಏಕೆ ಭಯ ನಿಮಗೆ.

ಶ್ರೀ ಬಿ.ಬಸವಲಿಂಗಪ್ಪ.—ಅವರು ಕೊನೇ ಕಾಲ ಎಂದು ಹೇಳುತ್ತಾ ಇದ್ದಾರೆ. ಮಾನ್ಯ ಅಧ್ಯಕ್ಷರೇ! ಈಗ ಈ ಹೆಂಡ ಕುಡಿಸುವುದನ್ನು ತಪ್ಪಿಸಬೇಕು ಎನ್ನುವುದು ನನ್ನ ಇಚ್ಛೆ.

ಶ್ರೀ ರಮೇಶ ಕುಮಾರ್ ಕಾಂಟ್ರಿಬ್ಯೂಷನ್ ವಿಚಾರ ಮಾತನಾಡಿ ಅಂದರೆ ನೀವು ಹೆಂಡದ ವಿಚಾರ ಮಾತನಾಡಂತ್ತಾ ಇದ್ದೀರಿ. ನೀವು ಬಹಳ ಹುಷಾರಾಗಿ ಮಾತನಾಡುತ್ತಾ ಇದ್ದೀರಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ ನೀವಿಬ್ಬರೂ ಬಹಳ ಹುಷಾರಾಗಿ ಮಾತನಾಡುತ್ತಿದ್ದೀರಿ.

ಶ್ರೀ ಕೆ. ಹೆಚ್. ಶ್ರೀನಿವಾಸ್.— ಅಧ್ಯಕ್ಷರೆ, ಯಾವುದೇ ಲಾಬಿಯನ್ನು ಸಾಕಷ್ಟು ಬೆಳೆಸಿ ಬಿಟ್ಟು ಅದಕ್ಕೆ ಈಲ್ಡ್ ಆಗುವುದಿಲ್ಲ ಅಂದರೆ ಏನೂ ಅರ್ಥವಿಲ್ಲ. ಲಾಬಿಗಳನ್ನು ಬೆಳೆಸಿದ ಮೇಲೆ ಅದರ ಕೆಲಸ ಮಾಡುತ್ತದೆ. ಲಾಬಿಗಳು ಇರಬೇಕಾದ ಅಗತ್ಯ ಇದೆಯೋ. ಜನ ಕುಡಿಯುವುದನ್ನು ತಪ್ಪಿಸುವುದಕ್ಕೆ ಆಗುವುದಿಲ್ಲ ಎಂದು ಇದ್ದರೂ ಕೂಡ ಕುಡಿಯುವುದಕ್ಕೆ ಈಗಿರುವ ವ್ಯವಸ್ಥೆ ಇರಬೇಕು ಎಂದು ಏನೂ ಇಲ್ಲ. ಈಗ ಜನ ಕುಡಿಯುತ್ತಾರೆ ಎನ್ನುವುದಕ್ಕೂ ಸರ್ಕಾರ ಸರ್ಕಾರವೇ ಜನರಿಗೆ ಇಷ್ಟು ಹಂಚಿಸಿ ಕುಡಿಸುತ್ತದೆ ಎನ್ನುವುದಕ್ಕೂ ಬಹಳ ವ್ಯತ್ಯಾಸವಿದೆ. ನೀವು ಆ ಸೆಟ್ಲೈಟಿಯನ್ನು ಇಟ್ಟುಕೊಂಡು ಚರ್ಚೆ ಮಾಡದೇ ಹೋದರೆ ಅದು ಡಿರೇಲ್ ಆಗುತ್ತದೆ ಅಷ್ಟೆ.

ಶ್ರೀ ಬಿ, ಬಸವಲಿಂಗಪ್ಪ.— ಮಾನ್ಯ ಅಧ್ಯಕ್ಷರೆ, ಈಗ ನಮ್ಮದೊಂದು ನಿಧಾರ. ಏನೆಂದರೆ, ಬಡವರಿಗೆ ಕುಡಿಸಬಾರದು ಎಂಬ ನಿಧಾರ ಏನಿದೆ ಇದು ಅಚಲವಾಗಿರತಕ್ಕಂಥ ನಿರ್ಧಾರ. ಸಾಹುಕಾರರು, ಆಸ್ತಿವಂತರು ಏನಿದ್ದಾರೆ ಅವರು ಕುಡಿಯುವುದಕ್ಕೆ ನಮ್ಮದೇನೂ ಅಭ್ಯಂತರವಿಲ್ಲ. ಅವರಿಗೆ ತೆರಿಗೆ ಜಾಸ್ತಿ ಹಾಕಿ ಕುಡಿಸಿ. ಈಗ ನೀವು ಏನು ಮಾಡುತ್ತಿದ್ದೀರಿ ಅಂದರೆ, ಬೆಲೆ ಕಡಿಮೆ ಮಾಡಿ ೫ ರೂಪಾಯಿ, ೬ ರೂಪಾಯಿ, ೧೦ ರೂಪಾಯಿ ಕಡಿಮೆಮಾಡಿ ನೀವು ಬಡವರಿಗೆ ಕುಸಿಡಿ, ಅವರು ದುಡಿಯುವುದನ್ನು ಕಸಿದುಕೊಂಡು ಅವರ ಸಂಸಾರವನ್ನು ಹಾಳುಮಾಡುವಂಥ ಪ್ರವೃತ್ತಿ ಏನಿದೆ ಇದು ಸರ್ಕಾರಕ್ಕೆ ಇರಬಾರದು. ಇದಕ್ಕೆ ಸರ್ಕಾರ ನೇರವಾಗಿ ಪ್ರೋತ್ಸಾಹ ಕೊಡಕೊಡದು. ಸೆಕೆಂಡ್ಸ್ ಆಗಲಿ, ಡೈರೆಕ್ಟ್ ಆಗಲಿ, ಯಾವುದಾದರೂ ಆಗಲಿ ಪ್ರೋತ್ಸಾಹ ಮಾಡಲೇಬಾರದು. ಆದರೆ ನೀವು ಪ್ರೋತ್ಸಾಹ ಮಾಡಿದಿರಿ. ಆದ್ದರಿಂದ ದಯಮಾಡಿ ನಿಮ್ಮ ಜನತಾ ಪಕ್ಷದ ನೀತಿಯನ್ನು ಬದಲಾವಣೆ ಮಾಡಿ. ಇದು ಒಂದು. ಇನ್ನು ಎರಡನೆಯದು, ದಲಿತರ ಕೇರಿಗಳಲ್ಲಿ ನೀವು ಹೆಂಡದ ಅಂಗಡಿಗಳನ್ನು ಬೀರು, ಬ್ರಾಂದಿ ಷಾಪುಗಳನ್ನು ಇಡಲಿಕ್ಕೆ ಒತ್ತಾಯಮಾಡಿ ಇಡುತ್ತಿದ್ದೀರಿ. ಇದಕ್ಕೆ ಏನು ಕಾರಣ. ನಾವು ಈ ಸದನದಲ್ಲಿ ಹಲವಾರು ಬಾರಿ ಹೇಳಿದ್ದೇವೆ. ಮಾನ್ಯ ಮುಖ್ಯ ಮಂತ್ರಿಗಳು ನಿಮ್ಮ ಸಲಹೆಯನ್ನು ಒಪ್ಪಿಕೊಂಡಿದ್ದೇವೆ. ಇನ್ನು ಮೇಲೆ ದಲಿತರ ಕೇರಿಗಳಲ್ಲಿ. ಬಡವರ ಕೇರಿಗಳಲ್ಲಿ ಇದು ಇರಬಾರದು ಎಂದು ಹೇಳುತ್ತಾರೆ, ನಾನು ಒಂದು ಉದಾಹರಣೆ ಹೇಳುತ್ತೇನೆ. ಹಾಸನ ಜಿಲ್ಲೆಯ, ಹೊಳೆನರಸೀಪುರದಲ್ಲಿ ದಲಿತರ ಕಾಲೋನಿ ಇದೆ. ಅಲ್ಲಿ ಸುಮಾರು ೬ ಸಾವಿರ ಓಟುಗಳು ಇವೆ. ಅಲ್ಲಿ ಎಲ್ಲರೂ ಕಾಂಗ್ರೆಸ್‌ನವರೇ ಇದ್ದಾರೆ. ಅಲ್ಲಿರತಕ್ಕ ೨–೩ ಜನ ದಲಿತ ಪ್ರತಿನಿಧಿಗಳನ್ನು ಹಿಡಿದುಕೊಂಡು ಅವರ ಮುಖಾಂತರ ದಲಿತರ ಕೇರಿಯಲ್ಲಿ ಶೇಂದಿ ಅಂಗಡಿ ಇಡುವ, ಬ್ರಾಂದಿ ಷಾಪ್ ಇಡುವ ಪ್ರಯತ್ನ ನಡೆಯಿತು. ಅದರಂತೆ ಕಂಟ್ರಾಕ್ಟುದಾರರಿಗೆ ಜಯ ಸಿಕ್ಕಿತು ಲೈಸೆನ್ಸ್ ಸಿಕ್ಕಿತು. ಅದಕ್ಕೆ ಅಲ್ಲಿನ ಪೋಲೀಸ್ ಅಧಿಕಾರಿಗಳು ಪ್ರೋತ್ಸಾಹ ಕೊಟ್ಟರು. ಆದರೆ, ಅಲ್ಲಿ ವಾಸ ಮಾಡುವ ವಿದ್ಯಾವಂತ ದಲಿತರು ನಮ್ಮ ಕೇರಿಯಲ್ಲಿ ಇಂಥ ಅಂಗಡಿಗಳನ್ನು ತೆಗೆಯಕೂಡದೆಂದು ಪ್ರತಿಭಟನೆ ಮಾಡಿದರು. ಆದರೆ, ಸ್ಥಳೀಯ ಪೋಲೀಸರು ಕಂಟ್ರಾಕ್ಟುದಾರರ ಕಡೆಯಿಂದ ದೂರು ತೆಗೆದುಕೊಂಡು ಬಂದು, ಎಂ.ಎ. ಓದಿ, ಪಿ.ಹೆಚ್.ಡಿ. ಮಾಡಿರುವಂಥ ಪ್ರೊಫೇಸರುಗಳು ಇದ್ದಾರೆ, ಬ್ಯಾಂಕ್ ನೌಕರರುಗಳು ಇದ್ದಾರೆ, ಇವರೆನ್ನೆಲ್ಲಾ ಪೋಲೀಸ್ ವ್ಯಾನಿನಲ್ಲಿ ತುಂಬಿಕೊಂಡು ಹೋಗತಕ್ಕ ಸಾಹಸ ಮಾಡಿದರು. ಇದರ ಹಿನ್ನಲೆ ಏನು? ಹೊಳೆನರಸಿಪುರದಲ್ಲಿ ಎಕ್ಸೈಜ್ ಕಂಟ್ರಾಕ್ಟುದಾರರಿಗೆ ಅನುಕೂಲ ಮಾಡಿ ಕೊಡುವುದಕ್ಕಾಗಿ ವಿದ್ಯಾವಂತ ದಲಿತರನ್ನು ಅರೆಸ್ಟ್ ಮಾಡಿದ್ದೀರಿ. ನಂತರ ಅವರನ್ನು ಬೇಲ್ ಮೇಲೆ

ಬಿಟ್ಟಿದಾರೆ. ಛಾರ್ಜ್‌ಷೀಟ್ ಹಾಕಿರಬಹುದು, ಛಾರ್ಜ್‌ಷೀಟ್ ಹಾಕಿದರೆ ವಿನಾಗುತ್ತದೆ ಕ್ರಿಮಿನಲ್ ಕೇಸುಗಳನ್ನು ಹಾಕುತ್ತಾರೆ, ಹಿರಿಯರಿಂಗೆ ಹೋಗಬೇಕಾಗುತ್ತದೆ. ನೌಕರ ವರ್ಗದವರು ಕೆಲಸಗಳನ್ನು ಬಿಟ್ಟು ಕೋರ್ಟಿಗೆ ಓಡಾಡುವುದಕ್ಕೆ ಕಷ್ಟವಾಗುವುದಿಲ್ಲವೆ? ಈ ಕೆಲಸ ದಯಮಾಡಿ ಮಾಡಬೇಡಿ. ದಲಿತರು ಜನತಾ ಪಾರ್ಟಿಗೆ ಓಟು ಹಾಕಲಿಲ್ಲ ಎಂದು ಈ ರೀತಿ ಮಾಡಿದ್ದಾರೆ. ಜನತಾ ಪಾರ್ಟಿಗೆ ಅಲ್ಲಿ ಓಟು ಬಂದಿವೆ. ಯಾವ ರಾಜಕೀಯ ಪಕ್ಷಗಳೇ ಆಗಲಿ ತಮ್ಮ ಪಕ್ಷಕ್ಕೆ ಬೆಂಬಲ ಪಡೆಯುವ ಉದ್ದೇಶದಿಂದ ಇಂಥ ಪ್ರಯತ್ನ ಮಾಡುವುದು ಸಲ್ಲದ ಮಾತಾಗುತ್ತದೆ. ಅದನ್ನು ಮಾಡಬಾರದು. ಇಂಥ ಕೆಲಸವನ್ನು ಸರ್ಕಾರದವರು ಖಂಡಿತವಾಗಿಯೂ ಮಾಡಲೇಬಾರದು. ಕೊನೆಯದಾಗಿ ಮಾನ್ಯ ಶ್ರೀನಿವಾಸ್ ಅವರು ಏನೊಂದು ನಿರ್ಣಯ ತಂದಿದ್ದಾರೆ,ಅದು ಸ್ವಾಗತಾರ್ಹವಾಗಿದೆ. ಪಾನ ವಿರೋಧ ನಿರ್ಮೂಲನಾ ಮಂಡಲಿಯನ್ನು ಈ ಸರ್ಕಾರ ತೆಗೆದುಬೇಕು,ಇಲ್ಲಿಯವರೆವಿಗೂ ಕುಡಿಸತಕ್ಕ ನೀತಿಯನ್ನು ಇವರು ಇಟ್ಟುಕೊಂಡು ಬಂದಿದ್ದಾರೆ.ಅದನ್ನು ಇವತ್ತೇಕೊನೆಮಾಡಬೇಕು.ಪಾನವಿರೋಧವನ್ನು ಕಡಿಮೆ ಮಾಡುವುದಕ್ಕೆ ಸಂಬಂಧಪಟ್ಟಂತೆ ನಿರ್ಧಾರ ಏನಾದರೂ ಇದ್ದರೆ ಅದಕ್ಕೆ ಸಂಬಂಧಪಟ್ಟಂತೆ ಪಾನನಿರೋಧ ಸಮಿತಿಯನ್ನಾಗಲೀ. ಹೈಪವರ್ ಸಮಿತಿಯನ್ನಾಗಲೀ ನೇಮಕ ಮಾಡಿ, ಅವರು ಏನು ಶಿಫಾರಸ್ಸು ಮಾಡುತ್ತಾರೆ, ಅದರ ಮೇಲೆ ನಿರ್ಣಯ ತೆಗೆದುಕೊಳ್ಳಿ. ಮಾನ್ಯ ಶ್ರೀನಿವಾಸ್ ತಂದಿರುವ ನಿರ್ಣಯಕ್ಕೆ ಮಾನ್ಯ ಜೆ. ಹೆಚ್. ಪಟೇಲರು ಉತ್ತರ ಕೊಡುವುದು ಅನಿವಾರ್ಯ. ನಾನು ಕೊಟ್ಟಿರುವ ಎರಡು ಸಲಹೆಗಳನ್ನು ಒಪ್ಪಿಕೊಂಡು ಉತ್ತರಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

† ಶ್ರೀ ಕೆ. ಹೆಚ್. ಪಾಟೀಲ್ (ಗದಗ್).— ಸನ್ಮಾನ್ಯ ಅಧ್ಯಕ್ಷರೆ, ಈ ಮಹತ್ವವಾದ ವಿಷಯದ ಮೇಲೆ ನಾವು ತೀಕ್ಷ್ಣವಾದ ಚರ್ಚೆ ಮಾಡುವುದು ಅವಶ್ಯ. ಇದರಲ್ಲಿ ಕೇವಲ ವಿನೋದ ಲಹರಿಯಿಂದ ಮಾತನಾಡಿ ಇದರ ಮಹತ್ವವನ್ನು ಕಡಿಮೆ ಮಾಡಬಾರದು. ಈ ದೇಶದಲ್ಲಿ ಸುರಪಾನ, ಮಧ್ಯಪಾನ ಎನ್ನುವ ಹೆಸರಿನಿಂದ ಯಾವಾಗಲೂ ಕುಡಿಯುವ ಸಂಪ್ರದಾಯ ಇದ್ದು. ಅದು ನಡೆದು ಬಂದಿದೆ. ಹಿಂದೆ ಈಚಲ ಮರಗಳು ಬೇಕಾದಷ್ಟು ಬೆಳೆದಿದ್ದು. ಫ್ರೀಡಮ್ ಫೈಟರ್ಸ್ ದೇಶದಲ್ಲಿ ಈಚಲ ಗಿಡಗಳನ್ನು ಕಡಿಯುವಂಥಾದ್ದು ವಿತರ್ಕ ಮಾಡಿದರು ಎಂದರೆ ಮಧ್ಯಪಾನ ಬಂದ್ ಮಾಡಬೇಕೆಂದು ಮಾಡಿದರು. ಮಹಾತ್ಮ ಗಾಂಧಿಯವರು ಅನೇಕ ದೃಷ್ಟಿಯಲ್ಲಿ ಈ ಚಳುವಳಿಯನ್ನು ಹೆಚ್ಚು ವ್ಯಾಪಕವಾಗಿ ಮಾಡಬೇಕು, ಎಲ್ಲರಿಗೂ ತಿಳಿಸಿ ಹೇಳಬೇಕು. ಯಾವ ರೀತಿಯಿಂದ ಜನರ ಮನಸ್ಸನ್ನು ಪರಿವರ್ತಿಸಿ, ನಾವು ಈ ಜನರಿಗೆ ವಿಚಾರ ಮುಟ್ಟಿಸಬೇಕು ಎನ್ನುವ ದೃಷ್ಟಿಯಿಂದ ಅಹೋ ರಾತ್ರಿ ತಪಸ್ಸು ಮಾಡಿದರು. ಆದರೆ ಅವರಿಗೂ ಸಹ ಅದು ಸಾಧ್ಯವಾಗಲಿಲ್ಲ. ಆ ಕಾಲಕ್ಕೆ ಸರ್ಕಾರ ಬಂದಾಗ ಮೊಟ್ಟಮೊದಲು ಸುರಪಾನ ತೆಗೆಯಬೇಕೆಂದು ಮುಂಬೈ ಪ್ರಾಂತ್ಯದಲ್ಲಿ ಮೊರಾರ್ಜಿ ದೇಸಾಯಿ ಯವರು ಇತರರೆಲ್ಲರೂ ಪ್ರಯತ್ನ ಮಾಡಿದರು. ಈ ರೀತಿ ಪ್ರಯತ್ನ ಮಾಡಿದಾಗ ಸರ್ಕಾರ ನಡೆಸಲಿಕ್ಕೆ ಹಣ ಬೇಕು ಎನ್ನುವ ವಿಚಾರ ಬಂತು. ಈ ಹಣ ಸುರಪಾನದಿಂದ ಮಾತ್ರ ನಮಗೆ ಸಾಧ್ಯ ಎನ್ನುವ ವ್ಯಾಖ್ಯಾನ ಅನೇಕ ಜನರಿಂದ ಬಂತು. ಆ ಸಂದರ್ಭದಲ್ಲಿ ಈ ಮಧ್ಯಪಾನದ ಬದಲು ಸೇಲ್ಸ್‌ಟ್ಯಾಕ್ಸ್ ಇಂಟ್ರಡ್ಯೂಸ್ ಮಾಡಿ ಎಂದು ಸೇಲ್ಸ್‌ಟ್ಯಾಕ್ಸ್ ಇಂಟ್ರಡ್ಯೂಸ್ ಮಾಡಿದರು. ಕುಡಿಯುವುದನ್ನು ಬಂದ್ ಮಾಡಿ ಸೇಲ್ಸ್‌ಟ್ಯಾಕ್ಸ್‌ನಿಂದ ಬಂದಂಥಹಣದಿಂದ ಸರ್ಕಾರವನ್ನು ನಡೆಸಿ ಎಂದು ಹೇಳಿದರು. ಕಡೆಗೆ ಬರು ಬರುತ್ತಾ, ನನ್ನದು, ನನ್ನದೇ, ನಿಮ್ಮದು ನನ್ನದೇ ಎನ್ನುವ ಹಾಗೆ ಆಯಿತು, ೧೯೪೭ನೇ ಇಸವಿಯಿಂದ ಇಲ್ಲಿಯವರೆಗೆ ಎಲ್ಲಾ ಸರ್ಕಾರಗಳು, ಕೇಂದ್ರದಲ್ಲಿರಲಿ, ರಾಜ್ಯದಲ್ಲಿರಲಿ, ಇದರ ಬಗ್ಗೆ ಹೇಳುವಂಥ ಹೆಚ್ಚು ನಿಷ್ಠಾವಂತ, ನೀತಿವಂತ ಜನರು ಕಡಿಮೆಯಾಗಿದ್ದಾರೆ. ಇದರ ಪರಿಣಾಮವಾಗಿ ಇಡೀ ದೇಶದಲ್ಲಿ ಹೆಚ್ಚು ಕುಡಿಯುವುದನ್ನು ನಾವು ಕಾಣುತ್ತಿದ್ದೇವೆ. ನಾನು ಈ ಠರಾವಿನ ಮುಖ್ಯ ಉದ್ದೇಶಕ್ಕೆ ಬರುವುದಕ್ಕೆ ಮೊದಲು ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಸರ್ಕಾರ ನಡೆಸಲಿಕ್ಕೆ ಹಣ ಬೇಕು ಎನ್ನುವುದು ನಿಜ, ಯಾವ ದೇಶವಾಗಲಿ, ರಾಜ್ಯವಾಗಲಿ, ಸಂಪತ್ತನ್ನು ರೂಢಿಸಬೇಕಾದರೆ, ಬಡತನವನ್ನು ಒಬ್ಬರಿಂದ ಇನ್ನೊಬ್ಬರಿಗೆ ಹಂಚು ವುದರಿಂದ, ಬಡತನ ನಿವಾರಣೆಯಾಗುವುದಿಲ್ಲ. ಬಡತನದಲ್ಲಿರುವವರ ಅಲ್ಪ ಹಣವನ್ನು ಇನ್ನೊಬ್ಬರಿಗೆ ಕೊಟ್ಟು ವಿತರಣೆ ಮಾಡುವಂಥಾದ್ದು ಆಗುತ್ತಿದೆಯೇ ಹೊರತು ಬೇರೇನೂ ಆಗುತ್ತಿಲ್ಲ. ಮನುಷ್ಯನ ಉತ್ಪಾದನಾ ಶಕ್ತಿಯೇ ಕಡಿಮೆಯಾಗುತ್ತಿದೆ. ಈ ರೀತಿಯ ಹಣದ ವಿತರಣೆಯಲ್ಲಿ ಮನುಷ್ಯನ ಸಮಯವೇ ಕಳೆಯುತ್ತಿದೆ. ಅವನು ಕುಡಿದ ಸಮಯದಲ್ಲಿ ತನ್ನನ್ನು ತಾನು ಮರೆತು ಅನೇಕ ಅವ್ಯವಹಾರ ಕೆಲಸಗಳನ್ನು ಮಾಡುತ್ತಾನೆ. ವಿವೇಕವುಳ್ಳವರು ತಮ್ಮ ಮನಸ್ಸಿನ ಶಾಂತಿಗಾಗಿ

ಕೆಲವರು ಕುಡಿಯುತ್ತಾರೆ. ಸಮಯ ಮಾತ್ರ ದೇಶದ್ದು, ರಾಜ್ಯದ್ದು, ಹಾಳಾಗುತ್ತದೆ ಎನ್ನುವುದನ್ನು ಮಾತ್ರ ಮರೆಯಬಾರದು. ಇದೇ ಸಮಯವನ್ನು ದೇಶದ ಉತ್ಪಾದನೆಗೆ ಉಪಯೋಗ ಮಾಡುವ ಬಗ್ಗೆ ವಿಚಾರ ಮಾಡಬೇಕು. ಈ ಠರಾವಿನ ಉದ್ದೇಶ ಅದು ಒಂದು ಇರಬೇಕು. ಈ ರೀತಿಯ ಉತ್ಪಾದನೆಯ ಬಗ್ಗೆ ವಿಚಾರ ಮಾಡಿ. ದೇಶದ ಸಂಪತ್ತು ಹೆಚ್ಚಿಸಿ ಒಂದು ಸಾವಿರ ರೂಪಾಯಿ ಟ್ಯಾಕ್ಸ್ ಬರುವ ಕಡೆ ಐದುನೂರು ರೂಪಾಯಿ ಟ್ಯಾಕ್ಸ್ ತೆಗೆದುಕೊಂಡರೆ ಆಗ ಮಾತ್ರ ನಿಜವಾಗಿ ದೇಶದ ಸಂಪತ್ತು ಬೆಳೆಯುತ್ತದೆ. ಅದನ್ನು ಬಿಟ್ಟು ಇದ್ದ ಅಂಗಿಯನ್ನು ಮಾರಾಟ ಮಾಡಿ ಎರಡು ರೂಪಾಯಿ ಟ್ಯಾಕ್ಸ್ ಕಲೆಕ್ಟ್ ಮಾಡಿದರೆ ಅವನ ಬಡತನವು ಹೆಚ್ಚಾಗುತ್ತದೆ, ದೇಶದ ಖಜಾನೆಯೂ ಬರಿದಾಗುತ್ತದೆ. ಇವೊತ್ತು ಹಣವನ್ನು ಯಾರು ಕಬಳಿಸುತ್ತಿದ್ದಾರೆ ಅಂದರೆ ಈ ಕಂಟ್ರಾಕ್ಟರ್ಸ್ ಏನಿದ್ದಾರೆ ಅವರು ಈ ಹಣವನ್ನು ಕಬಳಿಸುತ್ತಿದ್ದಾರೆ ಎನ್ನುವುದು ಎಲ್ಲರಿಗೂ ತಿಳಿದಿದೆ. ಹಿಂದೆ ಕಾಂಗ್ರೆಸ್ ಸರ್ಕಾರ ಇದ್ದಾಗ ಕೂಡ ಕುಡಿಯುವ ಹವ್ಯಾಸದಲ್ಲಿ ಅನೇಕ ಜನರು ಇದ್ದರು. ಸರ್ಕಾರವೂ ಕೂಡ ಕಂಟ್ರಾಕ್ಟರುಗಳ ಕೈವಶದಲ್ಲಿದ್ದು, ಆ ಸರ್ಕಾರದವರು ಅನೇಕ ರೀತಿಯ ವ್ಯಾಮೋಹಕ್ಕೆ ಬಿದ್ದು, ಅವನು ಹೇಳಿದ ಹಾಗೆ ಕೇಳುವವರಾಗಿದ್ದರು. ಈ ರೀತಿಯಲ್ಲಿರುವಾಗ ಅವರು ಆರೋಗ್ಯಕರವಾದ ಮದ್ಯ ಕೊಡಲಿಕ್ಕೆ ಹೇಗೆ ಸಾಧ್ಯ. ಅವನಿಗೆ ಹಣ ಎಲ್ಲಿಂದ ಬರಬೇಕು. ಒಂದು ಬಿಲ್ಲೆ ಖರ್ಚುಮಾಡಿ ಸಾವಿರಾರು ರೂಪಾಯಿ ತೆಗೆದುಕೊಳ್ಳುತ್ತಿದ್ದ. ಅಮೋನಿಯಮ್ ಕ್ಲೋರೈಡ್ ಹಾಕಿ, ನೀರು ಸುರಿದು ಇದನ್ನೇ ಕುಡಿಯಿರಿ ಎಂದು ಕೊಡುತ್ತಿದ್ದ. ಇದು ಜಗಜ್ಜಾಹೀರವಾಗಿ ಗೊತ್ತಿದ್ದರೂ ಸಹ ಸರ್ಕಾರ ಸುಮ್ಮನೆ ಇದೆ ಎಂದರೆ ಹೇಗೆ ? ಅದು ಯಾವ ಸರ್ಕಾರವೇ ಆಗಿರಲಿ, ಹಿಂದಿನ ಸರ್ಕಾರ ಇರಲಿ, ಈಗಿನ ಸರ್ಕಾರ ಇರಲಿ, ಇಂತಹ ಸರ್ಕಾರವನ್ನು ಭ್ರಷ್ಟ ಸರ್ಕಾರ ಎಂದು ಕರೆದರೆ ಏನು ತಪ್ಪಾಗುತ್ತದೆ. ದೇಶದ್ರೋಹಿ ಸರ್ಕಾರ ಎಂದು ಕರೆದರೆ ಏನು ತಪ್ಪಾಗುತ್ತದೆ. ಇದರಲ್ಲಿ ಜಾತಿಬೇಡ, ಪಕ್ಷಬೇಡ, ಮತ ಬೇಧ ಬೇಡ. ಈ ದೇಶದ ದೃಷ್ಟಿಯಿಂದ ವಿಚಾರ ಮಾಡಿದರೆ ನಾವೆಲ್ಲರೂ ತಪ್ಪುಗಾರರಾಗಿದ್ದೇವೆಂದು ನನಗೆ ಕಂಡುಬರುತ್ತದೆ. ಇವೊತ್ತು ಸಿಗರೇಟ್ ಪೆಟ್ಟಿಗೆಗಳನ್ನು ನಾವು ನೋಡುತ್ತೇವೆ. ಅದರಲ್ಲಿ ಅಡ್ವರ್‌ಟೈಸ್‌ಮೆಂಟ್ ಏನು ಇರುತ್ತದೆ, smoking is injuries to health. Still it is sold.

೧-೩೦ ಪಿ.ಯಂ.

ಮಾನ್ಯ ಬಸವಲಿಂಗಪ್ಪನವರು ಮಾತನಾಡಿದ್ದು ದು ಈ ಪ್ರೊಹಿಬಿಷನ್‌ನ್ನು ಬಂದ್ ಮಾಡಿ ಎಂದು ಆದರೆ ಅದು ಹಾಗಲ್ಲ. ಆದರೆ ಮಾನ್ಯ ಬಸವಲಿಂಗಪ್ಪನವರು ಒಳಹೊಕ್ಕು ನೋಡಿದರೆ, ಪ್ರೊಹಿಬಿಷನ್ ಕಮಿಟಿ ಎಂದು ಏತಕ್ಕೆ ಮಾಡಿದರು ಎಂದರೆ ಮಹಾತ್ಮಾ ಗಾಂಧೀಜಿಯವರ ಭಕ್ತರು ಎನ್ನುವವರು ಕೆಲವರು ಕೇಂದ್ರದಲ್ಲೂ ಇದ್ದಾರೆ, ನಮ್ಮ ರಾಜ್ಯದಲ್ಲೂ ಇದ್ದಾರೆ, ಅವರನ್ನು ಬಿಟ್ಟು ಇವರು ರಾಜಕಾರಣವನ್ನು ಮಾಡುವುದಕ್ಕಾಗುವುದಿಲ್ಲ. ಮಾನ್ಯ ಜಯಪ್ರಕಾಶ್ ನಾರಾಯಣ್‌ರವರಾಗಲಿ ಅಥವಾ ಅವರ ಹಿಂದಿರತಕ್ಕ ಅನೇಕ ಜನರಾಗಲಿ ಅಥವಾ ಬೇರೆಯವರಾಗಲಿ ಜನತಾ ಪಕ್ಷದವರಿಗೆ ತಿಳಿಸುತ್ತಾರೆ. ಅದೇರೀತಿ ನಿನ್ನೆ ಸತ್ತಂಥ ಗಡಿನಾಡು ಗಾಂಧಿಯಂಥ ಜನರು ಏನಾದರೂ ಇದ್ದರೆ ಅವರೆಲ್ಲರೂ ಕಾಂಗ್ರೆಸ್‌ನವರಿಗೆ ತಿಳಿಸುತ್ತಾರೆ, ನೀವು ಪ್ರೊಹಿಬಿಷನ್‌ನ್ನು ಬಿಡುವುದಕ್ಕಾಗುವುದಿಲ್ಲ ಎಂದು ಹೇಳುತ್ತಾರೆ. ಪ್ರೊಹಿಬಿಷನ್ ಬೇಕು, ಬೇಕು ಎಂದು ಹೇಳುವಂಥ ಅನೇಕ ಹಿರಿಯರೂ ಇದ್ದಾರೆ. ಅವರನ್ನು ಸಮಾಧಾನ ಮಾಡುವುದಕ್ಕಾಗಿ ಪ್ರೊಹಿಬಿಷನ್ ಕಮಿಟಿ ಎಂದು ಮಾಡಿದ್ದಾರೆ, ಉಳಿದದ್ದಕ್ಕಲ್ಲ. ಅವರನ್ನು ಸಮಾಧಾನ ಮಾಡುವುದಕ್ಕೆ ಪ್ರೊಹಿಬಿಷನ್ ಕಮಿಟಿಯವರು ನೀವು ಕುಡಿಯಬೇಡಿ, ಕುಡಿಯಬೇಡಿ ಎಂದು ಹೇಳುತ್ತಿದ್ದಾರೆ. ಇದು ಇಂಜೂರಿಯಸ್ ಟು ದಿ ಹೆಲ್ತ್ ಎಂದು ಹೇಳುತ್ತಿದ್ದಾರೆ. ಇನ್ನು ಕಂಟ್ರಾಕ್ಟರ್‌ಗಳು ನೀವು ಕುಡಿಯಿರಿ, ಕುಡಿಯಿರಿ, ಎಂದು ಹೇಳುತ್ತಿದ್ದಾರೆ, ಇಂಥ ಒಂದು ದುರದೃಷ್ಟಕರ ಪರಿಸ್ಥಿತಿ ನಮ್ಮ ರಾಜ್ಯದಲ್ಲಿ, ನಮ್ಮ ದೇಶದಲ್ಲಿದೆ, ಸ್ವಾಮಿ, ೨-೩ ವರ್ಷಗಳ ಹಿಂದೆ ಅಂದರೆ ನೀವು ಅಧಿಕಾರಕ್ಕೆ ಬಂದ ಮೇಲೆ ಇರಬಹುದು, ಅಥವಾ ಬರುವುದಕ್ಕೆ ಮುಂಚಿತವಾಗಿ ಅನೇಕ ಜನರು ಕುಡಿದು ಸತ್ತರು. ಆದರೆ ಅವರು ಕುಡಿದು ಸಾಯಲಿ ಎಂದು ಯಾರೂ ಆ ಒಂದು ಅಕ್ಷಮ್ಯ ಅಪರಾಧವನ್ನು ಮಾಡಲಿಲ್ಲ. ಇದನು ಯಾರಾದರೂ ಮಾಡಿದರೆ? ಇದು ಹೇಗಾಯಿತು ಎಂದರೆ ದಿನವೂ ಕುಡಿದಂಥ ಮದ್ಯದಲ್ಲಿ ಅಥವಾ ಸೇಂದಿಯಲ್ಲಿ ಇದ್ದಂಥ ವಿಷ ಅಮಲಿಗಿಂತಲೂ ಅತಿಯಾಗಿ ಅವರು ಮರಣಕ್ಕೆ ಈಡಾದರು. ಆಮೇಲೆ ಇದರ ಬಗ್ಗೆ ಒಂದು

ಕಮಿಟಿಯನ್ನು ನೇಮಕ ಮಾಡಿದರು. ಅವರು ಏನು ಮಾಡಿದರು, ಇನ್ನುಮೇಲೆ ಚಲೋ ಇರತಕ್ಕದ್ದನ್ನೇ ಬಾಟ್ಲಿಯಲ್ಲಿ ಹಾಕಿಸಿ ಕೊಡಿ ಎಂದು ಹೇಳಿದರು. ಅದರ ಪ್ರಕಾರ ನೀವು ಸೇಂದಿಯನ್ನು ಬಾಟ್ಲಿಯಲ್ಲಿ ಹಾಕಿಸುವುದಕ್ಕೆ ಹೋದಾಗ ನಿಮ್ಮ ಮೇಲೆ ಅನೇಕ ಅಪಾದನೆಗಳನ್ನು ಮಾಡಿದರು. ಆದ್ದರಿಂದ ಇದನ್ನೆಲ್ಲಾ ಯಾವರೀತಿ ಮಾಡಿದರೆ ಜನರಿಗೆ ಕಲ್ಯಾಣ ಆಗುತ್ತದೆಂಬುದನ್ನು ನೀವು ಯೋಚನೆ ಮಾಡಬೇಕು. ಜನರ ಕಲ್ಯಾಣ ಮಾಡುವುದು ಸಹ ನಮ್ಮ ಗುರಿ ಮತ್ತು ಕರ್ತವ್ಯ ಎಂಬುದನ್ನು ನಾವೂ, ನೀವೂ, ಎಲ್ಲರೂ ಒಪ್ಪಿಕೊಳ್ಳುತ್ತೇವೆ. ಅವರ ಯಾವರೀತಿ ಕಲ್ಯಾಣವಾಗಬೇಕೆಂಬುವದರಲ್ಲಿ ನಮ್ಮ, ನಿಮ್ಮ, ಅಭಿಪ್ರಾಯದಲ್ಲಿ ಬದಲಾಣೆ ಇರಬಹುದು. ಯಾವುದೇ ಸರ್ಕಾರವಾದರೂ ಅದರ ಗುರಿ ಜನರ ಕಲ್ಯಾಣ ಎಂಬುದನ್ನು ಎಲ್ಲರೂ ಒಪ್ಪಿಕೊಳ್ಳುತ್ತಾರೆ. ಹರಿಜನರ ಕಲ್ಯಾಣ ಮಾಡುತ್ತೇವೆ, ಬಡವರ ಕಲ್ಯಾಣ ಮಾಡುತ್ತೇವೆ ಎನ್ನುವ ಮಾತನ್ನು ನಾವೂ, ನೀವೂ ಕೂಡಿಯೇ ಹೇಳುತ್ತೇವೆ. ಆದರೆ ಹಾಗೆ ಹೇಳಿಕೊಂಡು ತಿರುಗುವವರೇ ಹರಿಜನರ ಕೇರಿಯಲ್ಲಿ ಮದ್ಯ ಕುಡಿಯಲು ಅಂಗಡಿ ಇಟ್ಟರೆ ಹರಿಜನರು ಉದ್ಧಾರವಾಗುವುದಕ್ಕೆ ಸಾಧ್ಯವೆ ? ನೂರು ವರ್ಷವಾದರೂ ಅವರು ಉದ್ಧಾರ ಆಗುವುದಿಲ್ಲ, ಅವರು ಮುಂದೆಬರಲು ಸಾಧ್ಯವಾಗುವುದಿಲ್ಲ. ಕೆಲವು ಮುಂದುವರಿದ ಜನಾಂಗದವರು ತಮ್ಮ ಘನತೆ, ಗೌರವಗಳನ್ನು ಅರಿತುಕೊಂಡು ತಮ್ಮ ತಮ್ಮ ಅಚ್ಚುಕಟ್ಟಿನಲ್ಲಿತಮಗೆ ಎಷ್ಟು ಬೇಕೊ ಅಷ್ಟನ್ನು ಕುಡಿದು ಮನೆಯಲ್ಲೇ ಇರಬಹುದು. ಆದರೆ ಬಡವರು ಆ ರೀತಿ ಇರುವುದು ಸಾಧ್ಯವೆ ? ಸಾಲ ಮಾಡಿ ಕುಡಿಯುತ್ತಾನೆ, ಕುಡಿದ ಮೇಲೆ ಸಾಲ ಕೊಟ್ಟವನು ಸಾಲವನ್ನು ಕೇಳುತ್ತಾನೆ. ಅದನ್ನು ಮರೆಯುವುದಕ್ಕೆ ಇವನು ಮತ್ತಷ್ಟು ಕುಡಿಯುತ್ತಾನೆ. ಮತ್ತಷ್ಟು ಕುಡಿಯುತ್ತಾನೆ, ಮತ್ತೆ ಸಾಲ ಮಾಡುತ್ತಾನೆ. ಇದು ಹೇಗೆ ಎಂದರೆ ಲಗ್ನ ಆಗುವ ವರೆಗೂ ಹುಚ್ಚು ಬಿಡುವುದಿಲ್ಲ, ಹುಚ್ಚು ಬಿಡುವವರೆಗೂ ಲಗ್ನ ಆಗುವುದಿಲ್ಲ ಎನ್ನುವಂಥ ಸಂಪ್ರದಾಯ ನಮ್ಮ ದೇಶದಲ್ಲಿ ಬೆಳೆಯುತ್ತಿದೆ. ನಾನು ಈ ಸಂದರ್ಭದಲ್ಲಿ ಇಷ್ಟೇ ಹೇಳಬಲ್ಲೆ, ಇವತ್ತಿನ ದಿನ ನಮ್ಮ ರಾಜ್ಯದಲ್ಲಿ ಅನಿವಾರ್ಯವಾಗಿ ಕುಡಿಯುವುದನ್ನು ಮುಂದುವರಿಸಬೇಕಾದ ಪ್ರಸಂಗ ಬಂದಿದೆ. ಇದನ್ನು ಬಂದ್ ಮಾಡಬೇಕು. ಆದರೆ ಇವತ್ತಿನ ಸ್ಥಿತಿಯಲ್ಲಿ ಇದನ್ನು ನಾವು ಬಂದ್ ಮಾಡುವಂತಿಲ್ಲ. ಇದು ಎಲ್ಲಿಯವರೆಗೆ ಮುಂದೆ ಹೋಗಿದೆ ಎಂದರೆ ಶಾಲಾ ಕಾಲೇಜುಗಳಲ್ಲಿ ಹೆಣ್ಣು ಮಕ್ಕಳು, ಗಂಡು ಮಕ್ಕಳೂ ಕೂಡಿ ೧೨ ಗಂಟೆ ಹೊತ್ತಿನಲ್ಲಿ ಹೋಟೆಲ್‌ನಲ್ಲಿ ಬೀರನ್ನು ಕುಡಿಯುತ್ತಾ ಕುಳಿತಿರತಕ್ಕ ಸಂಗತಿಯನ್ನು ನಾವು ಕಣ್ಣಲ್ಲಿ ನೋಡತಕ್ಕ ಸ್ಥಿತಿ ಬಂದಿದೆ ಅನೇಕ ದೊಡ್ಡ ದೊಡ್ಡವರ ಮಕ್ಕಳು ಅಫೀಮನ್ನು ತಿಂದು ಹುಚ್ಚತನ ಬರಲಿಕ್ಕೆ ಹತ್ತಿದೆ. ಇದನ್ನು ಬಂದ್ ಮಾಡಲಿಕ್ಕೆ ನೀವು ತೀವ್ರ ಪ್ರಯತ್ನ ಮಾಡದಿದ್ದರೆ ದೇಶ ಎಲ್ಲಿಗೆ ಹೋಗಬಹುದೆಂಬುದನ್ನು ನೀವೇ ಯೋಚನೆ ಮಾಡಿ. ನಾವೂ ಕುಡಿಯುತ್ತೇವೆ, ನೀವೂ ಕುಡಿಯಿರಿ ನೀವು ಕುಡಿಯುತ್ತೀರಿ ಆದ್ದರಿಂದ ನಾವೂ ಕುಡಿಯುತ್ತೇವೆಂದು ಹೇಳುವುದು ಬೇಡ. ಕುಡಿಯುವವರು ಕುಡಿಯಲಿ. ಅದಕ್ಕೆ ನನ್ನ ತಕರಾರು ಇಲ್ಲ. ಅದಕ್ಕೂ ಒಂದು ಮಿತಿ ಇರಬೇಕು. ಆದರೆ ಮುಂದೆ ಕುಡಿಯಲಾರದಂಥ ಜನರ ಬಗ್ಗೆ ನೀವು ಒಂದು ವ್ಯವಸ್ಥೆ ಮಾಡಬೇಕು ಅವರು ಕುಡಿಯದಂತೆ ಮಾಡದಿದ್ದರೆ ಈ ಸರ್ಕಾರ ಇದ್ದು ತಾನೆ ಏನು ಪ್ರಯೋಜನ ? ಮುಂದಿನ ಪೀಳಿಗೆಯ ಜನರ ಮಕ್ಕಳು, ಮೊಮ್ಮಕ್ಕಳು ಈ ದೇಶದ ಸ್ವತ್ತಾಗಬೇಕಾದರೆ, ಸತ್ಪ್ರಜೆಗಳಾಗಬೇಕಾದರೆ ಈ ಕುಡಿತವನ್ನು ನೀವು ಯಾವರೀತಿ ಪ್ರತಿಬಂಧಕ ಮಾಡುತ್ತೀರಿ ? ತಂದೆಯಾದವನು ಮಗನ ಕೈಯಲ್ಲಿ ಬೀಡಿ ತಾ ಎಂದು ಕಾಸು ಕೊಟ್ಟು ಕಳಿಸಿದರೆ ಅವನೂ ಒಂದಲ್ಲೊಂದು ದಿವಸ ಬೀಡಿ ಸೇದುವುದನ್ನು ಕಲಿಯುತ್ತಾನೆ. ಒಳ್ಳೆಯ ಸಜ್ಜನರು ಅನೇಕ ಜನರಿದ್ದಾರೆ, ಅವರಲ್ಲಿ ಅಪ್ರಮಾಣಿಕತೆ ಎಂಬುದು ಇಲ್ಲ, ಅವರಲ್ಲಿ ಕೆಟ್ಟ ಚಾಳಿ ಯಾವುದೂ ಇಲ್ಲ ಎಂದರೂ ಕೂಡ ಈ ಒಂದು ಕುಡಿತದ ಚಟಕ್ಕೆ ಮಾರುಹೋಗಿ ಅವರ ಮನೆಯಲ್ಲಿರುವ ಮಕ್ಕಳು, ಮೊಮ್ಮಕ್ಕಳು, ಹೆಂಡತಿ ಅಂದರೆ ಇಡೀ ಸಂಸಾರವೇ ಅನೇಕ ರೀತಿಯ ಕಷ್ಟನಷ್ಟಗಳನ್ನು ಅನುಭವಿಸುತ್ತಿರತಕ್ಕ ಪರಿಸ್ಥಿತಿಯನ್ನು ನಾವು ಕಣ್ಣಾರೆ ನೋಡುತ್ತಿದ್ದೇವೆ.

ಇದರಿಂದಾಗಿ ಅವರು ಇಡಿ ತಮ್ಮ ಆಸ್ತಿಪಾಸ್ತಿಗಳನ್ನು ಸೂರೆಮಾಡಿ ಕುಡಿತದ ಚಟಕ್ಕೆ ಒಳಗಾದವರನ್ನು ನಾವು ಇಂದು ನೋಡುತ್ತಿದ್ದೇವೆ. ಹಿಂದುಳಿದವರನ್ನು ಮುಂದೆ ತರುತ್ತೇವೆ, ಅಲ್ಪಸಂಖ್ಯಾತರನ್ನು ಮೇಲಕ್ಕೆ ತರುತ್ತೇವೆಂದು ಹೇಳುವ ಸ್ಲೋಗಾನ್ ಕೇಂದ್ರ ಸರ್ಕಾರವಾಗಲಿ, ರಾಜ್ಯ ಸರ್ಕಾರವಾಗಲಿ ಅದನ್ನು ಕಾರ್ಯಗತಗೊಳಿಸಬೇಕಾದರೆ ಅವರ ಹಿತವನ್ನು ರಕ್ಷಣೆ ಮಾಡುವ ಕಡೆ ತಾವು ಲಕ್ಷ್ಯವನ್ನು ಕೊಡಬೇಕು. ಈಪೊತ್ತು ನಾವು ಯಾವ ದವಾಖಾನೆಗೆ ಹೋದರೂ ಔಷಧಿ ಇಲ್ಲವೆಂದು ಹೇಳುತ್ತಾರೆ. ವಿಕ್ಟೋರಿಯಾ ಆಸ್ಪತ್ರೆಗೆ ಹೋಗಲಿ, ಬೌರಿಂಗ್ ಆಸ್ಪತ್ರೆಗೆ ಹೋಗಲಿ ಯಾವುದಾದರೂ

ಲೈಫ್ ಸೇವಿಂಗ್ ಡ್ರಗ್ ಬೇಕೆಂದರೆ, ಇಲ್ಲವೆಂದು ಹೇಳುತ್ತಾರೆ. ಆದರೆ ಬೀರ್ ಬ್ರಾಂದಿಯನ್ನು ಮದ್ಯಪಾನಿಯಗಳನ್ನು ಇಲ್ಲವೆಂದು ಹೇಳುವಂತಿಲ್ಲ. ಅದು ಸೆಕೆಂಡ್ಸ್ ಇರಬಹುದು ಅಥವಾ ಫಸ್ಟ್ ಇರಬಹುದು, ಅವುಗಳು ಮಾತ್ರ ಹೇರಳವಾಗಿ ದೊರೆಯುತ್ತವೆ, ನಾವು ಹೋದಸಲ ಸಹಕಾರಿ ಸಂಘಗಳ ಮುಖಾಂತರ ಇವುಗಳನ್ನು ಮಾರಾಟ ಮಾಡುವುದು ಬೇಡವೆಂದು ವಿರೋಧ ಮಾಡಿದ್ದೆವು. ಯಾವ ದೃಷ್ಟಿಯಿಂದ ಅದನ್ನು ವಿರೋಧ ಮಾಡಿದ್ದೆವು ಎಂದರೆ ಸಹಕಾರಿ ಸಂಘಗಳಿಗೆ ಇರತಕ್ಕಂಥ ಪಾವಿತ್ರತೆ ಈ ಮದ್ಯಪಾನೀಯಗಳ ಮಾರಾಟದಿಂದ ಅದರ ಹೆಸರಿಗೆ ಕಳಂಕ ಆಗುತ್ತದೆ ಎನ್ನುವ ದೃಷ್ಟಿಯಿಂದ ಹೇಳಿದ್ದೆವು. ಈವೊತ್ತಿಗೂ ನನ್ನ ಅಭಿಪ್ರಾಯ ಇದೇ ಆಗಿರುತ್ತದೆ. ನಮ್ಮನ್ನು ಕೇಳಿದರೆ ಸಿಗರೇಟನ್ನು ಸಹ ಜನತಾ ಬಜಾರ್‌ನಲ್ಲಿ ಮಾರಾಟ ಮಾಡಬಾರದೆಂದು ಹೇಳುತ್ತೇವೆ. ಆ ದೃಷ್ಟಿಯಿಂದ ಇವೊತ್ತಿಗೂ ಸಹ ನಾವು ಆಲೋಚನೆ ಮಾಡಬೇಕೆಂದು ಹೇಳುತ್ತೇವೆ. ಈವೊತ್ತು ಸಾರ್ವಜನಿಕ ಅಂಗಡಿಗಳು ಇವೆ, ಸಾರ್ವಜನಿಕ ಹಿತ ಬಯಸಿ ಸರ್ಕಾರೀ ಪ್ರೋಶಿತವಾಗಿರುವ ಸರಾಯಿ ಸೇಂದಿ ಅಂಗಡಿಗಳನ್ನು ಬಂದ್ ಮಾಡಬೇಕು. ಈವೊತ್ತಿನ ದಿವಸ ಅಂಗಡಿಗಳನ್ನು ತೆಗೆಯಲು ಲೈಸೆನ್ಸ್‌ಗಳನ್ನು ಕೊಡುತ್ತಿದ್ದೀರಿ. ಇಷ್ಟೊಂದು ಲೈಸೆನ್ಸ್‌ಗಳನ್ನು ಏತಕ್ಕೆ ಕೊಡಬೇಕು ? ಇವುಗಳ ಕ್ಯಾಲಿಕ್ಯುಲೇಷನ್ ನೀವು ಮಾಡಿದ್ದೀರಾ ? ನಿಮ್ಮಲ್ಲಿರತಕ್ಕಂಥ ಅಂಗಡಿಗಳನ್ನು ನಡೆಸತಕ್ಕವರನ್ನು ಕೇಳಿದರೆ ಕುಡಿಯುವ ಜನರು ಇಷ್ಟು ಇದ್ದಾರೆಂದು ಹೇಳಲಿಕ್ಕೆ ಬರುವುದಿಲ್ಲ. ಸೆಕೆಂಡ್ಸ್ ಎಷ್ಟು ಮಾರಾಟವಾಗುತ್ತದೆಂದು ಲೆಕ್ಕ ಹೇಳುವುದಕ್ಕೆ ಬರುವುದಿಲ್ಲ. ಏತಕ್ಕೆಂದರೆ ಅವೆಲ್ಲ ಬ್ಲಾಕ್ ಮಾರ್ಕೆಟ್‌ಗೆ ಹೋಗಿಬಿಡುತ್ತವೆ. ಅಲ್ಲಿ ಇನ್‌ಕಮ್ ಟ್ಯಾಕ್ಸ್, ಸೇಲ್ಸ್ ಟ್ಯಾಕ್ಸ್ ಎಲ್ಲಾ ಟ್ಯಾಕ್ಸ್‌ಗಳನ್ನು ನುಂಗಿಬಿಡುತ್ತಾರೆ. ಇದನ್ನು ಬಿಟ್ಟು ನಿಜವಾಗಿ ನಿಮಗೆ ಕೊಡತಕ್ಕ ಲೆಕ್ಕ ಏನು ಇದೆ ಅದರ ಮೇಲೆ ಅಂಗಡಿಗಳ ಲೆಕ್ಕವನ್ನು ತೆಗೆದುಕೊಳ್ಳಬೇಕು. ಒಂದೊಂದು ಅಂಗಡಿಗೆ ಇಷ್ಟು ಮಂದಿ ಬರುತ್ತಾರೆಂದು ಲೆಕ್ಕ ತೆಗೆದುಕೊಂಡರೆ ನಿಜವಾಗಿಯೂ ಇದು ಪ್ರಾಪರ್ ರೆಗ್ಯುಲೇಷನ್ ಆಗುತ್ತದೆ, ಇದ್ದವರು ಕುಡಿಯುತ್ತಾರೆ, ಇಲ್ಲದವರು ಕೈಮುಗಿದು ಸುಮ್ಮನೆ ಇರುತ್ತಾರೆ. ಆದರೆ ಈವೊತ್ತಿನ ದಿವಸ ಹಾಗಾಗಿಲ್ಲ ಎಲ್ಲೆಲ್ಲಿ ನೋಡಿದರೂ ಅಂಗಡಿಗಳು ಚಹದ ಅಂಗಡಿಗಳು ಇದ್ದ ಹಾಗೆ ಇರುತ್ತವೆ, ಬಹಳ ಸಂತೋಷ ಏನೆಂದರೆ ಯಾವತ್ತೂ ಕುಡಿಯದ ಮನುಷ್ಯ ನಾಳೆ ಅಂಗಡಿಗೆ ಹೋಗಿ ಕುಳಿತು ಕುಡಿಯುತ್ತಿದ್ದರೆ ಅದಕ್ಕೆ ಯಾರು ಆಶ್ಚರ್ಯ ಪಡುವಂತಿಲ್ಲ. ಇಂಥ ಪ್ರಸಂಗಗಳನ್ನು ನಾವು ಇಂದು ಕಾಣಲಿಕ್ಕೆ ಹತ್ತಿದ್ದೇವೆ. ಅದಕ್ಕಾಗಿ ಸರ್ಕಾರದವರು ವಿಚಾರ ಮಾಡಬೇಕು. ನಿಮ್ಮ ಮನಸ್ಸಿನಲ್ಲಿ ಒಂದು ಇದೆ. ಇದು ಕೆಟ್ಟದ್ದು, ಬಟ್ಟಿಸರಾಯಿ ಬೇಡ ನಿಶಬರುವ ಸರಾಯಿಯನ್ನು ಕುಡಿಸಬೇಕೆಂದು ಹೇಳಿ ಅದನ್ನು ಬಾಟ್ಲಿಯೊಳಗೆ ಹಾಕಿ ಕೊಡೋಣವೆಂದು ಹೇಳಿದಿರಿ. ಈ ಉದ್ದೇಶ ಚಲೋ ಇದ್ದರೂ ಈ ಉದ್ದೇಶವನ್ನು ಈಡೇರಿಸದಂಥ ಕಾಣದ ಕೈ ಇವತ್ತಿನ ದಿವಸ ರಾಜಾಕರಣದ ಒಳಗೂ ಬರುತ್ತಿದೆ. ಹೊರಗೂ ಬರುತ್ತಿದೆ. ಇದನ್ನು ತೆಗೆಯಲಿಕ್ಕೆ ಪ್ರಯತ್ನ ಮಾಡಬೇಕು. ಅದಕ್ಕೋಸ್ಕರವಾಗಿ ಶ್ರೀಮಾನ್ ಶ್ರೀನಿವಾಸ್‌ರವರು ಈ ರೀತಿಯಾದ ಒಂದು ಠರಾವನ್ನು ತಂದರು. ಅದೇನೆಂದರೆ ಜನಗನ್ನು ಕುಡಿಯಲು ಬಿಡಬೇಕೆ. ಬಿಡಬಾರದೆ ಎಂದು. ಬಿಡಬಾರದು ಎನ್ನುವ ಅಭಿಪ್ರಾಯಕ್ಕೆ ಬಂದರೆ ಯಾವ ರೀತಿ ಕುಡಿತವನ್ನು ಕೊಡಬೇಕು ಎನ್ನುವ ಪ್ರಶ್ನೆ ಬರುತ್ತದೆ. ಅವರು ಹೇಳಿದರು ರಷ್ಯಾದಲ್ಲಿ ಯಾವುದೋ ಒಂದು ರೀತಿಯ ದ್ರವವನ್ನು ಕೊಡುತ್ತಾರೆ ತಿನ್ನಲಿಕ್ಕೆ. ಅದನ್ನು ತಿಂದರೆ ಮಾತ್ರ ಕುಡಿಯಬೇಕು ಎಂದು ನಿಯಮವಿದೆ. ಆದರೆ ಹಿಂದುಸ್ಥಾನದಲ್ಲಿ ಏನು ತಿನ್ನುವುದು. ನಿನ್ನೆ ಬೆಂಡಿಗೇರಿಯಲ್ಲಿ ಏನೋ ತಿನ್ನಿಸಿದರೆಂದು ಹೇಳಿದರಲ್ಲ ಅದನ್ನೇ ಇವರು ತಿನ್ನಿಸುವುದು. ನಮ್ಮಲ್ಲಿ ತಿನ್ನುವುದಕ್ಕೆ ಏನು ಇದೆ ಏನೋ ಮೊಸಳೆಯನ್ನೋ ತಿನ್ನಬೇಕು. ಮಾಂಸವನ್ನು ತಿಂದು ಆಮೇಲೆ ಸರಾಯಿ ಕುಡಿಯಬೇಕೆಂದು ಹೇಳಿದರೆ ಮಾಂಸವನ್ನು ತರಲಿಕ್ಕೆ ರೊಕ್ಕಬೇಕಲ್ಲ ! ಬಡವನಿಗೆ ಅದನ್ನು ಕೊಡುವವರು ಯಾರು ? ಬಡವರ ಮನೆಯಲ್ಲಿ ರೊಟ್ಟಿ ಸಹಿತ ಇರುವುದಿಲ್ಲ. ಎಷ್ಟೋ ಜನ ಇವತ್ತಿನ ದಿವಸ ರೊಟ್ಟಿಗೆ ಇಲ್ಲದಂತ ಜನರು ಇದ್ದಾರೆ. ತನ್ನ ತಲೆ ಒಳಗಿನ ವಿಚಾರವನ್ನು ಮರೆಯುವ ಸಲುವಾಗಿ ಕುಡಿಯಬೇಕು. ಕುಡಿದು ಬಂದ ಮೇಲೆ ಹೆಣ್ಣುಮಕ್ಕಳ ಮೇಲೆ ಅಮಾನುಶ ರೀತಿಯಲ್ಲಿ ನಡೆದುಕೊಳ್ಳುವುದನ್ನು ನಾವು ಇಂದು ನೋಡುತ್ತಿದ್ದೇವೆ. ಹೆಣ್ಣುಮಕ್ಕಳನ್ನು ಉದ್ಧಾರ ಮಾಡುತ್ತೇವೆ, ಹೆಣ್ಣು ಮಕ್ಕಳ ಕಲ್ಯಾಣ ಮಾಡುತ್ತೇವೆಂದು ಹೇಳುವಾಗ ಇದು ಯಾವ ರೀತಿ ನಿಮ್ಮ ಕಲ್ಯಾಣ ? ಇದು ಯಾವ ರೀತಿಯ ನಿಮ್ಮ ಸಾಧನೆ ಎಂದು ನಾನು ಕೇಳಬೇಕಾಗುತ್ತದೆ ? ಸಾಮಾಜಿಕ ಸಾಧನೆಗಾಗಿ ಹೇರಳವಾಗಿ ಹಣವನ್ನು ಖರ್ಚುಮಾಡಿ ಅವರನ್ನು ಕುಡಿಯಲಿಕ್ಕೆ ಹಚ್ಚಿ ದುಶ್ಚಟಕ್ಕೆ ಗುರಿಮಾಡುವುದು ನಿಮ್ಮ ಸಾಧನೆಯೋ ? ಈವತ್ತಿನ ದಿವಸ ತಾಳಿಯನ್ನು ಕಟ್ಟಿದಂತವರು ಆ ತಾಳಿಯನ್ನು ಅವೊತ್ತೇ ಕಸಿದುಕೊಂಡು ಹೋಗಿ ಮಾರಾಟ ಮಾಡಿ ಕುಡಿದಂಥ ಉದಾಹರಣೆಗಳು

ನಮ್ಮಲ್ಲಿ ಇವೆ. ಮನುಷ್ಯ ಮಾನವೀಯತೆಯನ್ನು ಕಳೆದುಕೊಂಡ ಅನೇಕ ಕೃತ್ಯಗಳನ್ನು ಈ ಸದನದಲ್ಲಿ ತರಲಿಕ್ಕೆ ಇಚ್ಛೆ ಪಡುವುದಿಲ್ಲ. ಈ ದೃಷ್ಟಿಯಿಂದ ನಾನು ಹೇಳುತ್ತಿದ್ದೇನೆ, ಸಾಮಾಜಿಕವಾಗಿ ಶೋಷಣೆ ಮಾಡುವ ಇಂಥ ಚಟಗಳನ್ನು ಪೂರ್ತಿಯಾಗಿ ಬಂದ್ ಮಾಡಬೇಕು. ಹರಿಜನರನ್ನು ಕಲ್ಯಾಣ ಮಾಡಬೇಕು, ಹಿಂದುಳಿದವರನ್ನು ಕಲ್ಯಾಣ ಮಾಡಬೇಕು, ಅವರನ್ನು ಸಜ್ಜನರನ್ನಾಗಿ ಮಾಡಬೇಕೆಂದು ಹೇಳುವುದಾದರೆ ಈ ಕುಡುಕತನವನ್ನು ಬಂದ್ ಮಾಡಬೇಕು. ಅದನ್ನು ಬಂದ್ ಮಾಡಲಿಕ್ಕೆ ಸಾಧ್ಯವಿಲ್ಲದಿದ್ದರೆ ಕೊನೆಯ ಪಕ್ಷ ಅವರ ಆರೋಗ್ಯವನ್ನು ಕಾಪಾಡಲು ಒಳ್ಳೆಯ ಮದ್ಯವನ್ನಾದರೂ ಕೊಡಬೇಕು. ನೀವು ಕೊಡುವ ಮದ್ಯ ಆ ರೀತಿಯದಾಗಿರಬೇಕು. ಇಂಥ ವಿಚಾರವನ್ನು ಮಾಡಬೇಕೆನ್ನುವ ದೃಷ್ಟಿಯಿಂದ ಏಕಡೆಂಕರ ಅನುಭವ ಇರುವ ಒಂದು ತಜ್ಞರ ಸಮಿತಿಯನ್ನು ನೇಮಕ ಮಾಡಬೇಕು. ನಮ್ಮಂಥವರನ್ನು ನೇಮಿಸಿದರೆ ಕುಡಿಯಬಾರದೆಂದು ಸ್ಪಷ್ಟವಾಗಿ ಹೇಳುತ್ತೇವೆ. ತಜ್ಞರ ಸಮಿತಿಯನ್ನು ನೇಮಿಸಿ, ಇದರಿಂದ ನಿಜವಾಗಿಯೂ ಕುಡುಕತನ ಬಂದ್ ಮಾಡಲಿಕ್ಕೆ ಸಾಧ್ಯವೇ, ಸಾಧ್ಯವಿಲ್ಲದಿದ್ದರೆ ಯಾವ ರೀತಿ ಕುಡುಕತನ ನಮ್ಮ ದೇಶದಲ್ಲಿ ಅಮಲಿನಲ್ಲಿ ಇಡಬಹುದು, ಮತ್ತು ಹಂತಹಂತವಾಗಿ ಯಾವ ರೀತಿ ಹಿಂದಕ್ಕೆ ತೆಗೆದುಕೊಳ್ಳಬಹುದು ಎನ್ನುವುದನ್ನು ಕಂಡುಕೊಳ್ಳಬಹುದು. ನಾವು ಅನೇಕ ಭಾರಿ ಮಹಾತ್ಮ ಗಾಂಧೀಜಿಯವರ ಹೆಸರನ್ನು ಹೇಳುತ್ತೇವೆ. ಗಾಂಧಿ ಟೋಪಿ ಹಾಕುತ್ತೇವೆ, ಆದರೆ ಕನಸಿನಲ್ಲೂ ಅವರ ತತ್ವವನ್ನು ನಾವು ಪಾಲಿಸುವುದಿಲ್ಲ. ಪ್ರತಿ ದಿನ ಕುಡಿಯುತ್ತೇವೆ. ದೇಶದ ನಾಯಕ, ರಾಷ್ಟ್ರಪಿತ ಎಂದು ಮಹಾತ್ಮ ಗಾಂಧಿಯ ಕೊಲೆಯನ್ನು ಪ್ರತಿ ದಿನ ಮಾಡುತ್ತಿದ್ದೇವೆಂಬುದನ್ನು ಮರೆಯಬಾರದೆಂದು ಹೇಳುತ್ತೇನೆ. ಇದರಲ್ಲಿ ನಿಮ್ಮದು ತಪ್ಪು, ನಮ್ಮದು ತಪ್ಪು ಎಂದು ಹೇಳುತ್ತಿಲ್ಲ. ನಿಮಗಿಂತ ಹೆಚ್ಚು ನಮ್ಮ ತಪ್ಪು ಇದೆ. ನೀವು ೫ ವರ್ಷದಿಂದ ರಾಜ್ಯಭಾರ ನಡೆಸುತ್ತಿದ್ದೀರಿ. ನಾವು ೩೫-೪೦ ವರ್ಷಗಳಿಂದ ಇದ್ದೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ತಾವು ಹೇಳಿದ ಹಾಗೆ ೫ ವರ್ಷ ಅಲ್ಲ. ಇದನ್ನು ಇಂಟ್ರಡ್ಯೂಸ್ ಮಾಡಿದವರು ಮಾನ್ಯ ಮುಖ್ಯಮಂತ್ರಿಗಳು, ಅವರಿಗೆ ೩೫ ವರ್ಷ ಆಗಿದೆಯಲ್ಲ !

ಶ್ರೀ ಕೆ. ಹೆಚ್. ಪಾಟೀಲ್.—ಜನತಾ ಪಕ್ಷ ಬಂದು ೫ ವರ್ಷವಾಯಿತು. ಕಾಂಗ್ರೆಸ್ ಪಕ್ಷ ೪೦ ವರ್ಷಗಳಿಂದ ಇದೆ. ನಾವು ಮಾಡಿದ ಪಾಪಕ್ಕೆ ಇಲ್ಲಿ ಬಂದು ಕುಳಿತಿದ್ದೇವೆ. ನೀವೂ ನಮ್ಮ ಹಾಗೆ ಮಾಡಿ ಇಲ್ಲಿಗೆ ಬರಬೇಡಿ. ನೀವಾದರೂ ಗಾಂಧಿ ತತ್ವವನ್ನು ಅನುಸರಿಸಿ ಎಂದು ಹೇಳಿ, ಅಧ್ಯಕ್ಷರಿಗೆ ವಂದಿಸಿ ನನ್ನ ಮಾತು ಮುಗಿಸುತ್ತೇನೆ.

ಶ್ರೀ ಜೆ. ಹೆಚ್. ಪಟೇಲ್ (ಕೈನಾರಿಕೆ ಹಾಗೂ ವಿದ್ಯುತ್ ಸಚಿವರು).— ಮಾನ್ಯ ಅಧ್ಯಕ್ಷರೆ, ಈ ನಿರ್ಣಯವನ್ನು ನಾನು ಒಂದು ಸಾರಿ ಓದುತ್ತೇನೆ. ಓದಿ ಅದರಲ್ಲಿ ಒಂದು ಸಣ್ಣ ತಿದ್ದುಪಡಿಯನ್ನು ಸೇರಿಸುತ್ತೇನೆ. ತಿದ್ದುಪಡಿಯನ್ನು ಅಂಗೀಕಾರ ಮಾಡುವಾಗ ನಿಯಮಾವಳಿ ಪ್ರಕಾರ ಹೋಗೋಣ. ಮಾನ್ಯ ಶ್ರೀನಿವಾಸ್ ಅವರ ಖಾಸಗಿ ನಿರ್ಣಯ ಹೀಗಿದೆ :

> "ಮದ್ಯಪಾನಕ್ಕೆ ಸಂಬಂಧಿಸಿದಂತೆ ರಾಜ್ಯದಲ್ಲಿನ ಪ್ರಸ್ತುತ ನೀತಿ ಹಾಗೂ ವ್ಯವಸ್ಥೆ ಶ್ರೀಸಾಮಾನ್ಯರ ಹಾಗೂ ಬಡ ಜನರ ಹಿತಕ್ಕೆ ಪೂರಕವಾಗಿ ಪರಿಣಮಿಸಿರುವುದರಿಂದ, ಈಗಾಗಲೇ ನಡೆದಿರುವ ದುರಂತಗಳು, ಅವುಗಳ ಬಗ್ಗೆ ನೇಮಿಸಲ್ಪಟ್ಟ ವಿಚಾರಣಾ ಆಯೋಗಗಳ ಶಿಫಾರಸ್ಸುಗಳ ಹಿನ್ನೆಲೆಯಲ್ಲಿ ಬೇರೆ ಬೇರೆ ರಾಜ್ಯಗಳಲ್ಲಿ ಇರುವ ರೀತಿ ಹಾಗೂ ವ್ಯವಸ್ಥೆಯನ್ನು ಅಧ್ಯಯನ ಮಾಡಿ ಪಾನನಿರೋಧವೂ ಸೇರಿದಂತೆ, ಬದಲಿ ನೀತಿ ಹಾಗೂ ವ್ಯವಸ್ಥೆಯ ಸಾಧ್ಯಾಸಾಧ್ಯತೆಯನ್ನು ಪರಿಶೀಲಿಸಿ ಸೂಕ್ತ ಶಿಫಾರಸ್ಸು ಮಾಡಲು ವಿಧಾನ ಮಂಡಲದ ಪ್ರತಿನಿಧಿಗಳನ್ನು ಒಳಗೊಂಡ ಒಂದು ಉನ್ನತಾಧಿಕಾರಿ ಸಮಿತಿಯನ್ನು ನೇಮಿಸಬೇಕೆಂದು ಈ ಸಭೆಯು ನಿರ್ಣಯಿಸುತ್ತದೆ."

ಈ ನಿರ್ಣಯದ ಅರ್ಥ ಮತ್ತು ಶಬ್ದ ಜೋಡಣೆಗಳನ್ನು ಎಲ್ಲಾ ದೃಷ್ಟಿಯಿಂದ ಅನುಮೋದಿಸುತ್ತಾ ಸರ್ಕಾರದ ವತಿಯಿಂದ ಬೆಂಬಲ ಕೊಡುತ್ತಾ ಒಂದು ಶಬ್ದವನ್ನು ಸೇರಿಸುತ್ತೇನೆ. 'ಮದ್ಯಪಾನಕ್ಕೆ ಸಂಬಂಧಿಸಿದಂತೆ ರಾಜ್ಯದಲ್ಲಿನ ಪ್ರಸ್ತುತ ನೀತಿ ಮತ್ತು ವ್ಯವಸ್ಥೆ ಎಂದು ಇದೆ. ಅದರಲ್ಲಿ ರಾಜ್ಯದಲ್ಲಿನ ಮತ್ತು ರಾಷ್ಟ್ರದಲ್ಲಿರುವ ಪ್ರಸ್ತುತ ನೀತಿ ಮತ್ತು ವ್ಯವಸ್ಥೆ ಎಂದು ಸೇರಿಸಬೇಕು.

ಅಧ್ಯಕ್ಷರು.—ರಾಜ್ಯದಲ್ಲಿ ಮತ್ತು ರಾಷ್ಟ್ರದಲ್ಲಿ—ಎರಡಲ್ಲೂ ಇರಲಿ.

ಶ್ರೀ ಜೆ. ಹೆಚ್. ಪಟೇಲ್.—ಈ ನಿರ್ಣಯ ಬಹಳ ದಿನಗಳಿಂದ ಈ ಸದನದಲ್ಲಿ ಚರ್ಚೆಯಾಗುತ್ತಿದೆ. ಇದರ ಮೇಲೆ ಬಹಳ ಜನ ಮಾನ್ಯ ಸದಸ್ಯರು ವ್ಯಕ್ತವಾದ ಅಭಿಪ್ರಾಯಗಳನ್ನು ಕೊಟ್ಟಿದ್ದಾರೆ.

ಶ್ರೀ ಗೋಪಾಲ ಮುಕುಂದ ಕಾನಡೆ.— ಅಧಿಕಾರಿಗಳು...

ಅಧ್ಯಕ್ಷರು.—ಅವರದ್ದು ಮುಗಿಯಲಿ, ಕುಳಿತುಕೊಳ್ಳಿ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ರಾಷ್ಟ್ರದಲ್ಲಿ ಒಂದೊಂದು ಕಡೆ ಒಂದೊಂದು ರೀತಿಯ ವ್ಯವಸ್ಥೆ ಇದೆ. ಎಲ್ಲೆಲ್ಲಿ ಏನೇನಿದೆ ಎಂಬ ಪರಿಪೂರ್ಣ ಮಾಹಿತಿ ನಮ್ಮಲ್ಲಿ ಇಲ್ಲ. ಆದರೆ ನಾವು ಮಾಡುವಂತಹ ಶಿಫಾರಸ್ಸು ಇಡೀ ರಾಷ್ಟ್ರಕ್ಕೆ ಮಾದರಿಯಾಗಿ ಇರುವಂತಿದೆ. ನಮ್ಮ ರಾಜ್ಯದಲ್ಲಿ ಮಾಡಿ ಎಂದು ಹೇಳಿದರೆ ಏನೂ ಕಷ್ಟವಾಗುವುದಿಲ್ಲವೆಂಬುದನ್ನು ಒಪ್ಪುತ್ತೇನೆ. ಆ ದೃಷ್ಟಿಯಿಂದ ಅವತ್ತು ಮಾತನಾಡಿದಾಗ ಒಂದೇ ರಾಜ್ಯಕ್ಕೆ ಸೀಮಿತವಾಗಿ ಹೇಳಿದೆ, ನೀವು ರಾಷ್ಟ್ರವನ್ನು ದೃಷ್ಟಿಯಲ್ಲಿಟ್ಟುಕೊಂಡು ಹೇಳಿದರೆ ಒಳ್ಳೆಯದೆಂದು ಹೇಳಿದ್ದಿರಿ.

ಶ್ರೀ ಜೆ. ಹೆಚ್. ಪಟೇಲ್.—ಈ ನಿರ್ಣಯದ ಚೌಕಟ್ಟಿನೊಳಗೆ ನಮ್ಮ ದೃಷ್ಟಿಯಿಂದ ಉದ್ದೇಶ ಸೀಮಂತ ಪ್ರದೇಶಕ್ಕೆ ಅಲ್ಲ. ಇದು ಇಡೀ ರಾಷ್ಟ್ರದ ಜನರ ಹಿತದೃಷ್ಟಿಯಿಂದ ಒಳ್ಳೆಯದು. ಅಲ್ಲಲ್ಲಿ ಒಂದೊಂದು ವ್ಯವಸ್ಥೆ ಇರಬಹುದು.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಬೇರೆ ಬೇರೆ ರಾಜ್ಯಗಳಲ್ಲಿ ಏನೇನು ಉದ್ದೇಶ ಇದೆ ಎಂಬುದನ್ನು ನೋಡದೆ ಹೇಳುವುದು ಹೇಗೆ ? ರಾಷ್ಟ್ರವ್ಯಾಪಿಯಾಗಿ ಶಿಫಾರಸ್ಸು ಮಾಡುವಾಗ ಯೋಗ್ಯವಾದುದನ್ನು ಮಾಡಬೇಕು. ಕರ್ನಾಟಕ ರಾಜ್ಯದಲ್ಲಿ ಪಾನನಿರೋಧವನ್ನು ತನ್ನಿ ಎಂದರೆ.

ಶ್ರೀ ಕೆ. ಹೆಚ್. ಪಟೇಲ್.— ಸರ್ಕಾರದ ವತಿಯಿಂದ ಈ ಅಭಿಪ್ರಾಯವನ್ನು ನಾನು ಸ್ಪಷ್ಟಪಡಿಸುತ್ತಿದ್ದೇನೆ. ಈ ನಿರ್ಣಯದ ಹಿನ್ನೆಲೆಯಲ್ಲಿ ಇರತಕ್ಕ ಉದ್ದೇಶ ಏನಿದೆ ಅದರ ಬಗ್ಗೆ ಸರ್ಕಾರಕ್ಕೆ ಯಾವುದೇ ಭಿನ್ನಾಭಿಪ್ರಾಯ ಇಲ್ಲ. ಇಲ್ಲಿ ಈ ನಿರ್ಣಯವನ್ನು ಇಡೀ ಸಭೆ ಅವಿರೋಧವಾಗಿ ಕಳುಹಿಸಿಕೊಡಬೇಕಾಗಿದೆ ಏಕೆಂದರೆ ಈ ವಿಚಾರದಲ್ಲಿ ಆಲೋಚನೆ ಮಾಡತಕ್ಕ ಪರಿಸ್ಥಿತಿ ಬಹಳ ತೀವ್ರವಾಗಿದೆ.ನಮ್ಮ ರಾಜ್ಯ ಮತ್ತು ನಮ್ಮರಾಷ್ಟ್ರ ಮಾತ್ರವಲ್ಲ ಇವತ್ತು ಪ್ರಪಂಚದಲ್ಲಿರತಕ್ಕ ಎಲ್ಲಾ ಮಾನವ ಹಿತವಾದಿಗಳು,ಸರ್ಕಾರ ನಡೆಸತಕ್ಕ ಜವಾಬ್ದಾರಿ ಜನರಲ್ಲಿ ಈ ಮಾದಕವಸ್ತುಗಳ ಬಗ್ಗೆ in general in particular lignour ಬಗ್ಗೆ ಇಡೀ ಜಗತ್ತಿನಲ್ಲಿ ಚರ್ಚೆ ನಡೆಯುತ್ತಿದೆ. ಕೆಲವೊಂದು ರಾಷ್ಟ್ರಗಳಲ್ಲಿ ಕೈಗೊಂಡಿರತಕ್ಕ ಕ್ರಮಗಳು ಏನು ಎಂಬುದನ್ನು ನೋಡಿದ್ದೇನೆ. ನಾನು ಒಂದು ಸಾರಿ ಇಂಗ್ಲೇಂಡಿಗೆ ಹೋದಾಗ ಯಾವುದೋ ಬಾರಿಗೆ ಹೋದಾಗ ೧೮ ವರ್ಷದೊಳಗೆ ಅಲೋ ಮಾಡುವುದಿಲ್ಲ. ೯ ಗಂಟೆ ಮೇಲೆ ಅಲೋ ಮಾಡುವುದಿಲ್ಲ ಎಂದು ಹೇಳಿದರು. ಅಂದರೆ ಸಂಪೂರ್ಣವಾಗಿ ಪಾನನಿರೋಧವನ್ನು ಕಾನೂನಾಗಿ ಮಾಡಿರತಕ್ಕ ಸರ್ಕಾರವಾಗಲೀ ವ್ಯವಸ್ಥೆಯಾಗಲೀ ನಾನೆಲ್ಲೂ ನೋಡಿಲ್ಲ. ಎಲ್ಲೂ ಇಲ್ಲವೂ ಇಲ್ಲ. ಇದಕ್ಕೆ ಕಾರಣ ಏನು ? ಕಾರಣ ಏನೆಂದರೆ ಬಹುಶಃ ಮನುಷ್ಯನ ಗುಣದಲ್ಲಿ ಅದಮ್ಯವಾಗಿ ಬಂದಿರತಕ್ಕ ಗುಣ ಇದೆ. ಅದೇನು ! ಮಾದಕವಸ್ತುಗಳ ಬಗ್ಗೆ ಅವನಿಗೆ ಬರತಕ್ಕ ಅಪೇಕ್ಷೆ. ಬರ್ಟ್ರಾನ್ಡ್ ರಸೆಲ್ ಅವರು .ಪ್ಲೆಷರ್ ಅಂಡ್ ವೈನ್ಸ್. ಎಂಬ ಅವರ ವಿಶ್ಲೇಷಣೆಯಲ್ಲಿ ಮನುಷ್ಯ ಖುಷಿಯನ್ನು ಹುಡುಕುತ್ತಾ ಹುಡುಕುತ್ತಾ ತಾನು ಮೊದಲು ಆಹಾರ ಹುಡುಕಿದ ; ಮತ್ತೆ ಕೆಲವು ಗಿಡಮೂಲಿಕೆಗಳನ್ನು ಹುಡುಕಿದ , ಅದನ್ನು ಹುಡುಕುತ್ತಾ ತಿನ್ನುತಾ ಹೋದಾಗ ಎಲ್ಲೋ ಒಂದು ಕಡೆ ಮಾದಕವಸ್ತುವಿನಿಂದ ಸುಖವನ್ನು ಪಡೆಯುವ ಅನ್ವೇಷಣೆ ಏನಿದೆ ಆ urge for pleasure ಏನಿದೆ ಆ ಅರ್ಜ್‌ನಲ್ಲಿ ಲಿಕ್ಕರ್ ಕಂಡುಹಿಡಿದ ಎಂದು ಹೇಳಿದ್ದಾರೆ. ಅದರಲ್ಲಿ ನ್ಯಾಚುರಲ್ಲಾಗಿ ಬರತಕ್ಕ ಮಾದಕವಸ್ತುಗಳಿವೆ. ಉದಾಹರಣೆಗೆ ಹೆಂಡ. ಡಿಸ್ಟಿಲ್ ಮಾಡಿರತಕ್ಕ ಮಾದಕವಸ್ತುಗಳೂ ಇವೆ. ಇದು ಮ್ಯಾನ್ ಮೇಡ್. ಆದರೆ ಪ್ರಕೃತಿಯಲ್ಲಿ ಮಾದಕವಸ್ತುಗಳ ಅಂಶವನ್ನು ರುಚಿಸಿದ ಮನುಷ್ಯ ಅಭ್ಯಾಸ ಮಾಡುತ್ತಾ ಬಂದ. ನಾನು ಇತಿಹಾಸಕ್ಕೆ ಹೋಗುವುದಿಲ್ಲ. ಆದರೆ ಬರ್ಟ್ರಾನ್ಡ್ ರಸೆಲ್ ಮಾಡಿರುವ ವ್ಯಾಖ್ಯಾನದ ಸ್ವಲ್ಪಭಾಗವನ್ನು ಮಾತ್ರಹೇಳುತ್ತೇನೆ.ಮನುಷ್ಯ ಮೂಲತಃ ಪ್ರಾಣಿ.ಆ ಪ್ರಾಣಿ ಸಂಘಜೀವಿ ಆಗುವುದಕ್ಕಿಂತ ಮುಂಚೆ ಏಕಾಂಗಿಯಾಗಿರುತ್ತಿದ್ದ. ಗಿಡಗಳ ಮೇಲೆ ಪೊಟರೆಗಳ ಮೇಲೆ ಇರುತ್ತಿದ್ದ.ಹಾಗಿರುತ್ತಿದ್ದವನು ಸಂಘಜೀವಿ ಆದಮೇಲೆ ಮನುಷ್ಯನೇ ತನ್ನ ಸಂಘವನ್ನು ಎಷ್ಟು ಕಠೋರವಾಗಿ ಕಂಟ್ರೋಲ್ ಮಾಡುತ್ತಿದ್ದ ಅಂಡರ್ ಲಿಬರ್ಟಿ ಇರಲಿಲ್ಲ. ನಾವೆಲ್ಲಾ ಓದಿದಾಗ ಮೈಟ್ ವಾಸ್ ರೈಟ್ ಎಂಬ ಕಾಲ ಇತ್ತು. ಆ ಕಾಲದಲ್ಲಿ ಲಿಬರಾಲಿಟಿ ಅಥವಾ ಲಿಬರಾಲಿಸಂ ಅಥವಾ

ಕಾನ್‌ಸೆಪ್ ಆಫ್ ಲಿಬರ್ಟಿ ಇವು ಬರುವ ಹೊತ್ತಿಗೆ ಮನುಷ್ಯ ಸಾವಿರಾರು ವರ್ಷ ಬೆಳೆದಮೇಲೆ ಲಿಕ್ಕರ್ ಪ್ರಾರಂಭ ಆಗಿದ್ದಕ್ಕೂ ಕಾನ್‌ಸೆಪ್ಟ್ ಆಫ್ ಲಿಬರ್ಟಿ ಡೆವಲಪ್ ಆಗಿದ್ದಕ್ಕೂ ಒಂದು ಸ್ಟ್ರೇಂಜ್ ಕೋ-ಇನ್‌ಸಿಡೆನ್ಸ್ ಇದೆ ಎಂದು ಬರ್ಟ್ರನ್ ರಸೆಲ್ ಅವರ ಅನಿಸಿಕೆ, ಅದನ್ನು ಇಲ್ಲಿ ಹೇಳುತ್ತಿದ್ದೇನೆ. The emergence of liquor and the concept of liberty devolving on human society is a very strange coincidence. ಲಿಕ್ಕರ್ ದುಷ್ಪರಿಣಾಮದ ಬಗ್ಗೆ ಅತ್ಯಂತ ತೀವ್ರವಾಗಿ ಮಾನ್ಯ ಸದಸ್ಯರುಗಳು ಹೇಳಿದ್ದಾರೆ. ಮತ್ತು ಈ ಮಾತನ್ನೂ ಹೇಳಿದ್ದಾರೆ. ಅದೇ ರೀತಿ ಹಲವಾರು ಇತಿಹಾಸಕಾರರು, ಸಮಾಜ ಸುಧಾರಕರು ಅದನ್ನು ನೋಡುವಾಗ ಎರಡು ದೃಷ್ಟಿಯಿಂದ ನೋಡುತ್ತಾರೆ. ಅಮಲು ಏರತಕ್ಕ ಪೇಯಗಳನ್ನು ಮದ್ಯಪಾನವನ್ನು ನೋಡುವಾಗ ವೈಜ್ಞಾನಿಕವಾಗಿ ನೋಡುತ್ತಾರೆ, ಅದು ಇತಿಹಾಸದ ದೃಷ್ಟಿಯಿಂದ. ಧಾರ್ಮಿಕವಾಗಿ ನೋಡುತ್ತಾರೆ, ಕೆಲವು ಧರ್ಮಗಳ ಉಪದೇಶದ ದೃಷ್ಟಿಯಿಂದ. ಉಪದೇಶ ಮಾಡಿರತಕ್ಕ ಧರ್ಮಗಳು ಯಾವುವು ? ಅದು ಹಿಂದೂಯಿಸಂ ಕ್ರಿಶ್ಚಿಯಾನಿಸಂ, ಇಸ್ಲಾಂ, ಬುದ್ಧಿಸಂ ಯಾವುದೇ ಇರಲಿ ಅದಕ್ಕಿಂತ ಮುಂಚೆ ಇದ್ದಂಥ ಧರ್ಮಗಳು ಏನಿದ್ದವು ಆ ಧರ್ಮಗಳ ಬಗ್ಗೆ ವ್ಯಾಖ್ಯಾನ ಮಾಡುತ್ತಾ ಮಾರ್ಕಿಸ್ಟ್ ಒಬ್ಬರು ಏನು ಹೇಳುತ್ತಾರೆಂದರೆ ಧರ್ಮವೂ ಸಹ ಅದೇ ಒಂದು ತರಹ ಮದ್ಯವನ್ನು ಕೊಡತಕ್ಕ ವಿಚಾರ ಎಂದಿದ್ದಾರೆ. ಅದು ಒಂದು ಕಾನ್‌ಸೆಪ್ಟ್. ಮದ್ಯದಿಂದಲೂ ಮನುಷ್ಯ ಮತ್ತಾಗಬಲ್ಲ, ಮದ್ಯದಿಂದ ಮತ್ತಾಗಿ ಮಾಡಿರತಕ್ಕ ಕೊಲೆಗಳನ್ನು ಮಾರಕರಿಂದ ಮತ್ತಾಗಿ ಮನುಷ್ಯ ಮಾಡಿಲ್ಲ. Religions have become more intoxicised and more dis astrous ಮಾವೊತ್ಸೆ ತುಂಗ್ ತನ್ನ ರಾಷ್ಟ್ರವನ್ನು ಕಟ್ಟಿದಾಗ ಎಷ್ಟೆಲ್ಲಾ ಚರ್ಚೆಗಳನ್ನು ಬಂದ್ ಮಾಡಿಸಿದೆ. ಬುದ್ಧರ ದೇವಾಲಯಗಳನ್ನು ಬಂದ್ ಮಾಡಿಸಿದೆ, ಓಪಿಯಂ ಏತಕ್ಕೆ ಬಂದ್ ಮಾಡಿಸಲಿಲ್ಲ ಎಂದು ಕೇಳಿದರೆ.

ಮಾವೋತ್ಸೆತುಂಗ್ ಹೇಳುತ್ತಾರೆ. ಮನುಷ್ಯನಿಗೆ ಬೇಕಾದ ಅದಮ್ಯವಾದ ಆಸೆಗಳು ಇರುತ್ತವೆ ಆಕಾಂಕ್ಷೆಗಳು ಇರುತ್ತವೆ. ಮತ್ತು ಅಪೇಕ್ಷೆಗಳು ಇರುತ್ತವೆ. ಅವನು ಧರ್ಮವನ್ನು ಒಂದು ಕಡೆ ಇಟ್ಟುಕೊಂಡಿದ್ದಾರೆ. ಓಪಿಯಂ ಅನ್ನು ಒಂದು ಕಡೆ ಇಟ್ಟುಕೊಂಡಿದ್ದಾನೆ. ಒಂದು ಸಾರಿ ಧರ್ಮವನ್ನು ತೆಗೆದಿದ್ದೇನೆ. ಅದರ ಜೊತೆಯಲ್ಲಿ ಓಪಿಯಂ ಅನ್ನೂ ಎಲ್ಲಿಯಾದರೂ. ತೆಗೆದರೆ ಆಗ ಈ ಸಮಾಜವನ್ನು ಉಳಿಸುವುದಕ್ಕಾಗುವುದಿಲ್ಲ ಎಲ್ಲಿಯವರೆಗೆ ಅವರು ಧರ್ಮವನ್ನು ಬಿಟ್ಟು ನಿರೀಶ್ವರವಾದವನ್ನು ಜನ ಸ್ವಾಭಾವಿಕವಾಗಿ ಒಪ್ಪಿಕೊಳ್ಳುತ್ತಾರೋ ಅಲ್ಲಿಯವರೆಗೆ ಈ ಕನ್ಸೆಸನ್ ಅನ್ನು ಕೊಡಬೇಕಾಗುತ್ತದೆ. ಅದಕ್ಕಾಗಿಯೇ ಓಪಿಯಂ ಅನ್ನು ಇಟ್ಟಿರುತ್ತೇನೆಂದು ಹೇಳುತ್ತಾನೆ. ಇದು ಮಾವೋತ್ಸೆತುಂಗ್‌ನ ಅನುಭವ. I abolish religion and at the same time, I cannot abolish Opium but let it be a sustaining power for society, otherwise the society will break. That is what he says.

ರಷ್ಯಾದಲ್ಲಿ ಲೆನಿನ್‌ನ ಸರ್ಕಾರ ಬಂದ ತಕ್ಷಣ ಮೊದಲು ಮಾಡಿದ್ದುದು. ಏನೆಂದರೆ, ಮೂಲಭೂತವಾಗಿರತಕ್ಕ ಮಾದಕದ ಬಗ್ಗೆ ಮನುಷ್ಯನಿಗೆ ಇರುವ ಅಪೇಕ್ಷೆ ಏನು ಇದೆ, ಆ ಅಪೇಕೆಗಳನ್ನು ಚಿವುಟಿ ಹಾಕುವುದಕ್ಕೆ ಸಾಧ್ಯವಿಲ್ಲ. ಆದರೆ ಅವನ ಅಪೇಕ್ಷೆ ಜೊತೆಜೊತೆಗೆ ಅವನ ಇತಿಮಿತಿಗೆ ಹಾಗೂ ಅವನ ಆರೋಗ್ಯದ ದೃಷ್ಟಿಯಿಂದ ಹೆಚ್ಚಾಗಿರುವುದನ್ನು ತೆಗೆಯುವುದಕ್ಕೆ ಪ್ರಯತ್ನ ಮಾಡುತ್ತಾರೆ. ಕಮ್ಯುನಿಸ್ಟ್ ಪಾರ್ಟಿ ಸರ್ಕಾರ ಬಂದ ಮೇಲೆ ಅವರು ಮೊದಲು ಮಾಡಿದ್ದುದು ಏನೆಂದರೆ, ಎಲ್ಲಾ ಡಿಸ್ಟಲರೀಸ್‌ಗಳನ್ನು ಎಲ್ಲಾ ಪೇಯಗಳನ್ನು ಸರ್ಕಾರವೇ ವಹಿಸಿಕೊಂಡು ಬಹಳ ಕಡಿಮೆ ಆಲ್ಕೋಹಾಲ್ ಇರತಕ್ಕ ಡ್ರಿಂಕ್ಸ್‌ಗಳನ್ನು ಮೊದಲು ಜನರಿಗೆ ಸಪ್ಲೈ ಮಾಡುತ್ತಾರೆ. ಈ ರೀತಿ ಸಪ್ಲೈ ಮಾಡುತ್ತಾ ಮಾಡುತ್ತಾ It is an irony...... ಲಿಬರಾಲಿಸಂ ಅಲ್ಲೂ ಜಾಸ್ತಿಯಾಗುತ್ತಾ ಆಲ್ಕೋಹಾಲ್ ಕನ್‌ಸಂಪಷನ್ ಕೂಡ ಜಾಸ್ತಿಯಾಗುತ್ತದೆ. ಇದಕ್ಕೆ ಯಾರು ಕಾರಣರು ಎಂದು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಹೇಳುವುದಕ್ಕೆ ಸಾಧ್ಯವೂ ಇಲ್ಲ, ಆದರೆ ಜನರನ್ನು ನಾನು ಹೀಗೇ ಹಿಡಿದಿಟ್ಟಿರುತ್ತೇನೆಂಬ ಧಾರ್ಮಿಕ ಗೂಡ್ಡುತನ ಏನು ಇರುತ್ತದೆ, ಅದು ಸರಿಯಲ್ಲ. ನಾನು ಹೀಗೆಯೇ ಮಾಡುತ್ತೇನೆಂದು ಹೇಳುವುದು ಸರಿಯಲ್ಲ. ಈಗ ಮಾದಕ ವಸ್ತುಗಳನ್ನು ನೋಡಿದಾಗ ಈ ಎರಡನ್ನು ನೋಡಬೇಕಾಗುತ್ತದೆ. ವ್ಯಕ್ತಿ ಕುಟುಂಬ, ಅವನು ಇರುವ ಸಮಾಜ ಮತ್ತು ಅವನು ರಚಿಸಿಕೊಂಡಿರತಕ್ಕ ಸರ್ಕಾರ ನಾನು ಈ ಕಡೆಯಿಂದ ಹೊರಟಿದ್ದೇನೆ. ಸರ್ಕಾರದ ವತಿಯಿಂದ ಅವನನ್ನು ಸರಿಪಡಿಸುವುದಕ್ಕೆ ಹೊರಟಿದ್ದೇವೆ. ಮಹಾತ್ಮ ಗಾಂಧೀಜಿಯವರ ಕಾಲದಲ್ಲಿ, ಮಹಾತ್ಮ ಗಾಂಧೀಜಿ

ಯಾವರು ಹೇಳಿದರು. ಅವರು ಸರ್ಕಾರದ ಕಡೆಯಿಂದ ಸಾಧ್ಯವಾಗುತ್ತದೆಂಬ ವಿಚಾರವನ್ನು ಹೇಳಿದರು ಪ್ರೊಹಿಬಿಷನ್ ಬಗ್ಗೆ ಹೇಳಿದರು ಬಹಳ ಕಂಠೋಕ್ತವಾಗಿ ಹೇಳಿದರು. ಅದನ್ನು ಯಾರು ಒಪ್ಪಿ ಕೊಂಡರೋ ವ್ಯಯಕ್ತಿಕವಾಗಿ ಅವರು ನಡೆಸಿಕೊಟ್ಟರು. ಆದರೆ ಕಾನೂನು ಮಾಡಿದರೆ ಅದು ಆಗಲಿಲ್ಲ. ಪಂಡಿತ್ ಜವಾಹರ್‌ಲಾಲ್ ನೆಹರೂರವರು ಅದರ ಬಗ್ಗೆ ವಾದ ಮಾಡಿದರು, ಲಿಬರ್ಟಿ ಬಗ್ಗೆ ಮತ್ತು ಲಿಬ್ರಲಿಸಂ ಬಗ್ಗೆ ಈಕ್ವಾಲಿಟಿ ಬಗ್ಗೆ ಹಾಗೂ ಮನುಷ್ಯ ಆಸ್ಪಿರೇಷನ್ ಬಗ್ಗೆ ನೆಹರೂರವರು ಮಹಾತ್ಮಾ ಗಾಂಧೀಜಿಯವರ ಜೊತೆ ವಾದ ಮಾಡಿದರು. Nehru was taken alcohol may be in a mild form ಆದ್ದರಿಂದ ಇಲ್ಲಿ ನಾವು ಒಂದು ರಿಜಿಡ್ ಆರ್ಥೋಡಾಕ್ಸಿ ತೆಗೆದುಕೊಂಡು, ಅಷ್ಟಾಗಿ ಈ ವಿಷಯದ ಬಗ್ಗೆ ನಮಗೆ ಚಿಂತನೆ ಕಡಿಮೆಯಾಗಿ ಇದರ ಬಗ್ಗೆ ಏನು ಮಾಡಬೇಕು ಎನ್ನತಕ್ಕ ಹಾಗೂ ಜನರನ್ನು ಹೇಗೆ ಇವತ್ತು ನಿಯಂತ್ರಣ ಮಾಡುವುದು ? It is not prohibition that is a problem before us. It is the temperance how do you make people temper to sustain alcohol, that is important. You cannot prohibit. No Government has been successful in the world to prohibit. ಆದ್ದರಿಂದ ಇವತ್ತು ಇದನ್ನು ವೈಜ್ಞಾನಿಕ ದೃಷ್ಟಿಯಿಂದ ನೋಡಿ. ಧಾರ್ಮಿಕ ದೃಷ್ಟಿ ಬಿಡಿ. ಕೆಲವು ಜಾತಿಗಳು, ಕುಡಿಯುವ ಜಾತಿಗಳು, ಕುಡಿಯದೇ ಇರುವ ಜಾತಿಗಳು, ಈ ರೀತಿ ಮಾಡಿಕೊಂಡು ಬಹಳ ಆದಿ ಕಾಲದಿಂದಲೂ ನಾವು ಬಂದಿದ್ದೇವೆ. ಬಹಳ ದೊಡ್ಡವರು ಕುಡಿಯುವಾಗ ಒಂದು ತರಹದ ಧರ್ಮ. ಬೇರೆಯವರು ಕುಡಿಯುವಾಗ ಇನ್ನೊಂದು ತರಹದ ಧರ್ಮ. ಈ ಧರ್ಮ ಮಾದಕ ವಸ್ತುಗಳಿಗೆ ಅಥವಾ ಮದ್ಯಪಾನಕ್ಕೆ ಬಹಳ ಸುಸೂತ್ರವಾಗಿ, ಶ್ಲೋಕಗಳ ಮೂಲಕ ಸಂಸ್ಕೃತದ ಮೂಲಕ ಬಹಳ ಚೆನ್ನಾಗಿ ಅಡ್ಜಸ್ಟ್ ಮಾಡಿಕೊಂಡು ಬಂದಿದ್ದೇವೆ. ಅದರ ಘನತೆ ಗಾಂಭೀರ್ಯವನ್ನು ಉಳಿಸಿಕೊಂಡು ಬಂದಿದ್ದೇವೆ. ಇದು ವಾಸ್ತವಿಕ ಸಮಾಜ. ಇಲ್ಲಿ ನಾವು ಅದನ್ನು ಹೇಳುವುದು ಒಂದು, ಇದನ್ನು ಗೊಡ್ಡು ದೃಷ್ಟಿಯಿಂದ ನೋಡುವುದು ಬೇಡ. ನಾನು ಮಾನ್ಯ ಶ್ರೀ ಕೆ. ಎಚ್. ಶ್ರೀನಿವಾಸ್‌ರವರು ಈ ಒಂದು ನಿರ್ಣಯವನ್ನು ತಂದಾಗ ನಾನು ಇದನ್ನೇ ಹೇಳಿದ್ದೇನೆ. ರಷ್ಯಾದಲ್ಲಿ ಒಡ್ಕಾ ಕಡಿಮೆ ಮಾಡಿದರೆ....

ಶ್ರೀ ಕೆ.ಎಚ್. ಪಾಟೀಲ್.—ಮಾನ್ಯ ಅಧ್ಯಕ್ಷರೆ, ಈಗ ಮಾತನಾಡುತ್ತಿರುವ ಮಾತು ಶ್ರೀ ಜೆ. ಎಚ್. ಪಟೇಲ್‌ರವರ ಭಾಷಣವೋ ಅಥವಾ ಕರ್ನಾಟಕ ರಾಜ್ಯ ಸರ್ಕಾರದ ನೀತಿಯೋ !

ಶ್ರೀ ಜೆ. ಎಚ್. ಪಟೇಲ್.—ಸರ್ಕಾರದ ಪರವಾಗಿ ಮಾತನಾಡುತ್ತಿದ್ದೇನೆ. ಈ ಸರ್ಕಾರ ಆ ನೀತಿಗೆ ವಿರುದ್ಧವಾಗಿ ಯಾವುದನ್ನೂ ಆಲೋಚನೆ ಮಾಡಿಲ್ಲ. ನಾನು ಈ ನಿರ್ಣಯವನ್ನು ಅವರು ಪ್ರಸ್ತಾಪ ಮಾಡಿದಾಗ ಈ ನಿರ್ಣಯವನ್ನು ಏಕೆ ನಾನು ಇವತ್ತು ತರುತ್ತಿದ್ದೇನೆಂದರೆ ರಷ್ಯದಲ್ಲಿ ಒಡ್ಕಾ ವೀಕ್ಲಿ ಕ್ವಾಂಟಿ ಏನು ಇದೆ ಅದನ್ನು ಕಂಟ್ರೋಲ್ ಮಾಡಿದ್ದಾರೆ, ನಮ್ಮಲ್ಲಿಯು ಈ ಮದ್ಯಪಾನವನ್ನು ಕಡಿಮೆ ಮಾಡಬೇಕು. ಎನ್ನುವ ದೃಷ್ಟಿಯಿಂದ ಚೈನಾದಲ್ಲಿ Most of the houses ಯಾವುದೇ ಮನೆಗೆ ನೀವು ಹೋಗಿ, ಕಾರ್ಮಿಕನ ಮನೆಗೆ ಹೋದರೂ ಆತನ ಮನೆಯಲ್ಲಿ ಹೆಚ್ಚು ಮತ್ತು ಏರದೆ ಇರತಕ್ಕಂತಹ ವೈನ್, ಬೀರ್ ಇಂತಹವುಗಳು ಇರುತ್ತವೆ. ಆದರೆ ಹೆಚ್ಚು ಮಾದಕವಾಗಿರತಕ್ಕ ಆರೋಗ್ಯ ಕೆಡತಕ್ಕ ಪಾನೀಯಗಳನ್ನು ಅಲ್ಲಿ ಏಕೆ ಮಾಡುವುದಿಲ್ಲ ಎಂದರೆ ಅಲ್ಲಿರತಕ್ಕ ಅವರ ಆರ್ಥಿಕ ವ್ಯವಸ್ಥೆ ಅಲ್ಲಿರ ತಕ್ಕ ಜಾತೀಯ ವ್ಯವಸ್ಥೆ ಅವರಲ್ಲಿರತಕ್ಕ ಸಾಮಾಜಿಕ ವ್ಯವಸ್ಥೆಯನ್ನು ಅವರು ತಾನಾಗಿಯೇ ರಚಿಸಿ ಕೊಂಡಿದ್ದಾರೆ. ಒಂದು ಉದಾಹರಣೆ ಕೊಡುತ್ತೇನೆ. ನಾವು ಇಲ್ಲಿ ಇವತ್ತು ಬಡವರು, ಬಡವರು, ಬಡವರು ಎಂದು ಮಾತನಾಡುತ್ತೇನೆ. ಈಗ ಬಡವರು ಮದ್ಯಪಾನ ನಿಲ್ಲಿಸಿದ ತಕ್ಷಣವೇ ಅವರ ಬಡತನ ಹೋಗುತ್ತದೆಂದು ಯಾರಿಗಾದರೂ ಭ್ರಮೆ ಇದ್ದರೆ ಅದು ತಪ್ಪು. ಕುಡಿತಕ್ಕೂ ಬಡತನಕ್ಕೂ ಆರ್ಥಿಕ ಸಂಬಂಧ ಇಲ್ಲ. ಆದರೆ ಒಂದು ಹೇಳುತ್ತೇನೆ. ಬಡವನ ದುಡಿಮೆಯ ಶಕ್ತಿಯನ್ನು ಮತ್ತು ಬಡ ಸಮಾಜಗಳ ಉತ್ಪಾದನಾ ಶಕ್ತಿಯನ್ನು ಧ್ವಂಸ ಮಾಡತಕ್ಕ ಶಕ್ತಿ ಇದಕ್ಕೆ ಇದೆ. ಇವತ್ತು ಈ ವ್ಯಕ್ತಿ ಯನ್ನು ಸರಿಪಡಿಸಿ.

ಶ್ರೀ ಬಿ. ಬಸವಲಿಂಗಪ್ಪ.—ನಿಮ್ಮ ಭಾಷಣಕ್ಕೆ ಸ್ಫೂರ್ತಿ ಕೊಡಲು ಒಂದು ವಿಷಯವನ್ನು ಹೇಳುತ್ತೇನೆ.

ಅಧ್ಯಕ್ಷರು.—ತಾವು ಕುಳಿತುಕೊಳ್ಳಿ.

ಶ್ರೀ ರಾಮಕೃಷ್ಣ ಹೆಗ್ಡೆ.—ಮಾನ್ಯ ಪಟೇಲರು ಬಹಳ ಸ್ವಾರಸ್ಯಕವಾಗಿ ಮಾತನಾಡುತ್ತಿದ್ದಾರೆ. ತಾವು ಕುಳಿತುಕೊಳ್ಳಿ.

ಶ್ರೀ ಜೆ. ಹೆಚ್. ಪಟೇಲ್.—ಈ ಕುಡಿತದ ವಿಷಯಕ್ಕೆ ಬಂದಾಗ ಒಂದು ಕಡೆ ಅತ್ಯಂತ ಪ್ರಾಮಾಣಿಕರು ಇದ್ದಾರೆ. ಗಾಂಧೀಜಿಯಂತಹವರು. ನಾನು ಅವರನ್ನೇ ಉದಾಹರಿಸುವುದು ಏಕೆಂದರೆ ಆತ್ಮ ಶುದ್ಧಿ ವಿಷಯದಲ್ಲಿ ಮಾತನಾಡುವಾಗ ಪ್ರಾಮಾಣಿಕವಾಗಿ ತನ್ನ ವೈಯಕ್ತಿಕ ಉಳಿವಿಗಾಗಿ ಅಲ್ಲ, ತನ್ನ ಒಂದು ಕುಟುಂಬದ ಉಳಿವಿಗಾಗಿ ಅಲ್ಲ, ಇಡೀ ಸಮಾಜದ ರಾಷ್ಟ್ರದ ಉಳಿವಿಗಾಗಿ ಆಲೋಚನೆ ಮಾಡಿದವರು ಮಹಾತ್ಮಾ ಗಾಂಧೀಜಿಯವರು. ಸ್ವತಃ ಅವರೇ ತಮ್ಮ ಆತ್ಮಕತೆಯಲ್ಲಿ ಬರೆದಿದ್ದಾರೆ. ಅವರು ಮೊದಲು ಯಾವುದೋ ಒಬ್ಬ ಗೆಳತಿಯ ಮನೆಗೆ ಹೋದಾಗ ಅವರ ಪ್ರಯತ್ನವನ್ನು ಅವರ ಮೇಲೆ ಮಾಡಿದರು, ಆದರೆ ಅವರು ಒಪ್ಪಲಿಲ್ಲ. ಮತ್ತೆ ಜೀವನದಲ್ಲಿ ಅವರು ಕುಡಿಯಲಿಲ್ಲ. ಆದರೆ ಇವೊತ್ತು ಕುಡಿಯದೇ ಇರುವವರೆಲ್ಲಾ ಗಾಂಧಿಗಳೆಂದು ನಾನು ಭಾವಿಸುವುದಿಲ್ಲ. ಇಂತಹವರೆಲ್ಲಾ ಮಾನವತಾವಾದಿಗಳಲ್ಲ. ಏಕೆ ? ಇದೇ ೨೦ನೇ ಶತಮಾನದಲ್ಲಿ ಮಾನವಕೋಟಿಯ ಮೇಲೆ ಅತ್ಯಂತ ಅಮಾನುಷವಾದ ಆಕ್ರಮಣ ಮಾಡಿಸಿ ಲಕ್ಷಾಂತರ ಜನರನ್ನು ಗ್ಯಾಸ್ ಛೇಂಬರಿಗೆ ಕಳುಹಿಸಿದ ಹಿಟ್ಲರ್ ಒಂದು ಹನಿ ಆಲ್ಕೋಹಾಲ್ ತೆಗೆದುಕೊಂಡಿರಲಿಲ್ಲ. ಒಂದು ಕಡೆ ಆಟಂಬಾಂಬ್‌ನಿಂದ ಮಾನವಕೋಟಿಯನ್ನು ರಕ್ಷಣೆ ಮಾಡತಕ್ಕ ಗಾಂಧೀಜಿ ಮದ್ಯಪಾನವನ್ನು ಅರಿತಿರಲಿಲ್ಲ. ಅನುಭವಿಸಿರಲಿಲ್ಲ ಈ ರೀತಿ ಈ ಮನುಷ್ಯ. ಅರ್ಥ ಏನೆಂದರೆ, ಯಾರು ಕುಡಿಯುವುದಿಲ್ಲ ಅವರೆಲ್ಲಾ ಗಾಂಧಿಗಳು, ಯಾರು ಕುಡಿಯುವುದಿಲ್ಲ ಅವರು ಧರ್ಮಿಷ್ಠರು, ಯಾರು ಕುಡಿಯುವುದಿಲ್ಲ ಅವರೆಲ್ಲಾ ಸಂಪನ್ನರೇ ? ಒಂದು ತಿಂಗಳಿಗೆ ೩೦ ರೂಪಾಯಿಗಳಂತೆ ಬಡ್ಡಿ ತೆಗೆದುಕೊಂಡು ಬರೀ ಮಜ್ಜಿಗೆ ಕುಡಿಯುತ್ತಿರುವವನು ಒಬ್ಬ. ಅವನ ಸುತ್ತ ಇರತಕ್ಕ ಜನರೆಲ್ಲಾ ತಿಂಗಳು ತಿಂಗಳು, ವರ್ಷೇ ವರ್ಷೇ ಕೂಲಿ ಮಾಡುತ್ತಾ, ಇವರ ಮಕ್ಕಳು ಮಾಲ್‌ನ್ಯೂಟ್ರಿಷನ್‌ನಿಂದ ಹೆಣಗಳನ್ನು ಹೋಲುತ್ತಿರುತ್ತಾರೆ. ಮಜ್ಜಿಗೆ ಕುಡಿದು, ೩೦ ರೂಪಾಯಿ ಬಡ್ಡಿ ಸಂಪಾದನೆ ಮಾಡುತ್ತಿರುವ ಇವನಂಥ ಕುಡುಕ ಇನ್ನೊಬ್ಬನಿಲ್ಲ. ನಾನು ಒಂದು ಮಂದಿರ ಕಟ್ಟಿಸುತ್ತೇನೆ. ನನ್ನ ಮಂದಿರಕ್ಕೆ ಜನರು ಬರುತ್ತಾರೆ. ನಾನು ಒಂದು ಬ್ಲೇಡ್ ಉತ್ಪಾದನೆ ಮಾಡಿ ಅದರಿಂದ ಜನರನ್ನು ತೆಗೆಯುತ್ತೇನೆ. ಆದರೆ ನಾನು ಮದ್ಯ ಕುಡಿಯುವುದಿಲ್ಲ ಜನರನ್ನು ಇಂತಹ ವಿಧಗಳಲ್ಲಿ ಹಿಂಸಿಸುತ್ತೇವೆ, ಇಂತಹ ಅಸ್ತ್ರಗಳು ಮದ್ಯಪಾನದ ಚೌಕಟ್ಟಿನಲ್ಲಿ ಬರುವುದಿಲ್ಲ. ಇವತ್ತು ನಾವು ಶೋಷಣೆ ಬಗ್ಗೆ ಮಾತನಾಡುತ್ತೇವೆ, ಹಿಂದುಳಿದ ವರ್ಗಗಳ ಬಗ್ಗೆ ಮಾತನಾಡುತ್ತೇವೆ, ಸಮಾಜದ ಸ್ಥಿತಿಗತಿಗಳ ಬಗ್ಗೆ ಮಾತನಾಡುತ್ತೇವೆ. ಸಮಾಜದ ಸ್ಥಿತಿಗತಿಗಳ ಬಗ್ಗೆ ಈ ಮಜ್ಜಿಗೆ ಕುಡಿದು, ಹಾಲು ಕುಡಿದಿರತಕ್ಕ ಮಹಾನ್ ಬ್ಲಡ್ ಸಕ್ಕರ್ ಏನಿದ್ದಾನೆ ಅವನು ಇವತ್ತು ನಮ್ಮ ಕಣ್ಣಿಗೆ ಕಾಣುವುದಿಲ್ಲ. ನಮ್ಮ ರಾಜರತ್ನಮ್ ಹೆಂಡ್ಕುಡ್ಕ, ರತ್ನನ್ ಪದಗಳನ್ನು ನಾವು ಆತನಲ್ಲಿ ಕಾಣುತ್ತೇವೆ ಆತ ಹೆಂಡ್ಕುಡ್ಕ, ಆತ ಕುಡಿದರೇನು ನಿನಗೆ ? ಆತ ಸ್ವತಃ ಕುಡಿತಾನೆ. ಈ ಕುಡಿತದಲ್ಲಿ ಮೂರು ಹಂತಗಳು ಇವೆ. ಒಬ್ಬ ಕುಡಿದು ತನ್ನನ್ನು ತಾನೇ ಹಾಳುಮಾಡಿಕೊಳ್ಳುತ್ತಾನೆ. ಹೆಚ್ಚಾದರೆ ತನ್ನ ಕುಟುಂಬವನ್ನು ಹಾಳುಮಾಡಿಕೊಳ್ಳುತ್ತಾನೆ, ಆಮೇಲೆ ಸಮಾಜಕ್ಕೆ ಆತಂಕಕಾರಿ ಆಗುತ್ತಾನೆ. ಇಡೀ ಸಮಾಜಕ್ಕೆ, ಇಡೀ ರಾಷ್ಟ್ರಕ್ಕೆ ಆತಂಕಕಾರಿಯಾಗಿರತಕ್ಕ ನಮ್ಮ ಅರ್ಥ ವ್ಯವಸ್ಥೆಯ ಸೂತ್ರವನ್ನು ಹಿಡಿದಿರತಕ್ಕ ಬಹಳ ಜನ ಕುಡಿಯುವುದಿಲ್ಲ. ಅವರಿಗೆ ಕುಡಿಯತಕ್ಕ ಅವಶ್ಯಕತೆ ಇಲ್ಲ. ಅವರಲ್ಲಿರತಕ್ಕ ಅಮಲು ಇಳಿಯುವುದಕ್ಕೆ ಇನ್ನೂ ನೂರಾರು ವರ್ಷಗಳು ಬೇಕು. ಆ ಅಮಲನ್ನು ಇಳಿಸಬೇಕಾದರೂ ಒಂದು ದೃಷ್ಟಿ ಇರಬೇಕು.

೨-೦೦ ಪಿ. ಎಂ.

ಈಗ ನಾವು ಕಣ್ಣಿಗೆ ಕಾಣುತ್ತಿದ್ದೇವೆ. ಈ ಮದ್ಯಪಾನದಿಂದ ಆಗತಕ್ಕ ದುರಂತಗಳನ್ನು ದಿನನಿತ್ಯ ನೋಡುತ್ತಿದ್ದೇವೆ. ಬೆಂಗಳೂರಿನ ಯಾವುದೇ ಸರ್ಕಲ್‌ನಲ್ಲಿ ೧೫ ವರ್ಷಗಳ ಹಿಂದೆ ಹೇಗೆ ನಿರ್ಭಯವಾಗಿ ಓಡಾಡಬಹುದಾಗಿತ್ತೋ, ಆ ಸ್ಥಿತಿ ಇವತ್ತು ಇಲ್ಲ. ಹಳ್ಳಿಗಾಡಿನಲ್ಲಿ ಸಾಯಂಕಾಲ ಬಸ್ ಸ್ಟ್ಯಾಂಡ್‌ಗಳಲ್ಲಿ ಆರು ಗಂಟೆಯಾದರೆ ಇವತ್ತು ಮರ್ಯಾದಸ್ಥರು ಓಡಾಡುವುದಕ್ಕೆ ಆಗುವುದಿಲ್ಲ. ಆ ಸ್ಥಿತಿ ಆಗಿದೆ ಆ ಸ್ಥಿತಿ ಆಗಿರುವುದರಿಂದ ಇದು ನಮ್ಮ ಆರ್ಥಿಕ ವ್ಯವಸ್ಥೆಯ ಮೂಲಭೂತ ರೋಗದಿಂದ ಈ ಹುಣ್ಣು ಆಗಿದೆ. ಆ ಹುಣ್ಣನ್ನು ಇವತ್ತು ಎಗ್ರಾಗರೇಟ್ ಮಾಡತಕ್ಕ ಅದಕ್ಕೆ ಕ್ಯಾಟಲಿಟಿಕ್ ಏಜೆಂಟಾಗಿ ಆಲ್ಕೋಹಾಲ್ ಅದು ಮಾಡುತ್ತಿದೆ. ನಿರುದ್ಯೋಗ ಬಡತನದ ಬಗ್ಗೆ ಬರೀ ನಮ್ಮ ಘೋಷಣೆ ಹೆಚ್ಚಾಗುತ್ತಾ

ಹೋಗುತ್ತಿದೆ. ಇವತ್ತು ನಾವು ತೀವ್ರವಾಗಿ ತಲೆಕೆಡಿಸಿಕೊಳ್ಳಬೇಕಾಗಿದೆ, ಅದು ಏನೋ ಆಗುತ್ತದೆ. ಹಾಲು ಉಕ್ಕುತ್ತದೆ ಅಂದರೆ ಎರಡು ಹನಿ ನೀರು ಹಾಕಿ ಉಕ್ಕುವುದನ್ನು ಸಮಾಧಾನ ಮಾಡಬಹುದು ಅಷ್ಟೆ. ನಾವು ಇವತ್ತು ಸಮಾಜದ ಗರ್ಭದಲ್ಲಿರತಕ್ಕ ದುರಂತಗಳು ಏನಿವೆ, ದುರಂತಗಳಿಗೆ ಕಾರಣವಾಗಿರತಕ್ಕ ವಿಷಯಗಳೇ ಏನಿವೆ ವಿಚಾರಗಳು ಏನಿವೆ ಅವುಗಳ ಕಡೆಗೆ ಹೋಗುವುದಕ್ಕೆ ತಯಾರಾಗಿಲ್ಲ. ಯಾರೂ ಹೋಗುವುದಕ್ಕೆ ಇವತ್ತು ತಯಾರಾಗಿಲ್ಲ. ಅದನ್ನು ಮುಟ್ಟುವುದಕ್ಕೆ ಹೋದ ತಕ್ಷಣ ಆದರ ಬೀಜವನ್ನು ಮುಟ್ಟುವುದಕ್ಕೆ ಹೋದವರು ಆರ್ಥಿಕವಾಗಿ ಇರುವುದಿಲ್ಲ, ಸಾಮಾಜಿಕವಾಗಿ ಇರುವುದಿಲ್ಲ. ಬೆಂಡಿಗೇರಿಯಂದು ಏನೋ ಹೇಳುತ್ತಾರೆ. ಆದರೆ ಇಡೀ ಭಾರತದ ಸಮಾಜದಲ್ಲಿರತಕ್ಕ ರೋಗದ ಗಡ್ಡೆಯನ್ನು ಮುಟ್ಟುವುದಕ್ಕೆ ಮಾನ್ಯ ಬಸವಲಿಂಗಪ್ಪನವರಿಂದ ಸಾಧ್ಯವಿಲ್ಲ. ಬಸವಣ್ಣನವರ ಕೈಯಲ್ಲಿ ಆಗಲಿಲ್ಲ, ಅಂಬೇಡ್ಕರವರಿಂದ ಆಗಲಿಲ್ಲ, ಇವರ ಕೈಯಲ್ಲಿ ಆಗುತ್ತದೆಯೋ ? ನೂರಾರು ವರ್ಷಗಳಿಂದ ಆಗದೇ ಇರತಕ್ಕದ್ದನ್ನು ಮಾತನಾಡುತ್ತೇವೆ. ಇಮ್‌ಪ್ರಾಕ್ಟಿಕಲ್ ಆಗಿ ಸುಮ್ಮನೆ ಮಾತನಾಡುತ್ತೇವೆ. ಮನಸ್ಸಿನಲ್ಲಿರತಕ್ಕ ದುಃಖವನ್ನು ತೋಡಿಕೊಳ್ಳುತ್ತೇವೆ. ಮಾನ್ಯ ಬಸವಲಿಂಗಪ್ಪನವರು ಬಂದೂಕು ತೆಗೆದುಕೊಳ್ಳುತ್ತೇವೆ, ದಲಿತರೆಲ್ಲ ಒಂದಾಗುತ್ತೇವೆ ಎಂದು ಹೇಳುತ್ತಾರೆ. ಏನು ಒಂದಾಗುತ್ತಾರೆ ? ಇಡೀ ವ್ಯವಸ್ಥೆಯನ್ನು ಕೇಂದ್ರೀಕೃತಗೊಳಿಸಿರುವಂತಹ ಯಾರೇ ಇರಲಿ, ಯಾವುದೇ ಪಾರ್ಟಿ ಇರಲಿ ಆ ಪಾರ್ಟಿಯ ಆಶ್ರಯದಲ್ಲಿ ಹಾವಿನ ಹೆಡೆಯ ಕೆಳಗೆ ಕಪ್ಪೆಯಂತಿರುವವ ನಾನು ಸಮಾಜದಲ್ಲಿ ಬದುಕುತ್ತೇನೆಂದರೆ ಅದು ಆಗುವುದಿಲ್ಲ ಸ್ವಾಮಿ. ಕೈಮುಗಿದು ಹೇಳುತ್ತೇನೆ ಆಗುವುದಿಲ್ಲ, ಕಾಲಿಗೆಬಿದ್ದು ಹೇಳುತ್ತೇನೆ ಅದು ಆಗುವುದಿಲ್ಲ. ನೀವು ಹೇಳುವ ರೀತಿಯಿಂದ ಅದು ಆಗುವುದಿಲ್ಲ. ಆದ್ದರಿಂದ ಈ ವ್ಯವಸ್ಥೆಯಲ್ಲಿ ಹಲವಾರು ದುರಂತಗಳಿಗೆ ಕಾರಣವಾಗಿರತಕ್ಕ ವಸ್ತು ಏನಿದೆ ಅದು ಲಿಕ್ಕರ್ ಅದನ್ನು ಏನು ಮಾಡಬೇಕು ? ಈ ರೋಗ ಆದರಿಂದ ಆಗಿದೆ ಅಂದರೆ ನಾನು ಒಪ್ಪುವುದಿಲ್ಲ. ಇರತಕ್ಕ ಬೇರೆ ಕಾರಣಕ್ಕೋಸ್ಕರ ರೋಗ ಉಲ್ಬಣವಾಗುತ್ತಿರುವುದು, ಆದ್ದರಿಂದ it acts as a catalytic agent to the social system, economic system ಕಾನಮಿಕ್ ಸಿಸ್ಟಮ್ ಗೋರ್ಬಚೆವ್‌ಗೆ ಗೊತ್ತು. ಏನು ಮಾಡಬೇಕೆಂದು ಗೊತ್ತು. ಅವನ ದೇಶದಲ್ಲಿರತಕ್ಕ ಮನುಷ್ಯನಿಗೆ ಎರಡು ಹೊತ್ತು ಅನ್ನ. ಎರಡು ಹೊತ್ತು ಅನ್ನ ಕೊಡುವುದರಿಂದ ದೇಹಕ್ಕೆ ಸಾಕಷ್ಟು ಶಕ್ತಿ ದೊರೆಯುತ್ತದೆ. ವೋಡ್ಕ ಕುಡಿಯಬೇಡಿರಿ ಎಂದು ಹೇಳುತ್ತಾನೆ. ನಾವು ಇವತ್ತು ಯಾವ ಸ್ಥಿತಿಯಲ್ಲಿ ಇಟ್ಟಿದ್ದೇವೆ ? ಅದನ್ನು ಹೇಳಿದ್ದೇನೆ, ಒಂದು ಕಡೆ ಧರ್ಮ ಇನ್ನೊಂದು ಮತ. both are equally intoxicant ಎರಡನ್ನೂ ಮುಟ್ಟುವುದಕ್ಕೆ ಆಗುವುದಿಲ್ಲ. ಧರ್ಮ ಮುಟ್ಟಿ ಬದುಕಿಕೊಳ್ಳಿ ನೋಡುತ್ತೇನೆ, ಅದೇರೀತಿ ಇವತ್ತು ಮತವನ್ನು ಮುಟ್ಟಿ ಬದುಕಿಕೊಳ್ಳುವುದು ಕಷ್ಟವಾಗಿದೆ. ಎಲ್ಲರೂ ಹೇಳುತ್ತಾರೆ ಅದನ್ನು ಮಾಡೋಣ ಇದನ್ನು ಮಾಡೋಣವೆಂದು. ನಾಲ್ಕು ತಿಂಗಳು ಎಕ್ಸ್‌ಪರ್‌ಮೆಂಟ್ ಮಾಡಬಹುದು, ಸುತ್ತಾ ಪೋಲೀಸ್ ಕಾವಲು ಹಾಕಿ ಅಂಗಡಿಗಳನ್ನು ಕ್ಲೋಸ್ ಮಾಡಿದರೆ, ಆ ಗಟಾರದಲ್ಲಿರತಕ್ಕ ದುರ್ವಾಸನೆ ಎಲ್ಲಿಯಾದರೂ ಹೊರ ಹೊಮ್ಮಿ ಹೊಮ್ಮುತ್ತದೆ. ದನಗಳನ್ನು ಸಣ್ಣ ಜಾಗದಲ್ಲಿ ಬೇಲಿ ಹಾಕಿ ಕೂಡಿಹಾಕಿದರೆ ಅವು ಇರುವುದಿಲ್ಲ. ಅವು ಎಲ್ಲಿಯಾದರೂ ನುಗ್ಗುತ್ತವೆ. ಮೊದಲು ನಾವು ರೆಕಗ್ನೈಸ್ ಮಾಡಬೇಕಾಗಿರುವುದು ಎಂದರೆ ಇದೊಂದು ಮಾನವನ ಅದಮ್ಯ ಗುಣ ಅದು ಹೇಗೆ ಬಂದಿದೆ ? ಭಂಗಿಸೊಪ್ಪನ್ನು ಹಿಂದೆ ಸೇದುತ್ತಿದ್ದರು ಆಗ ಇರಲಿಲ್ಲವೆ ? ಹಿಂದೆ ಯೂರೋಪ್‌ನವರು ಯುದ್ಧದ ಬಗ್ಗೆ ಕಾಮೆಂಟ್ ಮಾಡುತ್ತಾ ಹೇಳುತ್ತಾರೆ ಇಂಡಿಯನ್ಸ್‌ಫೂಲ್ಸ್. ಅವರು ಗಾಂಜ ಕುಡಿದು ನಿದ್ದೆ ಹೊಡೆದರು, ನಮ್ಮವರು ರಮ್ ಕುಡಿದು ಬಹಳ ವೇಗವಾಗಿ ಹೋದರು, ಅದರಿಂದ ಕೋಟೆಗಳನ್ನು ಗೆಲ್ಲುತ್ತಾ ಗೆಲ್ಲುತ್ತಾ ಹೋಗುವುದಕ್ಕೆ ಸಾಧ್ಯವಾಯಿತು ಎಂದು ಹೇಳುತ್ತಾರೆ. ನಾನು ರಮ್ ಎಕ್ಸ್‌ಪೋನೆಂಟ್ ಎಂದು ಹೇಳುವುದಿಲ್ಲ. ಅದರ ಅರ್ಥ ಅದಲ್ಲ, ಯಾವುದಾದರೂ ಇಂತಹ ಒಂದು ಮಾನಸಿಕವಾಗಿ ಅಂಟಿಕೊಂಡಿರುವ ಜಾಡ್ಯ ಮಾನವಕುಲಕ್ಕೆ ಅಂಟಿಕೊಂಡಿರುವ ಜಾಡ್ಯ, ವೈಜ್ಞಾನಿಕವಾಗಿ ಕೈಗೊಂಡಿರುವ ಯಾವುದೇ ಸರ್ಕಾರದ ಕಾರ್ಯಕ್ರಮ ಇತಿಮಿತಿಯಲ್ಲಿರಬೇಕು. ಆಕಾಶವನ್ನು ಕೆಳಗೆ ತರುತ್ತೇವೆಂದು ಹೇಳುವುದಕ್ಕಾಗುವುದಿಲ್ಲ. ನಾವು ನೀವು ಹೇಳುವುದಲ್ಲ, ರಷ್ಯಾದ ಅನುಭವ ಚೈನಾದ ಅನುಭವ, ಅಮೇರಿಕಾ ದೇಶದಲ್ಲಿ ಯಾರೋ ಒಬ್ಬರು ಪ್ರೆಸಿಡೆಂಟ್ ಎಲೆಕ್ಷನ್‌ಗೆ ನಿಂತು ನಾನು ಪಾನನಿರೋಧ ಜಾರಿಗೆ ತರುತ್ತೇನೆಂದು ಹೇಳಿ ಚುನಾವಣೆಯಲ್ಲಿ ಡಿಪಾಸಿಟ್ ಕಳೆದುಕೊಂಡರಂತೆ. ಇದು ವಸ್ತುಸ್ಥಿತಿ, ಈಗ ಇರತಕ್ಕ ದೋಷ ಏನಿದೆ ಅದರ ಕಡೆ ನಾವು ನೋಡಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಈಗ ತಾವೇನು ಮಾಡಂತ್ತೀರಿ ಅದನ್ನು ಹೇಳಿಬಿಡಿ. ?

ಶ್ರೀ ಜಿ. ಎಚ್. ಪಟೇಲ್.—ಈ ನಿರ್ಣಯದಿಂದ ಮಹಾನ್ ದುಷ್ಟಶಕ್ತಿಗಳು ಏನಿವೆ ರಾಷ್ಟ್ರದ ಸಮಾಜದ ಜೀವನದಲ್ಲಿ ಬೆಳೆಯುತ್ತಿರುವ ಈ ಶಕ್ತಿಯನ್ನು ಹತೋಟಿಯಲ್ಲಿಡುವುದಕ್ಕೆ ಮೊದಲನೆಯ ಹೆಜ್ಜೆಯಾಗಿ ಏನಾದರೂ ನಾವು ವಿಚಾರ ಮಾಡಬೇಕು. ಇದನ್ನು ತೆಗೆದುಬಿಡಿ ಎನ್ನತಕ್ಕ ಅಪ್ರಕೃತ ಅಭಿಪ್ರಾಯಗಳನ್ನು ಹೇಳುವುದು ಬೇಡ. ಇದನ್ನು ಹೇಗೆ ನಿಯಂತ್ರಿಸಬೇಕು ? ಎಂದು ನಿರ್ಣಯ ವನ್ನು ಮಂಡಿಸುತ್ತಾ ಅವರು ಹೇಳಿದರು ಸರ್ಕಾರದ ಒಂದುಕಡೆ ಹಣಕಾಸಿನ ಆದಾಯಕ್ಕೋಸ್ಕರ ಅದನ್ನು ಕೊಡಿಸುತ್ತಾ ಕೊಡಿಸುತ್ತಾ ಹೆಚ್ಚಾಗಿ ಹೋಗುತ್ತಿದೆ ಎಂದು. ಒಂದು ಕಡೆ ಜನರ ಆರೋಗ್ಯ ಕೆಡುತ್ತದೆ. ಹಣಕಾಸಿನ ದೃಷ್ಟಿಯಿಂದ ಇದನ್ನು ನೋಡಬಾರದು. ಸಮಾಜದ ಆರೋಗ್ಯ ದೃಷ್ಟಿ ಯಿಂದ ಯಾರು ತೆರಿಗೆಯನ್ನು ಕೊಡುತ್ತಾರೆ, ಅವರ ಆರೋಗ್ಯದ ದೃಷ್ಟಿಯಿಂದ ನೋಡಬೇಕು. ಆ ದೃಷ್ಟಿಯಿಂದ ಇದನ್ನು ನಿಯಂತ್ರಿಸಬೇಕೆಂದು ಅವರು ಸಲಹೆಯನ್ನು ಕೊಟ್ಟರು. ಸರಿ ಒಪ್ಪುತ್ತೇನೆ ಇನ್ನು ಕೆಲವರು ಹೇಳಿದರು ಹಳ್ಳಿಹಳ್ಳಿಗಳಲ್ಲಿ ಕುಡಿತದ ಅಂಗಡಿಗಳಾಗಿವೆ ಎಂದು. ಹಳ್ಳಿಹಳ್ಳಿಗಳಲ್ಲಿ ಕುಡಿತದ ಅಂಗಡಿಗಳು ಅಥವಾ ಒಂದೇ ಊರಲ್ಲಿ ಜಾಸ್ತಿ ಅಂಗಡಿಗಳು ಆಗಿದ್ದರೆ ಇದು ನಮ್ಮ ಒಂದು ರಾಜ್ಯದ ರೋಗ ಅಲ್ಲ ಮಾನ್ಯ ಅಧ್ಯಕ್ಷರೇ. ಈ ರೋಗ ಹಿಮಾಲಯ ಪರ್ವತದಿಂದ ಎಲ್ಲಾ ಕಡೆಗೆ ಬೀಸುತ್ತಿದೆ. ಅದಕ್ಕೆ ಒಂದು ಕಾರಣ ಇದೆ. ಏನೂ ಕೆಲಸ ಇರುವುದಿಲ್ಲ, ಬಂದು ದುಡಿಮೆ ಮಾಡು ವುದಕ್ಕೆ ಆಗುವುದಿಲ್ಲ. ಸರಿ ಒಂದು ಅಂಗಡಿಯನ್ನು ಇಟ್ಟುಕೊಂಡ. ಹಿಂದೆ ಯಾವುದೋ ಕಾಲದಲ್ಲಿ ಬೆಳ್ಳಿಬಂಗಾರದ ಅಂಗಡಿಗಳನ್ನು ರಸ್ತೆಬದಿಗಳಲ್ಲಿ ಇಟ್ಟುಕೊಂಡಿದ್ದರು. ಒಂದು ಕಾಲದಲ್ಲಿ ಹಳ್ಳಿಗಳಲ್ಲಿ ಮನೆಯಲ್ಲಿ ಅಕ್ಕಿ ಗೋಧಿ ಜಾಸ್ತಿ ಇಲ್ಲದಿದ್ದರೂ ತುಪ್ಪ ಇರುತ್ತಿತ್ತು. ದನಕರುಗಳು ಜಾಸ್ತಿ ಇರುತ್ತಿದ್ದವು. ಅವರು ಭಾರಿ ಶ್ರೀಮಂತರು ಅಲ್ಲದಿದ್ದರೂ ಕೂಡ ದೀಪಕ್ಕೆ ತುಪ್ಪ ಹಾಕುತ್ತಿದ್ದರು. ಅಂತಹ ಕಾಲ ಈಗಿಲ್ಲ ಈಗ ಔಷಧಿಗೆ ಅವೆಲ್ಲ ಸಿಗುವುದಿಲ್ಲ. ಇವತ್ತು ಏನಾಗಿದೆ ಎಂದರೆ ತಾನಾಗಿಯೇ ಒಬ್ಬ ಒಂದು ಸಿ.ಎಲ್. 2 ಲೈಸೆನ್ಸ್ ಕೊಡಿ, ಏನೂ ಕೆಲಸ ಇಲ್ಲ, ಇದನ್ನಾದರೂ ಮಾಡಿಕೊಂಡಿರು ತ್ತೇನೆ ಎಂದು ಹೇಳುತ್ತಾನೆ. ಹೀಗೆ ಬೇರೆ ಬೇರೆ ಆರ್ಥಿಕ ದಿಗ್ಬಂಧನಗಳ ಕಾರಣ ನಮ್ಮಲ್ಲಿರತಕ್ಕಂಥ ನಿರುದ್ಯೋಗಿ ಜನರ ಒತ್ತಡ ಮತ್ತು ಒತ್ತಾಸೆ ಇವುಗಳ ಕಾರಣದಿಂದ ಮಾರುವ ಅಂಗಡಿಗಳ ಸಂಖ್ಯೆ ಜಾಸ್ತಿ ಇದೆ. ಈ ಕಾರಣದಿಂದ ಒಂದು ಪರ್ಸೆಂಟ್ ಕುಡಿಯುವುದು ಜಾಸ್ತಿಯಾಗಿದೆ. ಕುಡಿಯುವುದು ಜಾಸ್ತಿಯಾಗಿದೆ ಎನ್ನುವ ಕಾರಣದಿಂದ ಈ ನೀತಿಯೇನಿದೆ ರಾಜ್ಯದಲ್ಲಿ ಮತ್ತು ರಾಷ್ಟ್ರದಲ್ಲಿ, ಇದರ ಬಗ್ಗೆ ಅವಾಸ್ತವಿಕವಾದಂಥ ತೀರ್ಮಾನಗಳನ್ನು ನಾವು ತೆಗೆದುಕೊಳ್ಳಬಾರದು ಎಂಬುದು ನನ್ನ ಮಾತಿನ ಸಾರಾಂಶ. ವಾಸ್ತವಿಕವಾಗಿ ಟೆಂಪರೆನ್ಸ್ ಎಂದು ಏನಿದೆ temparance is the ideal prescription. Prohibition is not the prescription. Prohibition is not practised anywhere in the world. ಇದು ಹೀಗೆ ಬರಬೇಕು ? ಬರ್ನಾರ್ಡ್‌ಶಾ ಅವರು ತಮ್ಮ ನಾಟಕಗಳಲ್ಲಿ, ಮತ್ತು ಅವರ ಕಾದಂಬರಿಗಳಲ್ಲಿ ಅವುಗಳನ್ನು ಓದಿದವರು ಎಲ್ಲಿಯಾದರೂ ಒಂದು ಕಡೆ ಈ ಕುಡಿತದ ಬಗ್ಗೆ ಒಬ್ಬ ಮನುಷ್ಯ ತನಗೆ ತಾನಾಗಿಯೇ ಹೆಸಿಗೆ ಪಟ್ಟುಕೊಳ್ಳುವಂತೆ ಬರೆದಿ ದ್ದಾರೆಯೇ. ? ನಾವು ಇಲ್ಲಿ ಇದನ್ನು ಪಾಪ ಪುಣ್ಯ ಎಂದು ಮಾಡಿಕೊಂಡಿದ್ದೇವೆ. ಪಾಪ ಪುಣ್ಯ ಈ ಎರಡು ಶಬ್ದಗಳನ್ನು ಉಪಯೋಗ ಮಾಡಿ ಯಾವುದು ವಾಸ್ತವಿಕ, ಅವಾಸ್ತವಿಕ, ಯಾವುದು ವ್ಯವಹಾರಿಕ, ಅವ್ಯವಹಾರಿಕ ಯಾವುದು ವೈಜ್ಞಾನಿಕ ಮತ್ತು ಯಾವುದು ಅವೈಜ್ಞಾನಿಕ ಇವುಗಳ ತೆರೆಗಳನ್ನು ಮುಚ್ಚಿಬಿಟ್ಟಿದ್ದೇವೆ. ಕುಡಿಯುವುದು, ಮಾಂಸ ತಿನ್ನುವುದು ಮನುಷ್ಯ ತಾನು ಬದುಕುವುದಕ್ಕೆ, ತನ್ನ ಸಂತತಿಯನ್ನು ಉಳಿಸಿಕೊಳ್ಳಲಿಕ್ಕೆ ಮಾಡಬೇಕಾಗಿ ಬಂದ ನಿಸರ್ಗದತ್ತವಾದ ಒತ್ತಡಗಳು ಇವು. ಇವುಗಳನ್ನೆಲ್ಲಾ ಪಾಪ ಅಂತ ನಾವು ಹೇಳುತ್ತೇವೆ. ನಮ್ಮ ಜನರ ದೃಷ್ಟಿಯನ್ನು ಅವೈಜ್ಞಾನಿಕವಾಗಿ ಮಾಡಿದ್ದರಿಂದ ಈ ಒಂದು ಸಾಮಾಜಿಕ ಪಿಡುಗು ಉಂಟಾಗಿದೆ. ಇದು ಒಂದು ಸಾಮಾಜಿಕ ಕ್ಯಾನ್ಸರ್ ಆಗಿದೆ ಇಡೀ ಭಾರತದ ಸಮಾಜಕ್ಕೆ, ಕರ್ನಾಟಕಕ್ಕೆ ಅಷ್ಟೇ ಅಲ್ಲ. ಈ ಕ್ಯಾನ್ಸರ್ ವಿರುದ್ಧವಾಗಿ ಇವತ್ತು ಹೋರಾಟ ಮಾಡುವುದಕ್ಕೆ ಸಶಕ್ತವಾಗಿರತಕ್ಕಂಥ ಚೈನಾ, ರಷ್ಯಾಗಳು ಪ್ರಾರಂಭ ಮಾಡುತ್ತಿರುವಾಗ ನಾವು ಕೂಡ ಪ್ರಾಮಾಣಿಕವಾಗಿ ಪ್ರಯತ್ನ ಮಾಡಬೇಕು. ಇದರ ಬಗ್ಗೆ ಶಾಸ್ತ್ರೀಯ ಮನೋಭಾವ ಬೇಡ. ನಾನು ಒಮ್ಮೆ ಯಾರೋ ಒಬ್ಬ ಪ್ರೊಫೆಸರ್ ಹತ್ತಿರ ಹೋಗಿ ಇಂತಹವರು ನನಗೆ ಗೊತ್ತು. He is a very good man, he is an intell-ecual and rational man ಎಂದೆ ಅದಕ್ಕೆ ಅವರು Dose he drink ? ಎಂದು ಕೇಳಿದರು. ನಾನು ಹೌದು ಎಂದು ಹೇಳಿದೆ. That is why be is retional ಎಂದು ಅವರು ಹೇಳಿದರು.

ಶ್ರೀ ಪಾಟೀಲರೇ, ಇವತ್ತು ಭಾರತದಲ್ಲಿ ಕೆಲವು ಸಮಾಜಗಳಲ್ಲಿ ನಾವು ಅಲ್ಲಿ ಹೋಗಿ ಕುಡಿಯದೇ ಇದ್ದರೆ ಇದು ಯಾವ ಪುರಾತನ ಪ್ರಾಣಿ ಇಲ್ಲಿಗೆ ಬಂದಿದೆ ಎಂದು ಹೇಳುವವರೂ ಇದ್ದಾರೆ.

ಇಂತಹ ಸಮಾಜಗಳೂ ಇವೆ. ಇವರು ಏನೋ ಒಂದು ತರಹ ಪ್ರಾಣಿಗಳಿದ್ದ ಹಾಗೆ. ಇವತ್ತು ಹಳ್ಳಿಗಾಡುಗಳಲ್ಲಿ ದಿನನಿತ್ಯ ಕೂಲಿ ಮಾಡಿಕೊಂಡು ತನಗೆ ಬಂದ ದುಡ್ಡನ್ನು ಹಾಳು ಮಾಡಿಕೊಂಡು ತನ್ನ ಹೆಂಡತಿ ಮಕ್ಕಳನ್ನು ದಿನನಿತ್ಯ ಜೀವನಕ್ಕೆ ದುರಂತ ಮಾಡತಕ್ಕಂಥ ಜನಗಳ ಬಗ್ಗೆ ನಮ್ಮ ಚಿಂತನೆ ಹೋಗಲಿ. ಅವರದೇ ಆದ ರೀತಿಯಲ್ಲಿ ಎಂಜಾಯ್ ಮಾಡತಕ್ಕಂಥ ಸಣ್ಣ ಸಮಾಜ ಏನು ಇದೆ. ಆ ಬಗ್ಗೆ ನಾವು ತಲೆಕೆಡಿಸಿಕೊಳ್ಳುವುದು ಬೇಡ. ಈ ನೀತಿಯನ್ನು ಕರ್ಬ್ ಮಾಡಬಾರದು. ಇದು ಸಾಮಾನ್ಯವಾಗಿ ಎಲ್ಲಿ ಆಗುತ್ತದೆಂದು, ಈ ಲಿಬರ್ಟಿಯನ್ನು ಕರ್ಬ್ ಮಾಡಿದರು. ಇವತ್ತು ಮಧ್ಯಪಾನಕ್ಕೋಸ್ಕರ ಲಿಬರ್ಟಿಯನ್ನು ಕರ್ಬ್ ಮಾಡುತ್ತೀರಿ, ನಾಳೆ ರಿಲಿಜಿಯನ್‌ಗೆ ಕರ್ಬ್ ಮಾಡುತ್ತೀರಿ. ನಾಳೆ ನಿಮ್ಮ ಪಾರ್ಟಿಗೋಸ್ಕರ ಕರ್ಬ್ ಮಾಡುತ್ತೀರಿ. ಒಂದು ಸಾರಿ ಲಿಬರ್ಟಿಯನ್ನು ಜನತಂತ್ರವನ್ನು ಹಿಡಿದುಕೊಂಡು ಕೆಲಸ ಮಾಡಬೇಕೆಂದು ಬಂದರೆ, ಅದಕ್ಕಿಂತ ಬ್ಯುರೋಕ್ರಸಿ ಜಗತ್ತಿನಲ್ಲಿ ಮತ್ತೊಂದು ಇಲ್ಲ. ಆದರೆ ಅಂತಹ ಮದ ಬಂದಿದ್ದನ್ನು ಅನುಭವಿಸಿ ನೋಡಿದ್ದೇವೆ. ಯಾರೋ ಒಬ್ಬ ಕುಡಿದು, ಅವನ ಮನೆಯಲ್ಲಿ ಸತ್ತು ಹೋಗಬಹುದು, ಒಬ್ಬ ವ್ಯಾಪಾರಿ ಕುಡಿದರೆ ಆತನ ವ್ಯಾಪಾರ ಹಾಳಾಗಬಹುದು. ಆದರೆ ಇಡೀ ರಾಷ್ಟ್ರವನ್ನು ಕೈಯಲ್ಲಿ ಹಿಡಿದುಕೊಂಡವರು ಕುಡಿದು ಎಲ್ಲರನ್ನೂ ಕಂಟ್ರೋಲ್ ಮಾಡುತ್ತೇವೆಂದು ಹೇಳುತ್ತಾರೆ. ಇದು ಬಹಳ ಅಪಾಯ. ಈ ಅಪಾಯಗಳ ವಿರುದ್ಧ ಹೋರಾಟ ಮಾಡುವುದಕ್ಕೆ ಹೇಳಿದರು. ಒಂದು ಕಡೆ ಲಿಬರ್ಟಿಯನ್ನು ಉಳಿಸಿಕೊಳ್ಳಬೇಕಾದರೆ ಒಂದು ಸಣ್ಣ ವಿಸ್ಕಿಯನ್ನು ಕುಡಿಯಲೇಬೇಕಾಗುತ್ತದೆ. ಮಾನ್ಯ ಅಧ್ಯಕ್ಷರೇ, ಸರ್ಕಾರದ ಪರಿಯಿಂದ ಜನತಾ ಪಾರ್ಟಿಯ ವಿಚಾರ ಸೊಗಸಾಗಿದೆ. ಗಾಂಧೀಜಿ ಸ್ವತಃ ಇದ್ದಾಗಲೇ ಏನಿತ್ತು ಎಂಬುದು ಹಳೆಯ ಕಾಂಗ್ರೆಸ್ ಸ್ನೇಹಿತರಿಗೆ ಗೊತ್ತಿದೆ. ಆ ಮೇಲೆ ಕುಡಿಯದೇ ಇರತಕ್ಕಂಥ ಕೆಲವರು ಈ ಬಗ್ಗೆ ಟ್ಯಾಬೂಸ್. ಅಂದರೆ ಅವರಿಗೆ ಕುಡಿಯುವುದೇ ಗೊತ್ತಿರುವುದಿಲ್ಲ. ಅವನಿಗೆ ಕೇಳಿದರೆ ಸಾಕು ಹೇಳುತ್ತಾರೆ. ಇವನು ಮಹಾ ಕುಡುಕ ಎಂದು. ಯಾರೋ ಒಬ್ಬರು ಚುನಾವಣೆಗೆ ನಿಲ್ಲುತ್ತಾರೆಂದು ಇಟ್ಟುಕೊಳ್ಳಿ. ಅವನು ಪ್ರಾಮಾಣಿಕ ಇರುತ್ತಾನೆ, ಚೆನ್ನಾಗಿ ಕೆಲಸ ಮಾಡುತ್ತಾನೆ, ಬಡ್ಡಿಗಿಡ್ಡಿ ಎಲ್ಲಾ ತೆಗೆದುಕೊಂಡು, ಹರಿಜನ ಗಿರಿಜನರ ಜಮೀನನ್ನು ಸಹ ತೆಗೆದುಕೊಂಡು ಕುಳಿತಿರುತ್ತಾನೆ. ಅಂದರೆ ಇವರಿಗೆ ಮಜ್ಜಿಗೆ ಕುಡಿಸಿರುತ್ತಾನೆ. ಕ್ಯಾಲಿಫೋರ್ನಿಯಾ ಏನು ಹೇಳಿದರು. ನಮ್ಮಲ್ಲಿ ಎಷ್ಟು ಜನ ಫೂಲ್ಸ್ ಇದ್ದಾರೆ ಎಂದರೆ, ಯಾರಾದರೂ ಒಬ್ಬರನ್ನು ಹೊಗಳಬೇಕಾದರೆ, ಅವನು ಇವತ್ತು ನಾನ್-ವೆಜಿಟೇರಿಯನ್ ಮುಟ್ಟುವುದಿಲ್ಲ, ಎಂದು ಹೇಳುತ್ತಾನೆ. ಅವನ ಮನೆ ಹಾಳಾಗ ಆನೆಗಟ್ಟಲೆ ತಿನ್ನುತ್ತಾನೆ. ಅವನ ಒಳ್ಳೆಯತನಕ್ಕೆ ಎಷ್ಟು ನವಿರಾಗಿ ಜೋಡಿಸುತ್ತಾನೆ......

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೇ......

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅವರಿಂದ ನಿಮಗೆ ಸ್ಫೂರ್ತಿ ಬಂತೇ?......

ಶ್ರೀ ರಾಮಕೃಷ್ಣ ಹೆಗಡೆ.—ಅಲ್ಲ, ಅವರು ಒಂದು ಉದಾಹರಣೆ ಕೊಟ್ಟರು. ಅದನ್ನು ಕೇಳಿದ ಮೇಲೆ ನನಗೆ ಒಂದು ಘಟನೆ ನೆನಪಾಯಿತು. ಇದು ೧೯೫೦ನೇ ದಶಕದ ಕಾಲದಲ್ಲಿ ಆಗಿದ್ದುದು. ಪಂಡಿತ್‌ಜೀ ಅವರು ಇದನ್ನು ಅರಿತಿದ್ದರು. ಕಾಂಗ್ರೆಸ್ ವರ್ಕಿಂಗ್ ಕಮಿಟಿ, ಪಾರ್ಲಿಮೆಂಟ್ ಬೋರ್ಡ್‌ನಲ್ಲಿ ಬೇರೆ ಬೇರೆ ರಾಜ್ಯಗಳಿಂದ ಕಾಂಗ್ರೆಸ್ ಕ್ಯಾಂಡಿಡೇಟ್‌ಗಳನ್ನು ಆರಿಸತಕ್ಕಂಥ ಸಂದರ್ಭ. ಪಾರ್ಲಿಮೆಂಟ್ ಬೋರ್ಡ್ ಮೀಟಿಂಗ್ ನಡೆಯುತ್ತಿತ್ತು. ಯು.ಪಿ. ಲಿಸ್ಟ್ ಬಂತು. ಯು.ಪಿ. ಲಿಸ್ಟ್ ಬಂದಾಗ, ಎಲ್ಲರೂ ಟಿಕ್ ಮಾಡಿಕೊಂಡು ಬಂದರು. ಅದರಲ್ಲಿ ಕೆಲವನ್ನು ಪೆಂಡಿಂಗ್ ಇಡಿ ಅಂದರು. ಅದರಲ್ಲಿ ಒಬ್ಬರ ಹೆಸರು ಬಂತು. ಅವರ ಹೆಸರನ್ನು ನಾನು ಇಲ್ಲಿ ಹೇಳುವುದಿಲ್ಲ. ಅವರು ಪ್ರಸಿದ್ಧ ಕವಿ. ಹಾಗೂ ಲೇಖಕ. ಅವರ ಹೆಸರು ಬಂದ ತಕ್ಷಣ ಮುರಾರ್ಜಿಯವರು, ನೋಡಿ ಇವರಿಗೆ ಟಿಕೆಟ್ ಕೊಡುವುದಕ್ಕಾಗುವುದಿಲ್ಲ, ಇವರು ಕುಡುಕರು, ಕುಡಿಯುತ್ತಾರೆ ಎಂದು ನನ್ನ ಹತ್ತಿರ ಬಂದಿದೆ ಎಂದರು. ಆದರೆ ಪಂಡಿತ್‌ಜೀ ಅವರ ಹೇಳಿದರು, ಹಾಗಾದರೆ ಇದನ್ನು ಪೆಂಡಿಂಗ್ ಇಡಿ ಎಂದರು. ಇದಾದ ಮೇಲೆ ಮೂರು ದಿವಸದ ನಂತರ ಪೆಂಡಿಂಗ್ ಕೇಸನ್ನು ತಂದರು. ಅಷ್ಟರೊಳಗೆ ಪಂಡಿತ್‌ಜೀ ಅವರು ಏನು ಮಾಡಿದರು ಅಂದರೆ ಆಗ ಗೋವಿಂದ ವಲ್ಲಭ ಪಂತ್ ಅವರು ಮುಖ್ಯಮಂತ್ರಿಗಳಾಗಿದ್ದರು. ಇವರ ಹತ್ತಿರ ವಿಚಾರ ಹೇಳಿದರು. ಅವರು ಸ್ವಲ್ಪ ವಿಚಾರಗಳನ್ನು ತಿಳಿದುಕೊಂಡಿದ್ದರು.

ಈ ಪೆಂಡಿಂಗ್ ಕೇಸಸ್‌ನಲ್ಲಿ ಇವೆರಡೂ ಹೆಸರು ಬಂತು. ಆಗ ಪಂಡಿತ್‌ಜೀ ಅವರು ಗೋವಿಂದ ವಲ್ಲಭ ಪಂತ್ ಅವರೊಂದಿಗೆ ವಿಚಾರ ಮಾಡಿ, ಏನ್ರಿ, ಇದನ್ನು ಏನು ಮಾಡೋಣ ಎಂದರು. ಆಗ ಅವರು ತಮ್ಮದೇ ಆದ ಸ್ಟೈಲ್‌ನಲ್ಲಿ "ಸಾರ್ ಇವರು ಕುಡಿಯುತ್ತಾರೆ, ಆದರೆ ಹೊರಗಡೆ ತೋರಿಸಿಕೊಳ್ಳುವಷ್ಟು ಕುಡಿಯುವುದಿಲ್ಲ" ಎಂದು ಹೇಳಿದರು.......

ಶ್ರೀ ಜೆ. ಹೆಚ್. ಪಟೇಲ್.—ಮಾನ್ಯ ಅಧ್ಯಕ್ಷರೇ, ನಮ್ಮ ಸಮಾಜದಲ್ಲಿ ಕೆಲವು ಸೋಷಿಯಲ್ ಇಮೇಜಸ್ ಏನಿವೆ ಎಂದರೆ. ಇವನು ಸಮಾಜದಲ್ಲಿ ಕುಡಿಯುತ್ತಾನೆ, ಇವನು ಯಾವುದಕ್ಕೂ ಅನ್‌ಫಿಟ್. ನಾನ್-ವೆಜಿಟೇರಿಯನ್ ತೆಗೆದುಕೊಳ್ಳುತ್ತಾನೆ ಎನ್ನತಕ್ಕಂಥ ಭಾವನೆಗಳು ಬೆಳೆದು ಬಂದಿವೆ. ಆದರೆ ಇನ್ನೊಬ್ಬ ವೆಜಿಟೇರಿಯನ್. ನಾನ್ ಆಲ್ಕೋಹಾಲಿಸ್ಟ್, ಆದರೆ ಅವನು ಹಿಟ್ಲರ್ ಆದರೂ ಪರವಾಯಿಲ್ಲ, ಅವನು ಒಳ್ಳೆಯವನು. ಆದರೆ. ಈ ದೇಶದಲ್ಲಿ ಇಮೇಜ್ ಪ್ರೊಜೆಕ್ಷನ್ ಇದೆಯಲ್ಲ ಇದನ್ನು ಮಾಡತಕ್ಕಂಥ ಪತ್ರಕರ್ತರು ಏನಿದ್ದಾರೆ, ಅಯ್ಯೋ, ಅಯ್ಯೋ ಇವರನ್ನು ದೇವರೇ ಕಾಪಾಡಬೇಕು, ಇವರಷ್ಟು ಕುಡಿಯುವವರನ್ನು ಯಾರನ್ನೂ ನಾನು ನೋಡಿಯೇ ಇಲ್ಲ. ಸ್ವತಃ ಯಾರ ಬಗ್ಗೆಯಾದರೂ ಬರೆಯುವಾಗ, ಕುಡಿಯುವುದಿಲ್ಲ ಎಂದರೆ ಅವನು ದೊಡ್ಡ ಮನುಷ್ಯ ಎಂದು ಬರೆಯುತ್ತಾರೆ. ಇದು ಎಂತಹ ಜಾದು ಇರಬಹುದು, ಎಲ್ಲಿ ಅವನ ವೀಕ್‌ನೆಸ್ ಇಲ್ಲವೋ. ಆಗ ಅವನ ಮನಸ್ಸಿನಲ್ಲಿ ನಾನು ದೊಡ್ಡವನು ಎಂಬ ಭಾವನೆ ಇರುತ್ತದೆ ಆದರೆ ಕುಡಿಯತಕ್ಕಂಥವನ ಬಗ್ಗೆ ಸಣ್ಣವನು ಎಂಬ ಭಾವನೆ ಬೆಳೆದು ಬಂದಿದೆ, ಆದ್ದರಿಂದ ನಾವು ಬಹಳ ಕೆಟ್ಟು ಹೋಗಿದ್ದೇವೆ. ಯಾವುದೋ ಒಂದು ಮೌಲ್ಯವನ್ನು ಕಳೆದುಕೊಂಡಿದ್ದೇವೆ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಇದು "ಎನಗಿಂತ ಕಿರಿಯರಿಲ್ಲ, ಶಿವಭಕ್ತರಿಗಿಂತ ದೊಡ್ಡವರು ಇಲ್ಲ" ಎಂದು ಅವರ ಧ್ಯೇಯ...

ಶ್ರೀ ಜೆ. ಹೆಚ್. ಪಟೇಲ್.—ನೀವೂ ಸ್ವಲ್ಪ ಜರ್ನಲಿಸ್ಟೇ. ಆದುದರಿಂದ ನಾನು ಹೇಳುವುದು. ಇದನ್ನು ನಾವು ಸರಿಯಾದ ರೀತಿಯಲ್ಲಿ ಡಿಸ್ಕಸ್ ಮಾಡಿದ್ದೇವೆ. ಇದರ ಗಂಭೀರತೆ ಏನಿದೆ, ಇದರ ದುರಂತ ಏನಿದೆ. ಅದರ ಕರಾಳ ಚಿತ್ರ ಏನಿದೆ ಅದನ್ನು ನೋಡತಕ್ಕ ಕಾಲ ಈಗ ಬಂದಿದೆ. ಅದನ್ನು ನಾವು ನೋಡಬೇಕು. ಅದನ್ನು ನೋಡುವ ಕಾಲ ಬಂದಿರುವಾಗ, ಇದರಿಂದ ಬಿಡುಗಡೆ ಹೊಂದುವುದಕ್ಕೆ ನಾವು ಏನು ಮಾಡಬೇಕು ಈ ಕ್ಯಾನ್ಸರ್‌ನಿಂದ ಬಿಡುಗಡೆ ಪಡೆಯುವುದಕ್ಕೆ ಏನು ಮಾಡಬೇಕು? ಅದನ್ನೆ ವೈಜ್ಞಾನಿಕವಾದಂಥ. ಸಾಧುವಾದಂಥ. ಸಾಮಾಜಿಕ. ರಾಜಕೀಯ ಕ್ರಮಗಳನ್ನು ತೆಗೆದುಕೊಳ್ಳಬೇಕು. ಮಾನ್ಯ ಬಸವಲಿಂಗಪ್ಪನವರು ಹೇಳಿದರು. ಪಾರ್ಟಿಗಳು ಎಂದು ಹೇಳಿದರು. ಆ ಪಾರ್ಟಿ, ಈ ಪಾರ್ಟಿ ಎಂದು ಅಲ್ಲ ನಾವು ಇವತ್ತು ಭ್ರಷ್ಟಾಚಾರದ ಬಗ್ಗೆ ಬಹಳ ನಿರ್ಗಳವಾಗಿ ವ್ಯಾಖ್ಯಾನ ಮಾಡಬಹುದು ಈ ದೇಶದಲ್ಲಿ ಅದನ್ನು ಮಾಡುತ್ತಾರೆ, ಈಗಿನ ಚುನಾವಣಾ ವ್ಯವಸ್ಥೆಯಲ್ಲಿ ಯಾರದ್ದೇ ಒಂದು ಸದಸ್ಯತ್ವ ಅವರು ಲೋಕಸಭಾ ಮೆಂಬರ್ ಆಗಿರಲಿ. ವಿಧಾನಸಭಾ ಮೆಂಬರ್ ಆಗಿರಲಿ. his membership itself is borne out of corrupt practices. There is no single human being ever finding in this country who can claim that his membership is exempted from corruption. ಸತ್ಯವನ್ನು ಯಾರೂ ಮಾತನಾಡುವುದಕ್ಕೆ ತಯಾರಾಗಿಲ್ಲ. ಅವರು ನೂರು ಕೋಟಿ ರೂಪಾಯಿಗಳು ಖರ್ಚ ಮಾಡುತ್ತಾರೆ ಎಂದು ನಾವು ಹತ್ತಾರು ಲಕ್ಷ ರೂಪಾಯಿಗಳನ್ನು ಖರ್ಚು ಮಾಡುತ್ತೇವೆ. ನಾವು ಹತ್ತಾರು ಲಕ್ಷ ರೂಪಾಯಿ ಖರ್ಚು ಮಾಡುತ್ತೇವೆ ಎಂದು ಇನ್ನೊಬ್ಬ ಐದಾರು ಸಾವಿರ ರೂಪಾಯಿ ಖರ್ಚು ಮಾಡುತ್ತಾನೆ ಅವರ ನಾವು ನಮ್ಮ ನೀರು ಎಂದು ತಿಕ್ಕಿದ್ದೇ ತಿಕ್ಕಿದ್ದು ಎಲ್ಲಾ ಪಕ್ಷದವರೂ ದುಡ್ಡನ್ನು ಕಲೆಕ್ಟ್ ಮಾಡುತ್ತಾರೆ. ಮಾಡದೇ ಇರುವವರು ಯಾರು. ನನ್ನ ಫ್ರೆಂಡ್ ರಮೇಶ್‌ಕುಮಾರ್‌ರವರು ಹೇಳಿದರು, ಹೆಂಡದ ಲಾಬಿ ಎಲ್ಲಾ ಪಕ್ಷಗಳನ್ನೂ ಕಂಟ್ರೋಲ್‌ನಲ್ಲಿ ಇಟ್ಟುಕೊಂಡಿದ್ದೆ ಎಂದು ಹೆಂಡದ ಲಾಬಿ ಇಟ್ಟುಕೊಳ್ಳದಿದ್ದರೆ, ಸಿಮೆಂಟ್ ಲಾಬಿ ಇಟ್ಟುಕೊಳ್ಳುತ್ತದೆ. ಸಿಮೆಂಟ್ ಲಾಬಿ ಇಲ್ಲದಿದ್ದರೆ ಗ್ರೌಂಡ್ ನಟ್ ಆಯಿಲ್ ಲಾಬಿ ಇಟ್ಟುಕೊಳ್ಳುತ್ತದೆ. ಲಾಬಿ ಕಂಟ್ರೋಲ್‌ನಲ್ಲಿ ಇಟ್ಟುಕೊಳ್ಳುತ್ತದೆ ಎಂದರೆ ಹಣದ ಬಲದಿಂದ ಕಂಟ್ರೋಲ್‌ನಲ್ಲಿ ಇಟ್ಟುಕೊಳ್ಳುತ್ತಾರೆ. ಇವತ್ತು ಬಿರ್ಲಾ ಮತ್ತು ಟಾಟಾ ಅವರ ಸಂಬಂಧ ಇರುವ ವಿಧಾನಸಭಾ ಸದಸ್ಯರು, ಲೋಕಸಭಾ ಸದಸ್ಯರು ಎಷ್ಟು ಜನ ಇದ್ದಾರೆ, ಯಾರಿದ್ದಾರೆ. ಅದು ನನಗೆ ಗೊತ್ತಿಲ್ಲ, ನಿಮಗೂ ಗೊತ್ತಿಲ್ಲ. ಟೋಟಲ್ ಸಿಸ್ಟಮ್ ಆ ರೀತಿ ಇದೆ. ತಮ್ಮನ್ನು ಈ ಸಿಸ್ಟಮ್‌ನ್ನು ಸೇಫ್ ಗಾರ್ಡ್ ಮಾಡಿಕೊಳ್ಳತಕ್ಕಂಥವರು ಹೋಗಿ ಹೆಂಡವನ್ನು ಹಂಚುವುದಿಲ್ಲ, ಈ ಸಿಸ್ಟಮ್‌ನಲ್ಲಿ

ಬದುಕತಕ್ಕಂಥ ಸಣ್ಣ ಹುಳುಗಳು ಹೆಂಡ ಹಂಚುವುದು. ದೇವಸ್ಥಾನ ಕಟ್ಟುವವರು, ಮಂದಿರ ಕಟ್ಟುವವರು, ಬಡ್ಡಿ ತೆಗೆದುಕೊಳ್ಳುವವರು ಹೆಂಡ ಹಂಚುವುದಿಲ್ಲ, ಇಡೀ ಸಮಾಜದಲ್ಲಿರತಕ್ಕಂಥ ಇಂಡಸ್ಟ್ರಿಯಲ್ ಬೇಸ್ ಏನಿದೆ, ಹಳ್ಳಿಗಾಡಿನಲ್ಲಿರತಕ್ಕಂಥ ಬೇಸ್ ಏನಿದೆ ಅದನ್ನು ಡೆಸ್ಟ್ರಾಯ್ ಮಾಡುವವರು ಹೆಂಡ ಹಂಚುವುದಿಲ್ಲ. ಇವುಗಳನ್ನು ಈ ದೃಷ್ಟಿಯಿಂದ ನೋಡಬೇಕು. ನಮ್ಮ ಸರಕಾರ ಇವತ್ತು ಬದ್ಧವಾಗಿದೆ. ನೀವು ಏತಕ್ಕೆ ಪ್ರೊಹಿಬಿಷನ್ ಇಂಟ್ರಡ್ಯೂಸ್ ಮಾಡಬಾರದು ಎಂದು ಕೇಳಿದರೆ ಅದಕ್ಕೆ ಮತ್ತೆ ಎ.ಬಿ.ಸಿ.ಡಿ.ಯಿಂದ ಹೇಳಬೇಕಾಗುತ್ತದೆ. ನಮ್ಮ ರೆಸಲ್ಯೂಷನ್‌ನ್ನು ಇವತ್ತು ಕೇಂದ್ರ ಸರಕಾರದವರು ಒಪ್ಪಿಕೊಂಡು, ಅವರು ನಿಜವಾಗಿಯೂ ಇದರ ಬಗ್ಗೆ ಏನನ್ನಾದರೂ ಮಾಡಿದರೆ ಪರವಾಗಿಲ್ಲ. ಇವತ್ತು ನಾವು ಒಂದು ಸಮಿತಿ ಮಾಡುತ್ತೇವೆ. ವಿಧಾನಮಂಡಲದ ಸದಸ್ಯರು ಹಾಗೂ ಈ ಬಗ್ಗೆ ತಜ್ಞರು ಇವರುಗಳನ್ನು ಸೇರಿಸಿಕೊಂಡು ಮಾಡುತ್ತೇವೆ. ಮಾನ್ಯ ಕೆ. ಹೆಚ್. ಪಾಟೀಲರು ಹೇಳಿದಂತೆ, ಕುಡಿಯುವವರೂ ಇರಲಿ, ಕುಡಿಯದೇ ಇರುವವರೂ ಇರಲಿ. ಶಂಕರಾಚಾರ್ಯರಿಗೆ ಕೇಳಿದರಂತೆ, ನೀವು ಹೆಂಗಸಿನ ಬಗ್ಗೆ ಮಾತನಾಡುವುದು ಹೇಗೆ ಸಾಧ್ಯ. ನಿಮಗೆ ಏನೂ ಗೊತ್ತೇ ಇಲ್ಲ ಎಂದು, ಆಗ ಅವರು ಬೇರೆ ರೀತಿಯಿಂದ ಜ್ಞಾನ ಪಡೆದುಕೊಳ್ಳುತ್ತಾರೆ, ಬೇರೆ ರೀತಿಯಲ್ಲಿ ಜ್ಞಾನ ಪಡೆದುಕೊಳ್ಳುವುದಕ್ಕೆ ಬರುತ್ತದೆ. ಅವರು ಪರಕಾಯ ಪ್ರವೇಶ ಮಾಡಿದರು. ಜ್ಞಾನ ಸ್ವತಃ ಮಾಡಿದರೇ ಬರಬೇಕೆಂದು ಏನೂ ಇಲ್ಲ, ಆದರೆ ಸ್ವತಃ ಮಾಡಿದರೆ ಒಳ್ಳೆಯದು, ಈಗಲೂ ಸಹ ಟೈಮ್ ಮೀರಿಲ್ಲ. ಫಾರ್ ಎಕ್ಸ್‌ಪರಿಮೆಂಟ್ ಯಾರಾದರೂ ಕುಡಿಯಬಹುದು. ಪ್ಲೀಸ್ ಅಂಡರ್ ಸ್ಟ್ಯಾಂಡ್ ಮಿ. ಫಾರ್ ಎಕ್ಸ್‌ಪರಿಮೆಂಟ್ ಮಾಡಬಹುದು. ಈಗ ಒಂದು ''ಇಸಮ್'' ಬಂದಿದೆ, There is one "ism" in this country, it is called as "experiencialism". ಈ ಎಗ್ಜಿಸ್ಟೆನ್ಸ್ ಪ್ರೊಪೋಜ್ ಮಾಡಿದಾಗ ಎಕ್ಸ್‌ಟೆನ್‌ಶಿಯಾಲಿಜಿಯಂ ಮತ್ತು, ಸೋಶಿಯಾಲಜಿಯಂ, ಕ್ಯಾಪಿಟಾಲಿಜಿಯಂ ಅಂತಹ ಸೂಪರ್ ಥಿಯರಿಗಳು ಬಂದವು ಎಕ್ಸ್‌ಪಿರಿಯನ್‌ಷಿಯಾಜಿಯಂ ಬಂದಿದೆ. ಆದ್ದರಿಂದ ನೀವು ಮತ್ತು ಬಸವಲಿಂಗಪ್ಪನವರು ಸೇರಿಕೊಂಡು ಗುಟ್ಟಾಗಿ ಏನಾದರೂ ಮಾಡಿದರೆ ಒಳ್ಳೆಯದು. ಜಸ್ಟ್ ಫಾರ್ ಎಕ್ಸ್‌ಪಿರಿಮೆಂಟ್. ಅಧ್ಯಕ್ಷರೇ ನಾನು ಕನ್‌ಕ್ಲೂಡ್ ಮಾಡುತ್ತಾ ಈ ನಿರ್ಣಯದ ಅರ್ಥ ನಿಜವಾಗಿಯೂ ಸಾರ್ಥಕವಾಗಬೇಕಾದರೆ ಕೇಂದ್ರ ಸರ್ಕಾರ ನಮ್ಮ ವಿಚಾರವನ್ನು ಒಪ್ಪಿ ಇದರ ಮೇಲೆ ಬಲವಾದ ಅಧಿಕಾರವಿರತಕ್ಕಂಥ ಒಂದು ಕಮಿಟಿಯನ್ನು ಮಾಡಿದರೆ ಆಗ ಈ ರಾಷ್ಟ್ರದಲ್ಲಿ ಏನ್ನೊಂದು ಬೇಕಾಬಿಟ್ಟಿ ಮಾದಕ ವಸ್ತುಗಳು ಇವೆಯೋ ಅವು ಸ್ವಲ್ಪ ಮಟ್ಟಿಗೆ ನಿಯಂತ್ರಣಗೊಳ್ಳುತ್ತವೆ. ಇನ್ನು ಏನಾಗಿದೆ ಎಂದರೆ ನಮ್ಮಲ್ಲಿ ಕೆಲವು ಶಾಲಾ ಕಾಲೇಜುಗಳಲ್ಲಿ ಡ್ರಗ್ ಅಡಿಕ್ಟ್ಸ್ ನಡೆಯುತ್ತಿದೆ. ಅದನ್ನು ನಾನೀಗ ಹೇಳುವುದಕ್ಕೆ ಹೋಗುವುದಿಲ್ಲ. ನಮ್ಮ ಮಾನವನಲ್ಲಿ ಅನೇಕ ದುರ್ಗುಣಗಳು ಇವೆ, ದೌರ್ಬಲ್ಯಗಳು ಇವೆ. ಈ ಗುಣಗಳು ಸಹಜವಾಗಿ ಬಂದಿರತಕ್ಕಂಥವುಗಳು. ಆ ದುರ್ಬಲತೆಯನ್ನು ತೆಗೆಯುವುದಕ್ಕೆ ಸಾಮಾನ್ಯ ಮನುಷ್ಯನ ದೃಷ್ಟಿಯಿಂದ ಆಲೋಚನೆ ಮಾಡಬೇಕೇ ಹೊರತು ಗಾಂಧೀಜಿಯವರು ಹಾಗೆ ಮಾಡಿದ್ದಾರೆ. ನೀವು ಅದೇ ಮಾಡಿ, ಸ್ವಾಮಿ ವಿವೇಕಾನಂದರು ಮದುವೆಯೇ ಆಗಲಿಲ್ಲ ನೀವೇತಕ್ಕೆ ಮದುವೆ ಆದಿರಿ? ಇವೆಲ್ಲಾ ಅವಾಸ್ತವಿಕ. ಅಂತಹವರು ಮಹಾನ್ ಪಂಡಿತರು, ಧೀಮಂತರು ಇರುತ್ತಾರೆ, ಅವರಂತೆ ನಾವು ಮಾಡುವುದಕ್ಕೆ ಆಗುವುದಿಲ್ಲ. ಅದಕ್ಕೆ ಮಹಾತ್ಮ ಗಾಂಧೀಜಿಯವರು ಮಾಡಿದ್ದನ್ನು ಸ್ವಲ್ಪ ಬೇರೆಯವರು ಮಾಡಿದ್ದನ್ನು ಸ್ವಲ್ಪ ನಾವು ಮಾಡಬೇಕಾಗುತ್ತದೆ. ಆದರೆ ಪೂರಾ ಹಿಟ್ಲರ್ ಆಗುವುದು ಬೇಡ. ಅದಕ್ಕೂ ಒಂದು ಲಿಮಿಟ್ ಇಡಬೇಕು. You may be a Vyabhichari. I admire you if you are a Sadachari. ಮನುಷ್ಯ ಸದಾಚಾರಿಯಾಗಿದ್ದರೆ ಒಳ್ಳೆಯದು ಆಯಿತು ಅವನ ಪೂರ್ತಿ ಇತಿಹಾಸ ನೋಡಿ ಕೊಂಡು ಬಂದು ದೇವರುಗಳೆಂದು ಅನಿಸಿಕೊಂಡು ಬಂದು, ವ್ಯಭಿಚಾರಿಯಾದರೆ ಏನು ಎಂದು ಆಯಿತು. ಆದರೆ ಮನುಷ್ಯ ಅತ್ಯಾಚಾರಿಯಾಗುವುದು ಬೇಡ. ಆದರೆ ನಾವು ಕಂಡಿತದಲ್ಲಿ all those who take drinks are not drunkards. ಕೆಲವು ಡೆಫನೇಶನ್ಸನ್ನು ಕೂಡಿಸಿ ನಾನು ಪಾಠ ಹೇಳಿಕೊಡಬೇಕಾಗುತ್ತದೆ. ಡ್ರಂಕರ್ ಆಗಬೇಡ. ನಿನ್ನ ಪ್ರಾರಂಭ, ನಿನ್ನ ಆರೋಗ್ಯ ನಿನ್ನ ಸಮಾಜ, ನಿನ್ನ ರಾಷ್ಟ್ರ ನಿನ್ನ ಕುಟುಂಬಕ್ಕೆ ಧಕ್ಕೆ ಬರದೇ you will have to *surrender to the* authority. ಈ ಒಂದು ಸ್ಥಿತಿ ಬರುವುದಕ್ಕೆ ರಾಷ್ಟ್ರದಲ್ಲಿ ಒಂದು ಒಳ್ಳೆಯ ವಾತಾವರಣ ನಿರ್ಮಾಣ ಮಾಡುವುದಕ್ಕೆ ನನ್ನ ಒಂದು ಸಣ್ಣ ಅಮೆಂಡ್‌ಮೆಂಟ್‌ನೊಂದಿಗೆ ಈ ನಿರ್ಣಯವನ್ನು ಮಂಡಿಸುತ್ತಿದ್ದೇನೆ. ''ಮಧ್ಯಪಾನಕ್ಕೆ ಸಂಬಂಧಿಸಿದಂತೆ ರಾಜ್ಯದಲ್ಲಿನ ಪ್ರಸ್ತುತ ನೀತಿ ಹಾಗೂ ರಾಷ್ಟ್ರದಲ್ಲಿನ ಪ್ರಸ್ತುತ ನೀತಿ ಹಾಗೂ ವ್ಯವಸ್ಥೆ ಶ್ರೀಸಾಮಾನ್ಯರ ಹಾಗೂ ಬಡ ಜನರ ಹಿತಕ್ಕೆ ಮಾರಕವಾಗಿ ಪರಿಣಮಿಸಿರುವುದರಿಂದ ಈಗಾಗಲೇ ನಡೆದಿರುವ ದುರಂತಗಳು ಅವುಗಳ ಬಗ್ಗೆ ನೇಮಿಸಲ್ಪಟ್ಟ

ವಿಚಾರಣಾ ಆಯೋಗಗಳ ಶಿಫಾರಸ್ಸುಗಳ ಹಿನ್ನಲೆಯಲ್ಲಿ ಬೇರೆ ಬೇರೆ ರಾಜ್ಯಗಳಲ್ಲಿ ಇರುವ ನೀತಿ ಹಾಗೂ ವ್ಯವಸ್ಥೆಯನ್ನು ಅಧ್ಯಯನ ಮಾಡಿ ಪಾನನಿರೋಧವೂ ಸೇರಿದಂತೆ ಬದಲಿ ನೀತಿ ಹಾಗೂ ವ್ಯವಸ್ಥೆಯನ್ನು ಸಾಧ್ಯಾಸಾಧ್ಯತೆಯನ್ನು ಪರಿಶೀಲಿಸಿ ಸೂಕ್ತ ಶಿಫಾರಸ್ಸು ಮಾಡಲು ವಿಧಾನಮಂಡಲದ ಪ್ರತಿನಿಧಿಗಳನ್ನು ಒಳಗೊಂಡ ಒಂದು ಉನ್ನತಾಧಿಕಾರಿ ಸಮಿತಿಯನ್ನು ನೇಮಿಸಬೇಕೆಂದು ಈ ಸಭೆಯು ನಿರ್ಣಯಿಸುತ್ತದೆ.

ಶ್ರೀ ಬಸವನಗೌಡ ಪಾಟೀಲ್.—ಮಾನ್ಯ ಪಾಟೀಲರೇ 'ಮಾದಕ ವಸ್ತುಗಳು' ಇದನ್ನು ಸಹ ಸೇರಿಸಿದರೆ ಒಳ್ಳೆಯದು.

ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಡಿಬೇಟ್ ಪೂರ್ಣ ಫಾಲೋ ಮಾಡಿದಂತೆ ಕಾಣಲಿಲ್ಲ. ನಾವೆಲ್ಲ ಮಾತನಾಡುವಾಗ ಹೆಂಡದ ಬಗ್ಗೆ ನೀವು ವಿಷ ಕೊಡುತ್ತಿದ್ದೀರಿ. ಅದು ಬೇಡ ಒಳ್ಳೆಯ ಹೆಂಡ ಕೊಡಿ ಎಂದು ಹೇಳಿದ್ದೆವು, ಆದರೆ ಅದಕ್ಕೆ ನೀವು ಉತ್ತರ ಕೊಡಲಿಲ್ಲ.

ಶ್ರೀ ಜೆ. ಹೆಚ್. ಪಟೇಲ್.—ಡ್ರಗ್ ಅಡಿಕ್ಟ್ಸ್ ಬಗ್ಗೆ ಬೇಕಾದರೆ ಆಮೇಲೆ ಸೇರಿಸಬಹುದು. ಇದರಲ್ಲಿ ಬೇಡ. ಈ ನಿರ್ಣಯವನ್ನು ಸರ್ಕಾರದ ವತಿಯಿಂದ ನಾವು ಬೆಂಬಲಿಸುತ್ತಿದ್ದೇವೆ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಸ್ಟೇಟ್ ಪಾಲಿಸಿಯನ್ನು ಇದರಲ್ಲಿ ಡಿಸ್‌ಕಷನ್ ಮಾಡುವುದಕ್ಕೆ ಆಗುವುದಿಲ್ಲ ಮೊದಲು ಇದನ್ನು ಮಾಡೋಣ. ನಾನು ನಿಮಗೆ ಮೋರ್ ಕಾಂಪ್ಲಿಮೆಂಟ್ಸ್ ಕೊಡುತ್ತಿದ್ದೇನೆ.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಅಧ್ಯಕ್ಷರೇ ಮಾನ್ಯ ಮಂತ್ರಿಗಳು ಭಾಷಣ ಮಾಡಿದ ಮೇಲೆ ಇಂತಹ ಒಂದು ನಿರ್ಣಯದ ಅವಶ್ಯಕತೆ ಇರಲಿಲ್ಲ ಎನ್ನುವ ಪ್ರಶ್ನೆ ಬರುತ್ತದೆ. ಆದರೆ ಎಲ್ಲರೂ ಒಪ್ಪಿಕೊಂಡಿದ್ದೀರಿ ಮಾಡಿ. ಕಾರಣ ಕುಡಿಸಲೇಬೇಕೆಂದು ಹೊರಟಿದ್ದೀರೆ ಕುಡಿಯಲು ತೀರ್ಮಾನ ಮಾಡಿದ್ದೀರಿ, ಮಾಡಿ ಆದರೆ ಎಷ್ಟು ಕುಡಿಯಬೇಕು ಕಂಠ ಪೂರ್ತಿ ಕುಡಿಯಬೇಕೋ ಅರ್ಧ ಕಂಠ ಕುಡಿಯಬೇಕೋ ಎನ್ನುವುದು ಒಂದು ಅಳತೆ ಬೇಕು. ನೀವು ಭಾಷಣ ಚೆನ್ನಾಗಿ ಮಾಡಿದ್ದೀರಿ, ಮಾಡಿ. ನೀವೆಲ್ಲ ಸೇರಿ ಒಂದು ಸಮಿತಿ ಮಾಡಬೇಕೆಂದು ಹೇಳಿದ್ದೀರಿ ಅದನ್ನು ಮಾಡಿ ಅವರೇನು ಮಾಡುತ್ತಾರೋ ನೋಡಿಕೊಂಡು ಆಮೇಲೆ ನಾವೊಂದು ತೀರ್ಮಾನ ಮಾಡೋಣ. ಎಂದು ಹೇಳಿದಂತಾಯಿತು. ಒಂದು ವಿಚಾರವನ್ನು ನಾನು ಹೇಳುತ್ತೇನೆ. ಈ ಹೆಂಡದ ಅಂಗಡಿಗಳನ್ನು ತೆರೆಯುವುದಕ್ಕೆ ಆ ನಿರುದ್ಯೋಗಿಗಳಿಗೆ ಲೈಸನ್ಸ್ ಕೊಡುವುದರಿಂದ ಅನ್-ಎಂಪ್ಲಾಯ್‌ಮೆಂಟ್ ಪ್ರಾಬ್ಲಮ್ ಸಾಲ್ವ್ ಆಗುತ್ತದೆಂದು ಹೇಳುವುದು ಸರಿಯಲ್ಲ. ನಿರುದ್ಯೋಗ ಸಮಸ್ಯೆಗಳನ್ನು ಬಗೆಹರಿಸುವುದಕ್ಕೆ ಬೇರೆ ರೀತಿಯಲ್ಲಿ ತಾವು ಗಮನ ಕೊಡಿ. ಹೆಂಡದ ಅಂಗಡಿಗಳನ್ನು ತೆರೆಯುವುದಕ್ಕೆ ಇವರಿಗೆ ಲೈಸನ್ಸ್ ಕೊಡುವುದರ ಕಡೆ ತಮ್ಮ ಗಮನವನ್ನು ಕೊಡಬೇಡಿ ಎಂದು ಹೇಳುತ್ತೇನೆ.

ಶ್ರೀ ಜೆ.ಹೆಚ್.ಪಟೇಲ್.–ಮದ್ಯ ಮಾರುವ ಅಂಗಡಿಗಳಲ್ಲಿ ರೀಟೇಲ್ ಆಗಿ ಮದ್ಯವನ್ನು ಮಾರಾಟ ಮಾಡಬಾರದೆಂದು ತಿಳಿಸಿದ್ದೇವೆ. ಆ ರೀತಿ ರೀಟೇಲ್ ಆಗಿ ಮದ್ಯ ಮಾರುವ ಅಂಗಡಿಗಳ ಲೈಸೆನ್ಸ್‌ಗಳನ್ನು ಕ್ಯಾನ್ಸಲ್ ಮಾಡುವುದಕ್ಕೆ ಕ್ರಮ ಕೈಗೊಂಡಿದ್ದೇವೆ- ಮತ್ತು ಯಾವ ಕಡೆ ನಿಯಮಾವಳಿಗಳನ್ನು ಮೀರಿ ಅಂಗಡಿಗಳನ್ನು ತೆರೆದಿದ್ದಾರೋ ಅವುಗಳನ್ನು ರದ್ದು ಮಾಡುತ್ತೇವೆ ಹಾಗೂ ಆತಂಕಕಾರಿಯಾಗುವಂಥ ಸ್ಥಳಗಳಲ್ಲಿ ಇರುವ ಮದ್ಯದ ಅಂಗಡಿಗಳನ್ನು ನಿಲ್ಲಿಸತಕ್ಕಂಥ ಕೆಲಸವನ್ನು ಮಾಡಿದ್ದೇವೆ.

(ಗೊಂದಲ)

ಅಧ್ಯಕ್ಷರು.—ತಿದ್ದುಪಡಿಯಾದ ಈ ಖಾಸಗಿ ನಿರ್ಣಯವನ್ನು ಸಭೆಯ ಮತಕ್ಕೆ ಹಾಕುತ್ತೇನೆ.

''ಮದ್ಯಪಾನಕ್ಕೆ ಸಂಬಂಧಿಸಿದಂತೆ ರಾಜ್ಯದಲ್ಲಿನ ಮತ್ತು ರಾಷ್ಟ್ರೀಯ (ಮತ್ತು ರಾಷ್ಟ್ರೀಯ ಎಂಬ ಪದವನ್ನು ಹೆಚ್ಚಿಗೆ ಸೇರಿಸಲಾಗಿರುತ್ತದೆ) ಪ್ರಸ್ತುತ ನೀತಿ ಹಾಗೂ ವ್ಯವಸ್ಥೆ ಶ್ರೀಸಾಮಾನ್ಯರ ಹಾಗೂ ಬಡ ಜನರ ಹಿತಕ್ಕೆ ಮಾರಕವಾಗಿ ಪರಿಣಮಿಸಿರುವುದರಿಂದ, ಈಗಾಗಲೇ ನಡೆದಿರುವ ದುರಂತಗಳು, ಅವುಗಳ ಬಗ್ಗೆ ನೇಮಿಸಲ್ಪಟ್ಟ ವಿಚಾರಣಾ ಆಯೋಗಗಳ ಶಿಫಾರಸ್ಸುಗಳ ಹಿನ್ನೆಲೆಯಲ್ಲಿ ಬೇರೆ ಬೇರೆ ರಾಜ್ಯಗಳಲ್ಲಿ ಇರುವ ನೀತಿ ಹಾಗೂ ವ್ಯವಸ್ಥೆಯ ಸಾಧ್ಯಾಸಾಧ್ಯತೆಯನ್ನು ಪರಿಶೀಲಿಸಿ ಸೂಕ್ತ ಶಿಫಾರಸ್ಸು ಮಾಡಲು ವಿಧಾನಮಂಡಲದ ಪ್ರತಿನಿಧಿಗಳನ್ನು ಒಳಗೊಂಡ ಒಂದು ಉನ್ನತಾಧಿಕಾರಿ ಸಮಿತಿಯನ್ನು ನೇಮಿಸಬೇಕೆಂದು ಈ ಸಭೆಯು ನಿರ್ಣಯಿಸುತ್ತದೆ.''

ಸಭೆಯು ಈ ಮೇಲ್ಕಂಡ ನಿರ್ಣಯವನ್ನು ಸರ್ವಾನುಮತದಿಂದ ಅಂಗೀಕರಿಸಿತು.

ಅಧ್ಯಕ್ಷರು.—ಸಭೆಯು ಮುಕ್ತಾಯವಾಯಿತು.

ಸಭೆಯು ೨ ಗಂಟೆ ೨೭ ನಿಮಿಷಕ್ಕೆ ಮುಕ್ತಾಯವಾಯಿತು, ಪುನಃ ಸಭೆಯು ದಿನಾಂಕ ೨೭-೧-೧೯೮೮ರಂದು, ಬುಧವಾರ ಬೆಳಿಗ್ಗೆ ೧೧ ಗಂಟೆಗೆ ಸೇರುತ್ತದೆ,